ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 5 ಸೋಮವಾರ 2022

ಸಂಪುಟ: 43 | ಸಂಚಿಕೆ: 228 | ಪುಟಗಳು: 10

₹4

ದೂರವಾಣಿ: 2496520, 2496521, 2496526, 2496527, 2496528, **FAX:** 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ **Ph:** 2431774, ಡಿ. ದೇವರಾಜ ಅರಸು ರಸ್ತೆ, **Ph:** 2428695

ಸುದ್ದಿ ಮತ್ತು ಫೋಟೋಗೆ: **news@mysurumithra.com**

ಜಾಹೀರಾತು: **ad@mysurumithra.com**



ಮೈಸೂರು ಮಿತ್ರ

ಪ್ರತಿನಿತ್ಯ ಭಗವದ್ಗೀತೆ ಒಂದು ಅಧ್ಯಾಯ ಓದುವುದನ್ನು ರೂಢಿಸಿಕೊಳ್ಳಿ

'ಸಹಸ್ರಗಳ ಸಂಪೂರ್ಣ ಭಗವದ್ಗೀತಾ ಪಾರಾಯಣ ಮಹಾಯಜ್ಞ'ಕ್ಕೆ ಚಾಲನೆ ನೀಡಿ, ಗಣಪತಿ ಸಚ್ಚಿದಾನಂದ ಶ್ರೀಗಳ ಕರೆ





ಮೈಸೂರು,ಡಿ.4(ಆರ್‌ಕೆಬಿ)– ಭಾರತದ ಸನಾತನ ಧರ್ಮದ ಪವಿತ್ರ ಗಂಥವಾಗಿರುವ ಭಗವದ್ಗೀತೆಯು ಅತ್ಯಂತ ಮೌಲ್ಯವುಳ್ಳದ್ದಾಗಿದೆ. ಪ್ರತಿದಿನ ಭಗವದ್ಗೀತೆಯ ಒಂದು ಅಧ್ಯಾಯ ಓದಬೇಕು. ಕನಿಷ್ಠ ಪಕ್ಷ ಒಂದು ಶ್ಲೋಕವನ್ನಾದರೂ ಪಠಣ ಮಾಡಬೇಕು. ಇದು ನಮ್ಮ ಕರ್ತವ್ಯವಾಗಬೇಕು ಎಂದು ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಇಂದಿಲ್ಲಿ ಕರೆ ನೀಡಿದರು.

ಮೈಸೂರಿನ ಅವಧೂತ ದತ್ತಪೀಠದ ನಾದಮಂಟಪದಲ್ಲಿ ಭಾನುವಾರ 'ಸಹಸ್ರಗಳ ಸಂಪೂರ್ಣ ಭಗವದ್ಗೀತಾ ಪಾರಾಯಣ ಮಹಾಯಜ್ಞ'ಕ್ಕೆ ಚಾಲನೆ ನೀಡಿದ ನಂತರ ಭಕ್ತರಿಗೆ ಆಶೀರ್ವಚನ ನೀಡಿ, ಅವರು ಮಾತನಾಡಿದರು. ಭಗವದ್ಗೀತೆಯನ್ನು ಭಕ್ತಿ, ಶ್ರದ್ಧೆಯಿಂದ ಪಾರಾಯಣ ಮಾಡಬೇಕು. ಯಾವುದೇ ವಿಷಯಾಸಕ್ತರಾಗದೆ ಭಕ್ತಿಯಿಂದ ಅಭ್ಯಾಸ ಮಾಡಬೇಕು. ಆಡಂಬರಕ್ಕಾಗಿ ಗೀತೆಯನ್ನು ಓದಬಾರದು ಎಂದು ಹೇಳಿದರು.

ಪರಮಾತ್ಮನನ್ನು ನಂಬಿದರೆ ಎಂದಿಗೂ ಕೇಡಾಗುವುದಿಲ್ಲ. ಆ ದೇವನನ್ನು ಎಲ್ಲರೂ ನಂಬಿ, ಆತನಲ್ಲಿ ವಿಶ್ವಾಸವಿಡಬೇಕು. ಕಷ್ಟವೇ ಬರಲಿ, ಸುಖವೇ ಬರಲಿ, ವಿಚಲಿತರಾಗದೆ ಪರಮಾತ್ಮನನ್ನು ನಂಬಿ ಪ್ರಾರ್ಥನೆ ಮಾಡಬೇಕು. ಆಗ ದೇವನು ನಿಮ್ಮನ್ನು ರಕ್ಷಿಸುತ್ತಾನೆ ಎಂದು ತಿಳಿಸಿದರು.

ಯಾರು ಶ್ರದ್ಧೆ ಮತ್ತು ಭಕ್ತಿಯಿಂದ ಗೀತ ಪಠಣ ಮಾಡುವರೋ ಅವರ ಕಷ್ಟ, ಕ್ಲೇಶಗಳು, ಸಮಸ್ಯೆಗಳು ದೂರವಾಗುತ್ತವೆ ಎಂಬುದನ್ನು ಒಂದು ಸಣ್ಣ ಕಥೆಯ ಮೂಲಕ ಶ್ರೀಗಳು ತಿಳಿಸಿದರು.

ಭಗವದ್ಗೀತೆಯನ್ನು ತೋರಿಕೆಗಾಗಿ ಅಧ್ಯಯನ ಮಾಡಿದರೆ ಪ್ರಯೋಜನವಿಲ್ಲ. ಅದರಲ್ಲಿ ಶ್ರೀ ಕೃಷ್ಣ ಬೋಧಿಸಿರುವುದನ್ನು ಮನನ ಮಾಡಿಕೊಂಡು, ಅದರಂತೆ ನಡೆದುಕೊಳ್ಳಲು ಪ್ರಯತ್ನಿಸಬೇಕು. ಆಗ ಮಾತ್ರ ಪರಮಾತ್ಮ ಕೈಬಿಡದೆ ನಿಮ್ಮ ರಕ್ಷಣೆಗೆ ನಿಲ್ಲುತ್ತಾನೆ ಎಂದರು.

ನೀವಷ್ಟೇ ಅಲ್ಲ ಕನಿಷ್ಠ ಒಂದೈದು ಮಂದಿಗಾದರೂ ಗೀತೆಯ ಬಗ್ಗೆ ತಿಳಿಸಿಕೊಟ್ಟು ಅವರು ಕೂಡಾ ಭಗವದ್ಗೀತೆ ಓದುವಂತೆ ಪ್ರೇರೇಪಿಸುವ ಮೂಲಕ ಗೀತೆಯ ಸಾರ ಜಗತ್ತಿನಾದ್ಯಂತ ಬೆಳೆಯುವಂತಾಬೇಕು ಎಂದ ಶ್ರೀಗಳು, ಭಗವದ್ಗೀತೆ ಕಲಿತು ಪ್ರತಿ ನಿತ್ಯ ಪಠಣ ಮಾಡಿದರೆ ಭವಿಷ್ಯದಲ್ಲಿ ಒಳಿತಾಗುತ್ತದೆ. ಆಧ್ಯಾತ್ಮಿಕ, ಶಾರೀರಿಕವಾಗಿಯೂ ಪ್ರಯೋಜನವಾಗುತ್ತದೆ. ಆನಂದ ಮತ್ತು ಮುಕ್ತಿ ಸಿಗುತ್ತದೆ. ಭಗವದ್ಗೀತೆ ಪಠಣದಿಂದ ಇಡೀ ವಿಶ್ವಕ್ಕೆ ಒಳಿತಾಗಲಿದೆ ಎಂದರು.

ಇದೇ ವೇಳೆ ಭಗವದ್ಗೀತೆಯನ್ನು ಪ್ರಚಾರ ಮಾಡುವುದಾಗಿ ಭಕ್ತರಿಂದ ಸ್ವಾಮೀಜಿ ಪ್ರತಿಜ್ಞೆ ಮಾಡಿಸಿದರು.

ನಂತರ ಮಾತನಾಡಿದ ಕಿರಿಯ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ, ಇಲ್ಲಿ ನಡೆಯುತ್ತಿರುವ ರೀತಿಯಲ್ಲಿ ಗೀತಾ ಜಯಂತಿ ಮತ್ತೆಲ್ಲೂ ನಡೆಯಲು ಸಾಧ್ಯವೇ ಇಲ್ಲದಂತೆ ಅದ್ಭುತವಾಗಿ ನಡೆಯುತ್ತಿದೆ. ಭಗವದ್ಗೀತೆಯನ್ನು ಪೂಜೆ ಮಾಡಿ, ಮತ್ತೆ ಬೀರುವಿನಲ್ಲಿಟ್ಟರೆ ಪ್ರಯೋಜನವಿಲ್ಲ. ಪ್ರತಿದಿನ ಓದಬೇಕು. ದಿನಕ್ಕೊಂದು ಅಧ್ಯಾಯವನ್ನಾದರೂ ಓದಬೇಕು ಎಂದು ಕರೆ ನೀಡಿದರು. ಇದೇ ವೇಳೆ ಭಕ್ತರು ತಾವು ಪ್ರತಿದಿನ ಒಂದು ಅಧ್ಯಾಯವನ್ನಾದರೂ ಪಾರಾಯಣ ಮಾಡುವ ಸಂಕಲ್ಪ ಮಾಡಿದರು.

ಇದೇ ಸಂದರ್ಭದಲ್ಲಿ ಗೀತೆಯನ್ನು ಪೂರ್ಣವಾಗಿ ಕಂಠಪಾಠ ಮಾಡಿದ್ದ ಆರು ವರ್ಷದ ವಿಷ್ಣುದತ್ತ ಹಾಗೂ 75 ವರ್ಷದ ಎಸ್.ವಿ.ಪಿ.ಸತ್ಯನಾರಾಯಣಮೂರ್ತಿ ಅವರನ್ನು ಗಣಪತಿ ಸಚ್ಚಿದಾನಂದ ಶ್ರೀಗಳು, ಹಾಗೂ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ ವಿಶೇಷವಾಗಿ ಗೌರವಿಸಿದರು.

'ಸಹಸ್ರಗಳ ಸಂಪೂರ್ಣ ಭಗವದ್ಗೀತಾ ಪಾರಾಯಣ'

ಮೈಸೂರು, ಡಿ.4(ಆರ್‌ಕೆಬಿ)– ಮೈಸೂರಿನ ಅವಧೂತ ದತ್ತಪೀಠ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಇಂದು ಹಬ್ಬದ ಸಡಗರ. ಗೀತಾ ಜಯಂತಿ ಅಂಗವಾಗಿ ಭಾನುವಾರ ಗಣಪತಿ ಆಶ್ರಮದ ನಾದಮಂಟಪದಲ್ಲಿ ನಡೆದ 'ಸಹಸ್ರಗಳ ಸಂಪೂರ್ಣ ಭಗವದ್ಗೀತಾ ಪಾರಾಯಣ ಮಹಾಯಜ್ಞ'ದಲ್ಲಿ ಸಹಸ್ರಾರು ಭಕ್ತರು ಭಾಗವಹಿಸಿ, ಭಗವದ್ಗೀತೆಯ ಪಾರಾಯಣ ಮಾಡಿದರು. ಶ್ರೀಗಣಪತಿ ಸಚ್ಚಿದಾನಂದ ಸ್ವಾಮೀಜಿ ಹಾಗೂ ಕಿರಿಯ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರು ಪಾರಾಯಣ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಭಗವದ್ಗೀತೆಯನ್ನು ಕಂಠಪಾಠ ಮಾಡಿದ್ದ 1600 ಮಂದಿ ಹಾಗೂ ಭಗವದ್ಗೀತೆ ಗ್ರಂಥವನ್ನು ನೋಡಿ ಸುಲಲಿತವಾಗಿ ಪಾರಾಯಣ ಮಾಡಿದ 2000 ಮಂದಿ ಸೇರಿ ಒಟ್ಟು 3,600 ಮಂದಿ ಏಕಕಾಲದಲ್ಲಿ ಪಾರಾಯಣ ಮಾಡುವ ಮೂಲಕ ಭಕ್ತಿ ಮೆರೆದರು.

ಗಣಪತಿ ಸಚ್ಚಿದಾನಂದ ಶ್ರೀಗಳು ಪ್ರತೀ ಸಾಲಿಗೂ ಹೋಗಿ ಪಾರಾಯಣ ಮಾಡುತ್ತಿರುವವರ ಮೇಲೆ ಪುಷ್ಪವೃಷ್ಟಿ ಮಾಡಿ ಆಶೀರ್ವದಿಸಿದರು. ಆರು ವರ್ಷದ ಮಕ್ಕಳಿಂದ ಹಿಡಿದು 80 ವರ್ಷದ ವಯೋವೃದ್ಧದವರೆಗೂ ಗೀತಾ ಕಂಠಪಾಠ ಮಾಡಿರುವುದು ಹಾಗೂ ನಿರರ್ಗಳವಾಗಿ ಪಠಿಸುವ ಮೂಲಕ ಶ್ರೀಗಳ ಗಮನ ಸೆಳೆದರು.

ಮೈಸೂರಿನ ದತ್ತಪೀಠದಲ್ಲಿ ಇಂದು ಹನುಮ ಜಯಂತಿ

- ಕಾರ್ಯಸಿದ್ಧಿ ಹನುಮನಿಗೆ ಅಭಿಷೇಕ, ಭಜನೆ
- ನಾಳೆ ದತ್ತಾತ್ರೇಯ ಸ್ವಾಮಿಗೂ ವಿಶೇಷ ಅಭಿಷೇಕ



ಮೈಸೂರು, ಡಿ.4(ಆರ್‌ಕೆಬಿ)– ಶ್ರೀ ದತ್ತಾತ್ರೇಯ ಜಯಂತಿ ಅಂಗವಾಗಿ ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಅವಧೂತ ದತ್ತಪೀಠದಲ್ಲಿ ನಾಳೆ (ಡಿ.5)ಯಿಂದ ಡಿ.8ರ ವರೆಗೆ ಹಲವು ಕಾರ್ಯಕ್ರಮಗಳು ನಡೆಯಲಿವೆ.

ಡಿ.5ರಂದು ಹನುಮ ಜಯಂತಿ, ಬೆಳಗ್ಗೆ 9 ಗಂಟೆಗೆ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನಿರ್ಮಿಸಿರುವ ಕಾರ್ಯಸಿದ್ಧಿ ಹನುಮ ದೇವಸ್ಥಾನದ 10ನೇ ವಾರ್ಷಿಕೋತ್ಸವದ ಪ್ರಯುಕ್ತ ಹನುಮನಿಗೆ ಅಭಿಷೇಕ. 11 ಗಂಟೆಗೆ ಹನುಮ ಜಯಂತಿ ವಿಶೇಷ ಪೂಜೆ, ಸಂಜೆ 7 ಗಂಟೆಗೆ ಹನುಮ ಭಜನೆ ನಡೆಯಲಿದೆ. ಡಿ.6ರಂದು ಬೆಳಗ್ಗೆ 9 ಗಂಟೆಗೆ ಶ್ರೀ ದತ್ತಾತ್ರೇಯಸ್ವಾಮಿಗೆ ಶ್ರೀಚಕ್ರ ಪೂಜೆ ಮತ್ತು ಮಂಟಪೋತ್ಸವ. ಪಂಚಾಮೃತ ಅಭಿಷೇಕ, ಬೆಳಗ್ಗೆ 11ಕ್ಕೆ ಅನಘ ವ್ರತ, ಸಂಜೆ 7 ಗಂಟೆಗೆ ಅನಘಾಸ್ವಾಮಿ ವ್ರತ ವೈಭವ, ಬೆಂಗಳೂರಿನ ಸಂಗೀತ ನಿತ್ಯ ಭಾರತಿ ಅಕಾಡೆಮಿ ಸಹಯೋಗದಲ್ಲಿ ಹೈದರಾಬಾದ್‌ನ ಶ್ರೀ ದತ್ತ ನಾಟ್ಯಾಲಯದಿಂದ ನಾದಮಂಟಪದಲ್ಲಿ ನೃತ್ಯ ನಾಟಕ. ಡಿ.7ರಂದು ಬೆಳಗ್ಗೆ 8 ಗಂಟೆಗೆ ದತ್ತಾತ್ರೇಯ ಹೋಮ, 9 ಗಂಟೆಗೆ ಶ್ರೀಚಕ್ರ ಪೂಜೆ, 10 ಗಂಟೆಗೆ ದತ್ತಾತ್ರೇಯಸ್ವಾಮಿಗೆ ಕ್ಷೀರಾಭಿಷೇಕ, 11ಕ್ಕೆ ಅನಘ ವ್ರತ, ಸಂಜೆ 4 ಗಂಟೆಗೆ ದತ್ತಾತ್ರೇಯಸ್ವಾಮಿಯ ರಥೋತ್ಸವ. ಸಂಜೆ 7 ಗಂಟೆಗೆ ನಾದಮಂಟಪದಲ್ಲಿ ಗಣಪತಿ ಸಚ್ಚಿದಾನಂದ ಶ್ರೀಗಳಿಂದ ದತ್ತಾತ್ರೇಯ ಭಜನೆ. ಡಿ.8ರಂದು ದತ್ತಾತ್ರೇಯ ಜಯಂತಿ, ಪೂರ್ಣಿಮೆ ಪ್ರಯುಕ್ತ ಬೆಳಗ್ಗೆ 7 ಗಂಟೆಗೆ ಪವಮಾನ ಮತ್ತು ದತ್ತಾತ್ರೇಯ ವಜ್ರ ಮಂತ್ರ ಹೋಮ, 9 ಗಂಟೆಗೆ ಶ್ರೀ ಚಕ್ರ ಪೂಜೆ ಮತ್ತು ಮೂಲ ವಿರಾಟ್ ದತ್ತಾತ್ರೇಯಸ್ವಾಮಿಗೆ ಪೂಜೆ. 10 ಗಂಟೆಗೆ ಭಕ್ತರಿಂದ ಸಾಮೂಹಿಕ ತೈಲಾಭಿಷೇಕ, ಟಿ.ಆರ್.ಸೇತುರಾಮನ್ ನೇತೃತ್ವದಲ್ಲಿ ಕೊಚ್ಚಿ ಆಶ್ರಮ ಭಜನಾ ತಂಡದಿಂದ ದತ್ತಾತ್ರೇಯ ನಾಮ ಸಂಕೀರ್ತನ. ಬೆಳಗ್ಗೆ 11ಕ್ಕೆ ಅನಘ ವ್ರತ, ಸಂಜೆ 6 ಗಂಟೆಗೆ ಸಪ್ತರ್ಷಿ ಸರೋವರದಲ್ಲಿ ದತ್ತಾತ್ರೇಯ ಸ್ವಾಮಿಯ ತೆಪ್ಪೋತ್ಸವ. ಸಂಜೆ 7ಕ್ಕೆ ನಾದಮಂಟಪದಲ್ಲಿ ಕಾಕಡಾರತಿ ನಡೆಯಲಿದೆ ಎಂದು ಅವಧೂತ ದತ್ತಪೀಠದ ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲು ಕೌಶಲ್ಯಾಧಾರಿತ ಶಿಕ್ಷಣ ಅಗತ್ಯ



ಮೈಸೂರು, ಡಿ.4(ಆರ್‌ಕೆಬಿ)– ಕೌಶಲ್ಯಧಾರಿತ ಶಿಕ್ಷಣ ಪಡೆದಾಗ ಮಾತ್ರ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗುತ್ತದೆ ಎಂದು ಮೈಲ್ಯಾಕ್ ಮಾಜಿ ಅಧ್ಯಕ್ಷ ಹೆಚ್.ಎ.ವೆಂಕಟೇಶ ತಿಳಿಸಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಯೋಗಿ ನಾರಾಯಣ ಬಲಿಜ (ಬಣಜಿಗ) ಸಂಘ ಹಾಗೂ ನೇತಾಜಿ ಕೆರಿಯರ್ ಅಕಾಡೆಮಿ ಸಂಯುಕ್ತ ಆಶ್ರಯದಲ್ಲಿ 'ಸ್ಪರ್ಧಾತ್ಮಕ ಪರೀಕ್ಷೆಗಳು ಅಂದು: ಇಂದು' ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ನಿರಂತರವಾಗಿ ಕಲಿಕೆಗಳಲ್ಲಿ ತೊಡಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಸಾಮರ್ಥ್ಯ ಪಡೆದಾಗ ಮಾತ್ರ ಉದ್ಯೋಗ ಪಡೆಯಲು ಸಾಧ್ಯವಾಗುತ್ತದೆ. ಓದುತ್ತಿರುವಾಗಲೇ ಉದ್ಯೋಗದ ಬಗ್ಗೆ ಚಿಂತಿಸಿ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ ಎಂದರು.

ಇಂದು ಬಹು ದೊಡ್ಡ ಸಮಸ್ಯೆ ಎಂದರೆ ನಿರುದ್ಯೋಗ, ಉದ್ಯೋಗ ದಕ್ಕಿಸಿಕೊಳ್ಳುವುದನ್ನು ಸವಾಲಾಗಿ ಸ್ವೀಕರಿಸಿ ಸ್ಪರ್ಧಾತ್ಮಕ ಜಗತ್ತಿನಲ್ಲಿ ಪೈಪೋಟಿ ನಡೆಸುವುದು ಅನಿವಾರ್ಯವಾಗಿದೆ. ಗ್ರಾಮಾಂತರ ಹಾಗೂ ಬಡ ಕುಟುಂಬದಿಂದ ಬಂದ ಯುವಕರು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವುದನ್ನು ಕಾರ್ಯಾಗಾರಗಳ ಮೂಲಕ ಜ್ಞಾನ ಸಂಪಾದಿಸಬೇಕಾಗಿದೆ ಎಂದು ಹೇಳಿದರು.

ನೇತಾಜಿ ಕೆರಿಯರ್ ಅಕಾಡೆಮಿ ಆಡಳಿತಾಧಿಕಾರಿ ಪ್ರೊ.ಸುಮಿತ್‌ಕುಮಾರ್, ಸಂಪನ್ಮೂಲ ವ್ಯಕ್ತಿಗಳಾಗಿ ಪ್ರೊ.ನಾಗರಾಜು ಬಿಜಗನಹಳ್ಳಿ, ಪಿಎಸ್‌ಐ ಎಸ್.ಸಾಗರ್, ವಿಜ್ಞಾನಿ ಡಾ.ಮಹೇಶ್, ಉಪನ್ಯಾಸಕ ಡಾ.ಟಿ.ರಮೇಶ್ ಮಾತನಾಡಿದರು. ಶ್ರೀ ಯೋಗಿ ನಾರೇಯಣ ಬಣಜಿಗ (ಬಲಿಜ) ಸಂಘದ ಅಧ್ಯಕ್ಷ ಎಂ.ನಾರಾಯಣ, ಪದಾಧಿಕಾರಿಗಳಾದ ಜಿ.ರಮೇಶ್, ಕೆ.ಚಂದ್ರಶೇಖರ್, ವಿಜಯಕುಮಾರ್, ಎಚ್.ಕೆ.ಜಗನ್ನಾಥ್, ಎಚ್.ವಿ.ನಾಗರಾಜು, ಟಿ.ಎಸ್.ರಮೇಶ್, ಎಂ.ನಾಗರಾಜ್, ನಂಜಪ್ಪ ಇತರರು ಉಪಸ್ಥಿತರಿದ್ದರು.

ಇಂದಿನಿಂದ ಡಿ.19ರವರೆಗೆ ಶ್ರೀ ಹನುಮ ಜಯಂತಿ ಮಹೋತ್ಸವ

ಮೈಸೂರು,ಡಿ.4(ಆರ್‌ಕೆಬಿ)–ಪ್ರತೀ ವರ್ಷದಂತೆ ಈ ವರ್ಷವೂ ಮೈಸೂರಿನ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಸೋಮವಾರದಿಂದ (ಡಿ.5) ಡಿ.19ರವರೆಗೆ ಶ್ರೀ ಹನುಮಜಯಂತಿ ಮಹೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಇದರ ಅಂಗವಾಗಿ 15 ದಿನಗಳ ಕಾಲ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಡಿ.5ರಂದು ಸಂಜೆ 5.30ಕ್ಕೆ ಮೇಲುಕೋಟೆ ಎಂ.ಎಸ್.ರಮ್ಯಶ್ರೀ ಮತ್ತು ಸಾಗರ ವೃಂದದಿಂದ ಸ್ಯಾಕ್ಸೊಫೋನ್, ಸಂಜೆ 7ಕ್ಕೆ ಕರ್ನಾಟಕ ಪೊಲೀಸ್ ಬ್ಯಾಂಡ್, ಕರ್ನಾಟಕ ಶಾಸ್ತ್ರೀಯ ವಾದ್ಯವೃಂದದಿಂದ ವಾದ್ಯಮಂಜರಿ.

ಡಿ.6ರಂದು ಸಂಜೆ 5–30ಕ್ಕೆ ಶ್ರೀ ಗುರು ಕಲಾ ಶಾಲೆ ತಂಡದಿಂದ ಭಕ್ತಿಗೀತೆ, ಸಂಜೆ 7ಕ್ಕೆ ಬಾಲರಾಜ್ ತಂಡದಿಂದ ಸುಗಮಸಂಗೀತ.

ಡಿ.7ರಂದು ಸಂಜೆ 5–30ಕ್ಕೆ ನಿಂಬುಜಾದೇವಿ ಭಜನಾ ಮಂಡಳಿ ದೇವರನಾಮ, ಸಂಜೆ 7ಕ್ಕೆ ಬಿಳಿಕೆರೆ ಬಿ.ಎಸ್.ಗಂಗಾಧರಾಚಾರ್ ಮತ್ತು ವೃಂದದಿಂದ ಹರಿಕಥೆ. ಡಿ.8ರಂದು ಸಂಜೆ 5–30ಕ್ಕೆ ಸುಘೋಷ ಭಜನಾ ಮಂಡಳಿಯಿಂದ ಭಕ್ತಿಗೀತೆಗಳು, ಸಂಜೆ 7ಕ್ಕೆ ಸಂಗೀತ ನಿಧಿ ವಿದ್ಯಾಭೂಷಣ ಮತ್ತು ವೃಂದದಿಂದ ಭಕ್ತಿಸಂಗೀತ.

ಡಿ.9ರಂದು ಸಂಜೆ 5.30ಕ್ಕೆ ಹರಿವಾಯು ಭಜನಾ ಮಂಡಳಿ ದೇವರನಾಮ, ಸಂಜೆ 7ಕ್ಕೆ ನೃತ್ಯಗಿರಿ ನೃತ್ಯಶಾಲೆಯಿಂದ ಭರತನಾಟ್ಯ.

ಡಿ.10ರಂದು ಸಂಜೆ 5.30ಕ್ಕೆ ಪಿ.ಪ್ರಕಾಶ್ ಮೆಲೋಡಿಸ್‌ನಿಂದ ಭಕ್ತಿಗೀತೆಗಳು, ಸಂಜೆ 7ಕ್ಕೆ ಕಲಾರತ್ನ ವಿದ್ವಾನ್ ರಾವ್ ಆರ್. ಶರತ್ ಮತ್ತು ವೃಂದದಿಂದ ಭಕ್ತಿ ಸಂಗೀತ. ಡಿ.11ರಂದು ಸಂಜೆ 5.30ಕ್ಕೆ ನಾದ ವಿದ್ಯಾಲಯದ ಮಿತ್ರಾ ನವೀನ್ ಶಿಷ್ಯ ವೃಂದದಿಂದ ಭಕ್ತಿಸಂಗೀತ, ನೃತ್ಯರೂಪಕ.

ಡಿ.12ರಂದು ಸಂಜೆ 5.30ಕ್ಕೆ ಚಾಮುಂಡೇಶ್ವರಿ ಸುಗಮಸಂಗೀತ ವತಿಯಿಂದ ಭಕ್ತಿಗೀತೆ, ಸಂಜೆ 7ಕ್ಕೆ ಎ.ವಿ.ದತ್ತಾತ್ರೇಯ, ಆರ್.ಮೋಹನ್, ಎಂ.ವಿ. ಶಾಂತಕುಮಾರ್ ಮತ್ತು ವೃಂದದಿಂದ ವೇಣು, ವೀಣಾ, ವಯೋಲಿನ್.

ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ



ಡಿ.13ರಂದು ಸಂಜೆ 6 ಗಂಟೆ ನಂತರ ಶ್ರೀ ಸೀತಾರಾಮ ಕಲ್ಯಾಣ ಮಹೋತ್ಸವ ಜರುಗುವುದು. ಅಂದೇ ಸಂಜೆ 5.30ಕ್ಕೆ ನವಚೈತ್ರ ಕಲಾ ತಂಡದಿಂದ ದೇವರನಾಮ, ಸಂಜೆ 7ಕ್ಕೆ ಕಲ್ಯಾಣೋತ್ಸವ ಪ್ರಯುಕ್ತ ಅರಮನೆ ದೇವಾಲಯದ ನಾದಸ್ವರ ವಿದ್ವಾಂಸರಿಂದ ನಾದಸ್ವರ.

ಡಿ.14ರಂದು ಸಂಜೆ 5.30ಕ್ಕೆ ರಾಘವೇಂದ್ರ ರತ್ನಾಕರ್ ಅವರಿಂದ ಭಕ್ತಿಗೀತೆಗಳು, ಸಂಜೆ 7ಕ್ಕೆ ಸ್ವಪ್ನಾ ಸುಂದರ್ ಸುಗಮಸಂಗೀತ.

ಡಿ.15ರಂದು ಸಂಜೆ 5.30ಕ್ಕೆ ಲಾಸ್ಯ ರಂಜನಿ ನೃತ್ಯಶಾಲೆ ಜ್ಯೋತಿ ಹೆಗಡೆ ಮತ್ತು ಶಿಷ್ಯ ವೃಂದದಿಂದ ಸುಗಮಸಂಗೀತ, ಸಂಜೆ 7 ಗಂಟೆಗೆ ಕವಿತಾ ಕಾಮತ್ ಮತ್ತು ವೃಂದದಿಂದ ಸುಗಮಸಂಗೀತ.

ಡಿ.16ರಂದು ಬೆಳಗ್ಗೆ 8 ಗಂಟೆ ನಂತರ ಶ್ರೀ ರಾಮ ದೇವರ ಪಟ್ಟಾಭಿಷೇಕ ಮಹೋತ್ಸವ, ಅಂದು ಸಂಜೆ 5.30ಕ್ಕೆ ಶ್ರೀ ಮೌನೇಶ ಸಂಗೀತ ಮತ್ತು ಸಾಂಸ್ಕೃತಿಕ ಅಕಾಡೆಮಿ ಟ್ರಸ್ಟ್‌ನ ಉಮಾಪತಿ ವೃಂದದ ಸುಗಮ ಸಂಗೀತ, ಸಂಜೆ 7ಕ್ಕೆ ಗಾನಭಾರತಿ ಸಂಗೀತ ನೃತ್ಯ ಶಾಲೆಯಿಂದ ಭರತನಾಟ್ಯ.

ಡಿ.17ರಂದು ಸಂಜೆ 4 ಗಂಟೆ ನಂತರ ಶ್ರೀ ಸೀತಾರಾಮ ಲಕ್ಷ್ಮಣ ಹನುಮಂತ ದೇವರ ಉತ್ಸವವು ರಾಜ ಬೀದಿಯಲ್ಲಿ ನಾದಸ್ವರ ಹಾಗೂ ಭಾರತ್ ಬ್ಯಾಂಡ್‌ನೊಂದಿಗೆ ವೈಭವದಿಂದ ನಡೆಯಲಿದೆ. ಅಂದು ಸಂಜೆ 5.30ಕ್ಕೆ ಎಂ.ಬಿ.ಅನಂತಸ್ವಾಮಿ ಸಾಂಸ್ಕೃತಿಕ ಸೇವಾ ಟ್ರಸ್ಟ್‌ನಿಂದ ಭಕ್ತಿಗೀತೆಗಳು. ಸಂಜೆ 7ಕ್ಕೆ ಸುಮಂತ ವಶಿಷ್ಠ ಮತ್ತು ವೃಂದದ ಭಕ್ತಿಗೀತೆಗಳು. ಡಿ.18ರಂದು ಸಂಜೆ 7 ಗಂಟೆ ನಂತರ ಶ್ರೀ ಸೀತಾರಾಮ ಲಕ್ಷ್ಮಣ ಹನುಮಂತ ದೇವರ ಉಯ್ಯಾಲೋತ್ಸವವು ಹೂವಿನ ಮಂಟಪದಲ್ಲಿ ನಡೆಯಲಿದೆ. ಅಂದು ಸಂಜೆ 5.30ಕ್ಕೆ ಯಜ್ಞೇಷ ಆಚಾರ್ ವೃಂದದ ಭಕ್ತಿಸಂಗೀತ, ಸಂಜೆ 7ಕ್ಕೆ ಸಮುದ್ಯತಾ ಕಲಾಸಂಸ್ಥೆಯ ಎಂ.ಪಿ.ನಾಗಶ್ರೀ ವೃಂದದಿಂದ ಭರತನಾಟ್ಯ. ಡಿ.19ರಂದು ಮೂಲ ದೇವರ ಸಹಿತ ಶ್ರೀ ಸೀತಾರಾಮ ಲಕ್ಷ್ಮಣ ಹನುಮಂತ ದೇವರಿಗೆ ತೀರ್ಥಸ್ನಾನ ಹಾಗೂ ಡೋಲೋತ್ಸವ ಏರ್ಪಡಿಸಲಾಗಿದೆ. ಅಂದು ಸಂಜೆ 5.30ಕ್ಕೆ ಲಲಿತಾ ಪರಮೇಶ್ವರಿ ಭಜನಾ ಮಂಡಳಿಯಿಂದ ಭಜನೆ, ಸಂಜೆ 7ಕ್ಕೆ ಪೂರ್ವಜ ವಿಶ್ವನಾಥ ವೃಂದದಿಂದ ಸುಮಸಂಗೀತ.

ದೇವಸ್ಥಾನದಲ್ಲಿ ಹನುಮಜಯಂತಿ ಪ್ರಯುಕ್ತ ನಡೆಯಲಿರುವ ಅಭಿಷೇಕ, ಪೂಜೆ ಉತ್ಸವಾದಿ, ಸಾಂಸ್ಕೃತಿಕ ಕಾರ್ಯಕ್ರಮಗಳ ನಂತರ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ. ಅಲ್ಲದೆ, ಪ್ರತಿದಿನ ದೇವಸ್ಥಾನದಲ್ಲಿ ಹೋಮ ಹವನಾದಿಗಳು ನಡೆಯುತ್ತವೆ. ಹೋಮ ಹವನ ಸಂಕಲ್ಪ ಮಾಡಿಸುವವರು ದೇವಸ್ಥಾನದಲ್ಲಿ ವಿಚಾರಿಸಬಹುದು. ಭಕ್ತರು ಧನ, ಧಾನ್ಯ ಸಹಾಯ ಮಾಡಬಹುದಾಗಿದ್ದು, ನೀಡಿದ ಎಲ್ಲಾ ಬಗೆಯ ಸಹಾಯಕ್ಕೆ ಅಧಿಕೃತ ರಶೀದಿಯನ್ನು ದೇವಸ್ಥಾನದ ಪಕ್ಕದಲ್ಲಿರುವ ಅರಮನೆ ಮುಜರಾಯಿ ದೇವಾಲಯಗಳ ವ್ಯವಸ್ಥಾಪಕರ ಬಳಿ ಪಡೆದುಕೊಳ್ಳಬಹುದು.

ನಾಳೆ ಶ್ರೀ ಸುತ್ತೂರು ಕ್ಷೇತ್ರದಲ್ಲಿ ಶಿವ ದೀಪೋತ್ಸವ


ಮೈಸೂರು, ಡಿ.4– ಶ್ರೀ ಸುತ್ತೂರು ಕ್ಷೇತ್ರದಲ್ಲಿ ಡಿ.6ರಂದು ಸಂಜೆ ಶಿವ ದೀಪೋತ್ಸವ (ಕೃತ್ತಿಕೋತ್ಸವ)ವನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಏರ್ಪಡಿಸಿದೆ. ಸಂಜೆ 6ಕ್ಕೆ ಜೆಎಸ್‌ಎಸ್ ವಸತಿ ಶಾಲಾ ಸಂಗೀತ ಶಿಕ್ಷಕರು ಹಾಗೂ ಮಕ್ಕಳಿಂದ ಸಾಮೂಹಿಕ ಪ್ರಾರ್ಥನೆ ನಡೆಯಲಿದೆ. 6.35ಕ್ಕೆ ಜಾತ್ರಾ ಮಹೋತ್ಸವ ಪ್ರಸಾರ ರಥಕ್ಕೆ ಚಾಲನೆ ನೀಡಲಾಗುವುದು. ರಾತ್ರಿ 7ಕ್ಕೆ ಸಾಹಿತಿ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಪ್ರೊ.ಎಂ. ಕೃಷ್ಣೇಗೌಡ 'ಬೆಳಕಿನ ಉತ್ಸವ' ಕುರಿತು ಉಪನ್ಯಾಸ ನೀಡಲಿದ್ದಾರೆ. ರಾತ್ರಿ 8ಕ್ಕೆ ಮಹಾಮಂಗಳಾರತಿ, ಪ್ರಾಕಾರೋತ್ಸವ ಹಾಗೂ ದೀಪೋತ್ಸವ ಜರುಗಲಿವೆ. ಈ ಕಾರ್ಯಕ್ರಮವನ್ನು https://www.face book.com/JSSMVP, http://Youtube.com/c/JSSMahavidyapee thaonline ಮೂಲಕ ಆನ್‌ಲೈನ್‌ನಲ್ಲಿ ವೀಕ್ಷಿಸಬಹುದಾಗಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.4–ಚೆಸ್ಕಾಂ ವತಿಯಿಂದ ಡಿ.6ರಂದು ಮಂಗಳವಾರ ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿದ್ದು, ಮೆಲ್ಲಹಳ್ಳಿ, ಹಾರೋಹಳ್ಳಿ, ಹಳೆಕೆರಿಹುಂಡಿ, ಶಿವಪುರ, ಹಲಗಯ್ಯನಹುಂಡಿ, ಪಿಲ್ಲಹಳ್ಳಿ, ವರಕೂಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೆಗೌಡನಹುಂಡಿ, ವರುಣಾ, ದಂಡಿಕೆರೆ, ವಾಜಮಂಗಲ, ಮೊಸಂಬಾಯನಹಳ್ಳಿ, ಯಾಂದಳ್ಳಿ, ಸಜ್ಜೆಹುಂಡಿ, ಜಂತಗಳ್ಳಿ, ಮಹದೇಶ್ವರ ಬಡಾವಣೆ, ಇಂಡಸ್ ಬಡಾವಣೆ, ಭೂಗತಗಳ್ಳಿ ಗೇಟ್, ಚಿಕ್ಕಹಳ್ಳಿ, ಚೋರನಹಳ್ಳಿ, ಭುಗತಗಳ್ಳಿ, ನಾಡನಹಳ್ಳಿ, ಪೊಲೀಸ್ ಬಡಾವಣೆ, ನೇತಾಜಿನಗರ, ಐಪಿಎಸ್ ನಗರ, ಲಾಲ್‌ಬಹದ್ದೂರು ಶಾಸ್ತ್ರಿ ನಗರ, ಎಸ್‌ಎಂಪಿ ಡೆವಲಪರ್ಸ್ ಶೋಭ ಡೆವಲಪರ್ಸ್, ಯಶಸ್ವಿನಿ ಹಿಲ್ ವ್ಯೂ, ವರಕೂಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ಜಂತಗಳ್ಳಿ, ಚಿಕ್ಕಹಳ್ಳಿ, ಚೋರನಹಳ್ಳಿ, ಜೆಎಸ್‌ಎಸ್ ಬಡಾವಣೆ, ವಸಂತನಗರ, ಸುಕದಾಯಿ ಬಡಾವಣೆ, ಶಾಂತವೇರಿ ಗೋಪಾಲ ಗೌಡನಗರ, ಸಪ್ತಮಾತೃಕ ಬಡಾವಣೆ, ಸಹೃದಯನಗರ, ಪ್ರಕೃತಿ ಬಡಾವಣೆ, ರಮ್ಮನಹಳ್ಳಿ, ಕಾಳಿಸಿದ್ದನಹುಂಡಿ, ಹಂಚ್ಯ, ಸಾತಗಳ್ಳಿ, ಗಳಿಗರಹುಂಡಿ, ನೆಹರುನಗರ, ಸಾತಗಳ್ಳಿ, ಡಿಟಿಎಸ್ ರಾವ್‌ನಗರ, ಸನ್‌ಪ್ಯೂರ್ ಬಡಾವಣೆ, ಸಾತಗಳ್ಳಿ ಬಿ–ಜೋನ್, ವಿಟಿಯೂ ಕಾಲೇಜು, ಭಾರತ್ ನಗರ, ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. ರಾಜೀವನಗರ 2ನೇ ಹಂತ, ಕ್ರಿಶ್ಚಿಯನ್ ಕಾಲೋನಿ, ಯಾಸಿನ್ ಮಸ್ಜಿದ್, ಎಸ್.ಬಡಾವಣೆ, ಸೂರ್ಯನಾರಾಯಣ ದೇವಸ್ಥಾನ ರಸ್ತೆ, ಆಲ್ ಬಜಾರ್ ಮಸ್ಜಿದ್ ವೃತ್ತ, ಅಂಬೇಡ್ಕರ್ ಭವನ ರಸ್ತೆ, ಕ್ಯೂಬಾ ಮಸ್ಜಿದ್ ವೃತ್ತ ನಾರಾಯಣ ಹೃದಯಾಲಯ ಆಸ್ಪತ್ರೆ, ಕಾಮನಕೆರೆಹುಂಡಿ, ಕೆ.ಹೆಚ್.ಬಿ. ಬಡಾವಣೆ, RTO–55, ಆಸೀನಾ ಬಡಾವಣೆ, ರಾಜೀವನಗರ 3ನೇ ಹಂತ ಹಾಗೂ ಸುತ್ತಮುತ್ತ ಬೆಳಗ್ಗೆ 10ರಿಂದ ಸಂಜೆ 5:30ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ನಿಧನ

ಮರೀಸ್ವಾಮಿ



ಮೈಸೂರು, ಡಿ.4– ಮೈಸೂರು ಜಿಲ್ಲೆ, ತಿ.ನರಸೀಪುರ ತಾಲೂಕು, ಬನ್ನೂರು ಹೋಬಳಿಯ ಕುಂತನಹಳ್ಳಿ ಗ್ರಾಮದ ವಾಸಿ ಮರೀಸ್ವಾಮಿ (59) ಇಂದು ಮುಂಜಾನೆ ಕೆ.ಆರ್.ಆಸ್ಪತ್ರೆಯಲ್ಲಿ ನಿಧನರಾದರು. ದಿವಂಗತರು ಪತ್ನಿ ಮಹದೇವಮ್ಮ, ಪುತ್ರರಾದ ಕೆ.ಎಂ.ವೆಂಕಟೇಶ್, ಕೆ.ಎಂ.ಸಂತೋಷ್, ಪುತ್ರಿ ಶೀಲಾ ಮಹೇಂದ್ರ, ಮೊಮ್ಮಕ್ಕಳು ಮತ್ತು ಬಂಧು–ಬಳಗವನ್ನು ಅಗಲಿದ್ದಾರೆ. ಭಾನುವಾರ ಸಂಜೆ ಕುಂತನಹಳ್ಳಿ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.12.2022 ಸೋಮವಾರ, ಮಳೆ ನಕ್ಷತ್ರ: ಜ್ಯೇಷ್ಠ, 03.12.2022 ರಿಂದ 15.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಶುಕ್ಲ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ : ಅಶ್ವಿನಿ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ: ಶಿವರಾಂ ಗಾಂವ್ಕರ್ ವಜ್ರಳ್ಳಿ,. 6.15 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ನೃತ್ಯ ಶಿಲ್ಪ ೦ಯಾತ್ರೆ: ಲೇಖನ ಮತ್ತು ಪ್ರಸ್ತುತಿ–ಡಾ.ಬಿ.ಎನ್.ಮನೋರಮ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಬಿ.ಶ್ರೀರಾಂಭಟ್, ಪಿ.ಸುರಭೀ, ವ್ಯಾಖ್ಯಾನ–ಡಾ.ಲತಾ ಮೈಸೂರು, 9.00 ನೆನಪಿನಂಗಳ: ಧ್ವನಿ ಬಂಡಾರದಿಂದ ಆಯ್ದ ಕಾರ್ಯಕ್ರಮ, 10.00 ಲಯ ಸಂಭ್ರಮ: ಶಾಸ್ತ್ರೀಯ ಹಾಗೂ ಸಿನೆಮಾ ಸಂಗೀತದಲ್ಲಿ ಮೃದಂಗದ ಪಾತ್ರ, ಭಾಗವಹಿಸುವವರು ಖ್ಯಾತ ಹಿನ್ನೆಲೆ ಗಾಯಕ ವಿಜಯ್ ಪ್ರಕಾಶ್, ಪ್ರಸ್ತುತಿ–ಹೆಚ್.ಎಲ್.ಶಿವಶಂಕರ ಸ್ವಾಮಿ. **ಮಧ್ಯಾಹ್ನ:** 12.30 ದೇವರನಾಮ: ಡಾ.ರಾಜ್‌ಕುಮಾರ್, ಚಂದ್ರಿಕಾ, 12.45 ನಮ್ಮ ಆರೋಗ್ಯ: ಹಿರಿಯರಲ್ಲಿ ಕಂಡು ಬರುವ ಪಾರ್ಕಿನ್ಸನ್ ಕಾಯಿಲೆ ಮತ್ತು ಚಿಕಿತ್ಸೆ ಕುರಿತು ಡಾ.ಬಿ.ಎಸ್.ಕೇಶವ ಅವರೊಂದಿಗೆ ಮಾತುಕತೆ, 1.20 ಭಾವಗೀತೆ: ರಜನಿ ಅನಿಲ್, 3.00 ಹರಿಯನ್ನರಸಿದ ವನಿತೆಯರು: ಮಹಿಳಾ ಹರಿದಾಸರನ್ನು ಕುರಿತ ಕಾರ್ಯಕ್ರಮ, ರಚನೆ ಮತ್ತು ಪ್ರಸ್ತುತಿ–ಡಾ.ಸುಕನ್ಯಾ ಪ್ರಭಾಕರ್ **ಸಂಜೆ:** 4.00 ಮಹಿಳಾರಂಗ: ಡಾಕ್ಟರ್ ಸಮಯ, ಪ್ರಸ್ತುತಿ–ಕೆ.ಬಿ.ಮೀನಾ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕಿಸಾನ್‌ವಾಣಿ–ರೇಷ್ಮೆ ಕೃಷಿಯಲ್ಲಿ ಕಂಡ ಯಶಸ್ಸು ಕುರಿತು ಯುವ ರೈತ ಪ್ರಶಸ್ತಿ ಪುರಸ್ಕೃತ ಯುವ ರೈತ ಪ್ರತಾಪ್ ಎಸ್.ಪಿ. ಅವರೊಂದಿಗೆ ಸಂದರ್ಶನ. **ರಾತ್ರಿ:** 9.30 ಎಂ.ಡಿ.ಸುಮತಿ ಮುರಾರಿ–ಹಾಡುಗಾರಿಕೆ, 10.30 ಸವಿನೆನಪು.

- **ಮಂಚೇಗೌಡನಕೊಪ್ಪಲು ಕ್ಷೇಮಾಭಿವೃದ್ಧಿ ಸಂಘ :** ಶ್ರೀ ವರಸಿದ್ಧಿ ವಿನಾಯಕ, ನವಗ್ರಹ ಪ್ರತಿಷ್ಠಾಪನಾ ಮಹೋತ್ಸವ, ಶ್ರೀರಾಮ ಮಂದಿರ ಪೂಜಾ ಮಹೋತ್ಸವ ಹಾಗೂ ಶ್ರೀ ವರಸಿದ್ಧಿ ವಿನಾಯಕ ದೇವರ ಗೋಪುರ ಕಳಶ ಸ್ಥಾಪನಾ ಮಹೋತ್ಸವ, ದೇವರುಗಳಿಗೆ ಫಲಪಂಚಾಮೃತ ಅಭಿಷೇಕ, ಅಲಂಕಾರ, ದ್ವಾರಪಾಲಕ, ವೇದ, ಅಷ್ಟದಿಕ್ಪಾಲಕರ ಪೂಜೆ, ಅಷ್ಟ ಆವರಣ ಪೂಜೆ, ಮಹಾ ನೈವೇದ್ಯ, ಮಹಾ ಮಂಗಳಾರತಿ, ಸ್ಥಳ: ಮಂಚೇಗೌಡನಕೊಪ್ಪಲು, ಮುಂಜಾನೆ 3.10ರಿಂದ.
- **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ :** 22ನೇ ವರ್ಷದ ಹನುಮ ಜಯಂತಿ ಮಹೋತ್ಸವ, ಪಂಚಾಮೃತ ಸ್ನಪನ, ಅಭಿಷೇಕ, ವಿಶೇಷ ನವನೀತ ಅಲಂಕಾರ, ವಿಶೇಷ ಪೂಜೆ, ಮಹಾ ಮಂಗಳಾರತಿ, ಸ್ಥಳ: ದೇವಸ್ಥಾನದ ಆವರಣ, ಇರ್ವಿನ್ ರಸ್ತೆ, ಬೆಳಗ್ಗೆಯಿಂದ.
- **ಶ್ರೀ ಗೀತಾ ಪ್ರಚಾರಿಣೀ ಸಭಾ ಟ್ರಸ್ಟ್ :** 88ನೇ ವರ್ಷದ ಶ್ರೀ ಗೀತಾ ಜಯಂತಿ ಮಹೋತ್ಸವ, ಸಾಮೂಹಿಕ ಭಗವದ್ಗೀತೆ ಪಾರಾಯಣ, ಬೆಳಗ್ಗೆ 7.30ರಿಂದ, ಶ್ರೀ ವಿದ್ಯಾವಿಷ್ಣು ಸಭಾ ಟ್ರಸ್ಟ್‌ನಿಂದ ವಿಷ್ಣು ಸಹಸ್ರನಾಮ ಪಾರಾಯಣ, ಡಾ. ಬೆ.ನಾ. ವಿಜಯೇಂದ್ರಾಚಾರ್ಯ ಅವರಿಂದ ಶ್ರೀಮತ್ ಭಾಗವತ ಸಪ್ತಾಹ, ಪ್ರವಚನ, ಸಂಜೆ 5.30ರಿಂದ ಟ್ರಸ್ಟ್ ಆವರಣ, ಶ್ರೀ ಗೀತಾ ಮಂದಿರ ರಸ್ತೆ, ಅಶೋಕ ರಸ್ತೆ.
- **ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಹನುಮ ಜಯಂತಿ, ಚತುಷ್ಪಾರ್ಚನೆ, ಪಂಚಾಮೃತ ಅಭಿಷೇಕ, ಮಹಾ ಮಂಗಳಾರತಿ, ಶ್ರೀರಾಮ ತಾರಕ ಹೋಮ, ಆಂಜನೇಯ ಸಹಸ್ರನಾಮ, ದೇವರನಾಮ ಸಂಗೀತ ಕಾರ್ಯಕ್ರಮ, ಸ್ಥಳ: ಹನುಮಂತನಗರ, ಬನ್ನಿಮಂಟಪ ಬಡಾವಣೆ, ಬೆಳಗ್ಗೆ 7.30ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗ್ಯಾಸ್ಟ್ರಿಕ್ ತೊಂದರೆ ಹಾಗೂ ಮಹಿಳೆಯರಲ್ಲಿ ಅತಿ ಋತುಸ್ರಾವದ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಗೆ.
- **ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ (ಪ್ರವಾಸೋದ್ಯಮ ಇಲಾಖೆ) :** ಶ್ರೀ ಹನುಮ ಜಯಂತಿ, ಶ್ರೀ ವೀರಾಂಜನೇಯ ಸ್ವಾಮಿ ಮತ್ತು ಶ್ರೀ ಸಾಂಬ ಸದಾಶಿವ ದೇವಾಲಯದ ಜೀರ್ಣೋದ್ಧಾರದ ಅಂಗವಾಗಿ ಶಾಂತಿ ಹೋಮ ಕಾರ್ಯಕ್ರಮ, ಸ್ಥಳ: ದಸರಾ ವಸ್ತುಪ್ರದರ್ಶನ ಆವರಣ, ಬೆಳಗ್ಗೆ 9.30ಕ್ಕೆ.
- **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣದ ಅಂಗವಾಗಿ 27ನೇ ಸಂಗೀತ ಸಮ್ಮೇಳನ–2022, ಸಂಗೀತಾಂಜಲಿ: ವೇಣುವಾದನ ವಿದ್ವಾನ್ ಎ.ಪಿ. ಕೃಷ್ಣಪ್ರಸಾದ್ ಶಿಷ್ಯರಿಂದ, ವಿದ್ವತ್ ಗೋಷ್ಠಿ: ವಿದ್ವಾನ್ ಡಾ. ಪ್ರಶಾಂತ್, ಸಂಗೀತ ಕಾರ್ಯಕ್ರಮ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಬೆಳಗ್ಗೆ 10 ಗಂಟೆಯಿಂದ.
- **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಐಕ್ಯೂ ಎಸಿ ಘಟಕ, ವಿದ್ಯಾರ್ಥಿ ಆಪ್ತ ಸಮಾಲೋಚನಾ ಕೋಶದ ವತಿಯಿಂದ ಸುಪ್ತ ಮನಸ್ಸಿನ ವಿಸ್ಮಯ ಶಕ್ತಿ ಕುರಿತು ಕಾರ್ಯಾಗಾರ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 10 ಗಂಟೆಗೆ.
- **ಮಹಾರಾಜ ಕಾಲೇಜು :** ಸ್ವಾಗತ ಹಾಗೂ ಅಭಿ ವಿನ್ಯಾಸ ಕಾರ್ಯಕ್ರಮ 2022–23, ಉದ್ಘಾಟನೆ: ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿವಿ ಕುಲಪತಿ ಪ್ರೊ. ನಾಗೇಶ್ ವಿ.ಬೆಟ್ಟಕೋಟೆ, ಸ್ಥಳ: ಜೂನಿಯರ್ ಬಿ.ಎ. ಹಾಲ್, ಮಹಾರಾಜ ಕಾಲೇಜು, ಬೆಳಗ್ಗೆ 11 ಗಂಟೆಗೆ.
- **ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ರಾಜ್ಯ ಅತೀ ಹಿಂದುಳಿತ ವರ್ಗಗಳ ಜಾಗೃತ ವೇದಿಕೆ:** ಹಿಂದುಳಿದ ವರ್ಗಗಳ ದುಂಡು ಮೇಜಿನ ಸಭೆ, ಸ್ಥಳ: ಜಲದರ್ಶಿನಿ ಅತಿಥಿ ಗೃಹ, ಬೆಳಗ್ಗೆ 11.30ಕ್ಕೆ
- **ಹನುಮಾನ್ ಗಡಿ ಸೇವಾ ಸಮಿತಿ:** ಹನುಮ ಜಯಂತಿ, ಹನುಮ ಮಾಲೆ, ಹನುಮ ರಕ್ಷಾ ಸೂತ್ರ, ಹನುಮ ರಕ್ಷಾ ಮಹಾಮಂತ್ರ, ಸ್ಥಳ: ಆಂಜನೇಯಸ್ವಾಮಿ ದೇವಸ್ಥಾನ, ವಿವಿ ಮಾರುಕಟ್ಟೆ ಬಳಿ, ಬೆಳಗ್ಗೆ 11.30ಕ್ಕೆ.
- **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ಪ್ರವಚನ, ಭಗವದ್ಗೀತೆಯ 2ನೇ ಅಧ್ಯಾಯ ಕುರಿತು ಪಂಡಿತ್ ರಘೋತ್ತಮಾಚಾರ್ಯ ನಾಗಸಂಪಿಗೆ ಬಾಗಲಕೋಟೆ ಅವರಿಂದ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯಲಕ್ಷ್ಮೀಪುರಂ, ಸಂಜೆ 5ರಿಂದ.
- **ಶ್ರೀ ಮುತ್ತುರಾಯ ಸೇವಾ ಟ್ರಸ್ಟ್ :** ಹನುಮ ಜಯಂತಿ ಕಾರ್ಯಕ್ರಮ, ಅಭಿಷೇಕ, ಅಗ್ನಿಹೋತ್ರ, ಗಣಹೋಮ, ಪವಮಾನ ಹೋಮ, ನವಗ್ರಹ ಹೋಮ, ಪೂರ್ಣಾಹುತಿ, ಸ್ಥಳ: ಮುತ್ತುರಾಯನ ಗುಡ್ಡ, ಕಲ್ಯಾಣಿನಗರ, ವಿಜಯನಗರ, ಬೆಳಗ್ಗೆ 5.10ರಿಂದ.
- **ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ:** ಗೀತಾ ಜಯಂತಿ ಹಾಗೂ ನಾಡಿನ ಹೆಸರಾಂತ ಪ್ರವಚನಕಾರರಾದ ಪಂ. ರಘೋತ್ತಮಾಚಾರ್ಯ ನಾಗಸಂಪಿಗೆ ಅವರಿಗೆ ಅಭಿನಂದನೆ, ಮುಖ್ಯ ಅತಿಥಿಗಳು: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉತ್ತರಾದಿ ಮಠದ ಆಡಳಿತಾಧಿಕಾರಿ ಪಂಡಿತ್ ಅನಿರುದ್ಧ ಆಚಾರ್ಯ, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸ್ಥಳ: ಶ್ರೀ ಉತ್ತರಾದಿ ಮಠ ಆವರಣ, ಸಂಜೆ 6.30ಕ್ಕೆ.
- **ಶ್ರೀ ಉತ್ತರಾದಿ ಮಠ :** ಶ್ರೀ ಭಗವದ್ಗೀತಾ ಅಭಿಮಾನ, ಪ್ರವಚನಕಾರರಾದ ಪಂಡಿತ್ ಶ್ರೀ ರಘೋತ್ತಮಾಚಾರ್ಯ ನಾಗಸಂಪಿಗೆ ಬಾಗಲಕೋಟೆ ಅವರಿಂದ, ಸ್ಥಳ: ಮಠದ ಆವರಣ, ಅಗ್ರಹಾರ, ಸಂಜೆ 6.30ರಿಂದ.
- **ಶ್ರೀ ಸದ್ಗುರು ಸೇವಾ ಮಂಡಲ :** 5ನೇ ವರ್ಷದ ಶ್ರೀ ದತ್ತಾತ್ರೇಯ ಜಯಂತಿ ಸಪ್ತಾಹ, ಶ್ರೀಯವರಿಗೆ ರುದ್ರಾಭಿಷೇಕ, ಸರ್ವಲಂಕಾರ ಶ್ರೀ ಗುರುಚರಿತ್ರೆ ಪಾರಾಯಣ, ಮಹಾ ಮಂಗಳಾರತಿ, ಸ್ಥಳ: ಶ್ರೀ ಮನ್ಮಹಾರಾಜ ಸಂಸ್ಕೃತ ಪಾಠಶಾಲೆಯ ಪಕ್ಕ, ಹೊಸ ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 7 ಗಂಟೆಗೆ.

ಕುಮಾರಬೀಡು, ಇಲವಾಲ ಹೋಬಳಿ

- **ಕುಮಾರಬೀಡು ಕ್ಷೇತ್ರ :** ಶ್ರೀ ವೀರಾಂಜನೇಯಸ್ವಾಮಿ ಹನುಮೋತ್ಸವ, ಹೋಮ, ತೇರಿನ ಮೆರವಣಿಗೆ, ಉತ್ಸವ, ಪ್ರಸಾದ ವಿನಿಯೋಗ, ಸ್ಥಳ: ಕುಮಾರಬೀಡು, ಇಲವಾಲ ಹೋಬಳಿ, ಬೆಳಗ್ಗೆ 8 ಗಂಟೆಯಿಂದ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 5 ಸೋಮವಾರ 2022

ಸಂಪುಟ: 43 | ಸಂಚಿಕೆ: 228 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಮೈಸೂರು ಮಿತ್ರ 43 ಅಪ್ರತಿಮ ಪತ್ರಿಕೋದ್ಯಮ

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಜೆಇ ಮೆದುಳು ಜ್ವರ ನಿಯಂತ್ರಣಕ್ಕೆ ಇಂದಿನಿಂದ

48 ಲಕ್ಷ ಮಕ್ಕಳಿಗೆ ಲಸಿಕೆ

ಮೊದಲ ವಾರದಲ್ಲಿ ಶಾಲೆಗಳಲ್ಲೇ ಲಸಿಕಾಕರಣ: ಆರೋಗ್ಯ ಸಚಿವ ಡಾ. ಕೆ. ಸುಧಾಕರ್

ಬೆಂಗಳೂರು,ಡಿ.4–ಮಕ್ಕಳಲ್ಲಿ ನರ ದೌರ್ಬಲ್ಯ, ಬುದ್ಧಿ ಮಾಂದ್ಯತೆ ಸೇರಿದಂತೆ ಶಾಶ್ವತ ಅಂಗವಿಕಲತೆ ಉಂಟು




ಮಾಡುವ ಜೆಇ ಮೆದುಳು ಜ್ವರ (ಜಪಾನೀಸ್ ಎನ್ ಸೆಫಲೈಟಿಸ್) ನಿಯಂತ್ರಣಕ್ಕಾಗಿ ಡಿಸೆಂಬರ್ 5ರಿಂದ ವಿಶೇಷ ಲಸಿಕಾ ಅಭಿಯಾನ ಆರಂಭವಾಗಲಿದೆ. ಈ ಅಭಿಯಾನದಡಿ 1–15 ವರ್ಷದ ಅಂದಾಜು 48 ಲಕ್ಷ ಮಕ್ಕಳಿಗೆ ಲಸಿಕೆ ನೀಡುವ ಗುರಿ ಇದೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ಜೆಇ ಮೆದುಳು ಜ್ವರ ಫ್ಲೇವಿ ವೈರಸ್' ಎಂಬ ವೈರಾಣಿಂದ ಬರುತ್ತದೆ. ಇದು ಕ್ಯುಲೆಕ್ಸ್ ಸೊಳ್ಳೆಗಳ ಮೂಲಕ ಹರಡುತ್ತದೆ. ಹಂದಿಗಳು ಮತ್ತು ಕಾಡಿನ ಪಕ್ಷಿಗಳಲ್ಲಿರುವ ಈ ವೈರಾಣುವಿಗೆ ಮಾನವರು ಕಟ್ಟಕಡೆಯ ಹೋಸ್ಟ್ ಆಗಿರುತ್ತಾರೆ. ಜೆಇ ಲಸಿಕಾ ಅಭಿಯಾನ ಕುರಿತು ಮಾಹಿತಿ ನೀಡಿದ ಸಚಿವರು, ಡಿಸೆಂಬರ್ ಮೊದಲನೇ ವಾರದಲ್ಲಿ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಲಸಿಕೆ ಹಾಕಿಸಲು ಕ್ರಮ ಕೈಗೊಳ್ಳಲಾಗಿದೆ. ನಂತರದ 2 ವಾರಗಳಲ್ಲಿ ಎಲ್ಲಾ ಆರೋಗ್ಯ ಸಂಸ್ಥೆಗಳು, ಅಂಗನವಾಡಿ ಕೇಂದ್ರ ಹಾಗೂ ಸಮುದಾಯದ ಇನ್ನಿತರ ಪ್ರದೇಶಗಳಲ್ಲಿ ಲಸಿಕಾಕರಣಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರ ಉಚಿತವಾಗಿ ಜೆನವ್ಯಾಕ್ ಜೆಇ ಲಸಿಕೆಗಳನ್ನು ಸರಬರಾಜು ಮಾಡಿದೆ ಎಂದರು.

ಪ್ರಪಂಚದಾದ್ಯಂತ 24 ರಾಷ್ಟ್ರಗಳಲ್ಲಿ ಜಪಾನೀಸ್ ಎನ್‌ಸೆಫಲೈಟಿಸ್ (ಜೆಇ) ಪಿಡುಗು ಗುರುತಿಸಲಾಗಿದೆ. ಭಾರತವೂ ಸೇರಿದಂತೆ ಏಷ್ಯಾದ 11 ರಾಷ್ಟ್ರಗಳು ಈ ಪಟ್ಟಿಯಲ್ಲಿದೆ. ಪ್ರತಿ ವರ್ಷ ಸರಾಸರಿ 68 ಸಾವಿರ ಪ್ರಕರಣಗಳು ವರದಿಯಾಗುತ್ತಿದ್ದು, ಮರಣ ಪ್ರಮಾಣ ಶೇ.20ರಿಂದ ಶೇ.30ರಷ್ಟಿದೆ. ಗುಣಮುಖರಾದ ಶೇ.30ರಿಂದ ಶೇ.50ರಷ್ಟು ಪ್ರಕರಣಗಳಲ್ಲಿ ನರದೌರ್ಬಲ್ಯ, ಬುದ್ಧಿ ಮಾಂದ್ಯತೆ ಸೇರಿದಂತೆ ಶಾಶ್ವತ ಅಂಗವಿಕಲತೆ ಉಂಟಾಗಿವೆ ಎಂದು ಸಚಿವರು ಕಳವಳ ವ್ಯಕ್ತಪಡಿಸಿದರು.

ಜೆಇ ಮೆದುಳು ಜ್ವರದ ಮೊದಲ ಪ್ರಕರಣ 1955ರಲ್ಲಿ ತಮಿಳುನಾಡಿನ ವೆಲ್ಲೂರ್‌ನಲ್ಲಿ ವರದಿಯಾಗಿತ್ತು. ಕರ್ನಾಟಕದಲ್ಲಿ 1978ರಲ್ಲಿ ಕೋಲಾರ ಜಿಲ್ಲೆಯಲ್ಲಿ ಮೊದಲ ಪ್ರಕರಣ ಪತ್ತೆಯಾಗಿತ್ತು. ಹೆಚ್ಚಿನ ಪ್ರಕರಣಗಳು 15 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಕಂಡುಬರುತ್ತಿದೆ.



ಫೈಲ್ ಚಿತ್ರ

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ನಿರ್ದೇಶನದಂತೆ ಹೆಚ್ಚುವರಿಯಾಗಿ ಬಾಗಲಕೋಟೆ, ದಕ್ಷಿಣಕನ್ನಡ, ಗದಗ, ಹಾಸನ, ಹಾವೇರಿ, ಕಲಬುರಗಿ, ತುಮಕೂರು, ರಾಮನಗರ, ಉಡುಪಿ, ಯಾದಗಿರಿ ಜಿಲ್ಲೆಗಳಲ್ಲಿ ಜೆಇ ಹರಡದ ಅವಧಿಯಲ್ಲಿ ಲಸಿಕಾ ಅಭಿಯಾನ ಹಮ್ಮಿಕೊಳ್ಳುವಂತೆ ಸೂಚಿಸಿದ್ದು, 1–15 ವರ್ಷ ವಯಸ್ಸಿನ ಮಕ್ಕಳಿಗೆ 1 ಡೋಸ್ ಲಸಿಕೆ ನೀಡಲಾಗುವುದು.

10 ಜಿಲ್ಲೆಗಳಲ್ಲಿ ಲಸಿಕಾಕರಣ

“ ರಾಜ್ಯದಲ್ಲಿ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಲ್ಲಿ ಬಳ್ಳಾರಿ, ರಾಯಚೂರು, ಕೊಪ್ಪಳ, ವಿಜಯಪುರ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ, ಧಾರವಾಡ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳನ್ನು 10 ಜೆಇ ಎಂಡೆಮಿಕ್ ಜಿಲ್ಲೆಗಳು ಎಂದು ಗುರುತಿಸಲಾಗಿದೆ. ಈ ಜಿಲ್ಲೆಗಳಲ್ಲಿ ಮಕ್ಕಳಿಗೆ 9 ತಿಂಗಳು ತುಂಬಿದ ನಂತರ ಮೊದಲನೇ ಡೋಸ್ ಮತ್ತು 1.5 ವರ್ಷದ ವಯಸ್ಸಿನಲ್ಲಿ 2ನೇ ಡೋಸ್ ಲಸಿಕೆ ನೀಡಲಾಗುತ್ತಿದೆ. **–ಡಾ.ಕೆ.ಸುಧಾಕರ್, ಸಚಿವ**

2016ರಲ್ಲಿ 11 ಪ್ರಕರಣಗಳು, 2017ರಲ್ಲಿ 23 ಪ್ರಕರಣಗಳು, 2018ರಲ್ಲಿ 35 ಪ್ರಕರಣಗಳು, 2019ರಲ್ಲಿ 33 ಪ್ರಕರಣಗಳು, 2020ರಲ್ಲಿ 19 ಪ್ರಕರಣಗಳು, 2021ರಲ್ಲಿ 25 ಪ್ರಕರಣಗಳು, 2022ರಲ್ಲಿ 21 ಪ್ರಕರಣಗಳು ಪತ್ತೆಯಾಗಿವೆ. ರೋಗ ಪತ್ತೆ ಮಾಡಲು ರಾಜ್ಯದಲ್ಲಿ ಸೆಂಟಿನಲ್ ಸರ್ವೆಲೆನ್ಸ್ ಲ್ಯಾಬೊರೇಟರಿ (ಎಸ್‌ಎಸ್‌ಎಲ್) ಗಳನ್ನು ಸಜ್ಜುಗೊಳಿಸಲಾಗಿದೆ. ನಿಮ್ಹಾನ್ಸ್ –ಸ್ಟೇಟ್ ಅಪೆಕ್ಸ್ ಲ್ಯಾಬೊರೇಟರಿ, ವಿಮ್ಸ್–ಬಳ್ಳಾರಿ, ಕಿಮ್ಸ್–ಹುಬ್ಬಳ್ಳಿ, ಡಿಪಿಎಚ್‌ಎಲ್–ಕೋಲಾರ, ಮಣಿಪಾಲ್ ಸೆಂಟರ್ ಫಾರ್ ವೈರಸ್ ರಿಸರ್ಚ್–ಉಡುಪಿ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ(ಎನ್‌ಐವಿ)–ಬೆಂಗಳೂರು ಕೇಂದ್ರಗಳಲ್ಲಿ ವ್ಯವಸ್ಥೆ ಮಾಡಲಾಗಿದೆ ಎಂದರು. ನಾವೀಗ ಮೆದುಳು ಜ್ವರದ ವಿರುದ್ಧ ಯುದ್ಧ ಸಾರಬೇಕಿದ್ದು, ಇದಕ್ಕಾಗಿ ಆರೋಗ್ಯ ಇಲಾಖೆ ಎಲ್ಲಾ ರೀತಿಯಲ್ಲಿ ಸನ್ನದ್ಧವಾಗಿದೆ ಎಂದು ಸಚಿವ ಡಾ.ಕೆ.ಸುಧಾಕರ್ ತಿಳಿಸಿದ್ದಾರೆ.

ತಿ.ನರಸೀಪುರ: ಚಿರತೆ ಸೆರೆಗೆ ತೀವ್ರ ಶೋಧ

- 13 ತಂಡ ಕಾರ್ಯಾಚರಣೆ, 16 ಬೋನ್, 20 ಕ್ಯಾಮರಾ, ಟ್ರ್ಯಾಪ್ ಡ್ರೋಣ್ ಕ್ಯಾಮರಾ
- ಮಲ್ಲಿಕಾರ್ಜುನ ಬೆಟ್ಟ ಅರಣ್ಯ, ಒಡ್ಡಲ್ಲು ರಂಗನಾಥಸ್ವಾಮಿ ಬೆಟ್ಟ ಅರಣ್ಯದಲ್ಲಿ ಕೂಂಬಿಂಗ್

ಮೈಸೂರು,ಡಿ.4(ಎಂಟಿವೈ)–ಒಂದೂವರೆ ತಿಂಗಳ ಅಂತರದಲ್ಲಿ 2 ಜೀವಗಳ ಬಲಿ ಪಡೆದು ತಿ.ನರಸೀಪುರ ತಾಲೂಕಿನ ಹಲವು ಗ್ರಾಮಗಳಲ್ಲಿ ಆತಂಕವನ್ನುಂಟು ಮಾಡಿರುವ ಚಿರತೆಯ ಜಾಡು ಪತ್ತೆಹಚ್ಚಲು ಅರಣ್ಯ ಇಲಾಖೆ ಹರಸಾಹಸಪಡುತ್ತಿದ್ದು, ಚಿರತೆ ಹೆಜ್ಜೆಯ ಜಾಡು ಜಾಲಾಡಲು 130ಕ್ಕೂ ಹೆಚ್ಚು ಸಿಬ್ಬಂದಿ ಶೋಧನಾ ಕಾರ್ಯದಲ್ಲಿ ನಿರತರಾಗಿದ್ದಾರೆ. ಸಾಧ್ಯವಾದಷ್ಟು ಬೇಗ ಚಿರತೆ ಸೆರೆ ಹಿಡಿದು ಜನರಲ್ಲಿ ಮನೆ ಮಾಡಿರುವ ಆತಂಕ ನಿವಾರಿಸಲು ಅರಣ್ಯ ಇಲಾಖೆ ಶ್ರಮಿಸುತ್ತಿದೆ.

ಅರಣ್ಯ ಇಲಾಖೆ ಕಳೆದ 4 ದಿನಗಳಿಂದ 20ಕ್ಕೂ ಹೆಚ್ಚು ಗ್ರಾಮಗಳಲ್ಲಿ ಕಾರ್ಯಾಚರಣೆ ನಡೆಸಿದರೂ ಈವರೆಗೆ ಚಿರತೆ ಯಾರೊಬ್ಬರ ಕಣ್ಣಿಗೆ ಬೀಳದಿರುವುದು ಒಂದೆಡೆಯಾದರೆ, ಸಂಜೆಯಾಗುತ್ತಿದ್ದಂತೆ ಮನೆಯಿಂದ ಹೊರಬರಲು ಜನರು ಹೆದರುವ ಪರಿಸ್ಥಿತಿ ನಿರ್ಮಾಣವಾಗಿದೆ. ಕಳೆದ ಅಕ್ಟೋಬರ್ 1ರಂದು ತಿ.ನರಸೀಪುರ ತಾಲೂಕಿನ ಎಂ.ಎಲ್.ಹುಂಡಿ ಮಲ್ಲಿಕಾರ್ಜುನಬೆಟ್ಟದ ಬಳಿ ಸೆಲ್ಫಿ ತೆಗೆದುಕೊಳ್ಳಲು ಹೋಗಿದ್ದ ಯುವಕನ ಮೇಲೆ ಎರಗಿ ಬಲಿ ಪಡೆದು ನಾಪತ್ತೆಯಾಗಿದ್ದ ಚಿರತೆ, 31 ದಿನಗಳ ಬಳಿಕ ಅಂದರೆ ಡಿ.1ರಂದು ಸಂಜೆ ಕೆಬ್ಬೆಹುಂಡಿ ಗ್ರಾಮದಲ್ಲಿ ಮನೆಯಿಂದ ಹೊರಬಂದಿದ್ದ ಯುವತಿ ಮೇಲೆ ದಾಳಿ ನಡೆಸಿ ಕೊಂದು ಪರಾರಿಯಾಗಿತ್ತು. ಇದಾದ ನಂತರ ಅರಣ್ಯ ಇಲಾಖೆ ಚಿರತೆಯನ್ನು ಸೆರೆ ಹಿಡಿಯಲು ಸಮರೋಪಾದಿಯಲ್ಲಿ ಕಾರ್ಯಾಚರಣೆಗೆ ಇಳಿದರೂ ಒಂದಿಷ್ಟೂ ತಾನಿರುವ ಜಾಗದ ಬಗ್ಗೆ ಸುಳಿವು ನೀಡದ ಚಿರತೆ ಅರಣ್ಯ ಇಲಾಖೆಗೆ ಚಳ್ಳೆಹಣ್ಣು ತಿನ್ನಿಸುತ್ತಿದೆ. ▶ 8ನೇ ಪುಟಕ್ಕೆ

“ ಚಿರತೆ ಸೆರೆಗೆ ಈಗಾಗಲೇ ಇಲಾಖೆಯ 100ಕ್ಕೂ ಹೆಚ್ಚು ಸಿಬ್ಬಂದಿಗಳನ್ನು ಕಾರ್ಯಾಚರಣೆಗೆ ಬಳಸಿಕೊಳ್ಳಲಾಗಿದೆ. ಎಂ.ಎಲ್. ಹುಂಡಿ ಬಳಿಯ ಮಲ್ಲಿಕಾರ್ಜುನಬೆಟ್ಟದಲ್ಲಿ ಇರಿಸಿದ್ದ ಕ್ಯಾಮರಾ ಟ್ರ್ಯಾಪ್‌ನಲ್ಲಿ ಚಿರತೆ ಓಡಾಡಿರುವುದು ಪತ್ತೆಯಾಗಿದ್ದು, ಶೀಘ್ರವೇ ಸೆರೆ ಹಿಡಿಯಲಾಗುವುದು. ಅಲ್ಲದೆ, ಘಟನೆ ಮರುಕಳಿಸದಂತೆ ಕಟ್ಟೆಚ್ಚರ ವಹಿಸಲಾಗಿದೆ.
–ಡಾ.ಮಾಲತಿಪ್ರಿಯಾ, ಸಿಎಫ್, ಮೈಸೂರು ವೃತ್ತ.



ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳು ಡ್ರೋಣ್ ಕ್ಯಾಮರಾ ಮೂಲಕ ಚಿರತೆ ಪತ್ತೆಗೆ ಕಾರ್ಯಾಚರಣೆ ನಡೆಸುತ್ತಿರುವುದು.

43 ಗ್ರಾಮಗಳಲ್ಲಿ ತಲಾಶ್

ಮೈಸೂರು: ಚಿರತೆ ಸೆರೆ ಹಿಡಿಯಲು ನಡೆಸುತ್ತಿರುವ ಕಾರ್ಯಾಚರಣೆಗಾಗಿ 43 ಗ್ರಾಮಗಳನ್ನು ಗುರುತಿಸಲಾಗಿದ್ದು, ಅಲ್ಲಿರುವ ಕಬ್ಬು ಗದ್ದೆಯೇ ಕೂಂಬಿಂಗ್‌ಗೆ ತೊಡಕಾಗಿ ಪರಿಣಮಿಸಿದೆ.

ಘಟನೆ ನಡೆದು 4 ದಿನಗಳಾದರೂ ಚಿರತೆ ಸುಳಿವು ಇನ್ನೂ ಪತ್ತೆಯಾಗಿಲ್ಲ. 20 ಡ್ರೋಣ್ ಕ್ಯಾಮರಾಗಳೊಂದಿಗೆ ಕಾರ್ಯಾಚರಣೆಗೆ ಇಳಿದಿರುವ ಇಲಾಖೆ ಸಿಬ್ಬಂದಿಗೆ ಕಬ್ಬಿನ ಗದ್ದೆಗಳೇ ಅಡ್ಡಿಯಾಗಿವೆ. ಆಳೆತ್ತರಕ್ಕೆ ಬೆಳೆದ ನೂರಾರು ಎಕರೆ ಪ್ರದೇಶದಲ್ಲಿರುವ ಕಬ್ಬಿನ ಗದ್ದೆಗಳಲ್ಲಿ ಚಿರತೆ ಅಡಗಿ ಕುಳಿತರೆ ಅದನ್ನು ಪತ್ತೆಹಚ್ಚುವುದು ಮತ್ತು ಕಬ್ಬಿನ ಗದ್ದೆಯೊಳಗೆ ನುಗ್ಗಿ ಚಿರತೆ ಸೆರೆ ಹಿಡಿಯುವುದು ಕಷ್ಟಸಾಧ್ಯವಾಗಿದೆ. ಅದಕ್ಕಾಗಿ 40 ಗ್ರಾಮಗಳಲ್ಲಿರುವ ಬೆಳೆದಿರುವ ಕಬ್ಬನ್ನು ಆದಷ್ಟು ಬೇಗ ಕಟಾವು ಮಾಡಿಸಿಕೊಡುವಂತೆ ಅರಣ್ಯ ಇಲಾಖೆ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದೆ.

ಹೆಚ್ಚಿದ ಸುಳ್ಳು ಕರೆ: ಚಿರತೆ ಕಂಡು ಬಂದಲ್ಲಿ ಇಲಾಖೆಗೆ ಮಾಹಿತಿ ನೀಡುವಂತೆ ಸ್ಥಳೀಯ ಜನರಿಗೆ ಸೂಚಿಸಲಾಗಿದೆ. ಆದರೆ ಕೆಲವರು ಅನಗತ್ಯವಾಗಿ ಚಿರತೆಯಿದೆ ಎಂದು ಕರೆ ಮಾಡುತ್ತಿರುವುದು ಹೆಚ್ಚಾಗಿದೆ. ಬೇರೊಂದು ಸ್ಥಳದಲ್ಲಿ ಕಾರ್ಯಾಚರಣೆಗೆ ಇಳಿದಿರುವ ತಂಡ ನಕಲಿ ಕರೆ ಬಂದ ಸ್ಥಳಕ್ಕೆ ತೆರಳಿ ನೋಡಿದರೆ ಅಲ್ಲಿ ಯಾವ ಜಾಡು ಇರುವುದಿಲ್ಲ. ಇದರಿಂದ ಚಿರತೆ ಸೆರೆ ಕಾರ್ಯಾಚರಣೆಗೆ ನಕಲಿ ಕರೆಗಳೂ ಅಡ್ಡಿಯಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿ–20 ಶೃಂಗಸಭೆ ಇಂದು ಸರ್ವಪಕ್ಷ ಸಭೆ

ನವದೆಹಲಿ,ಡಿ.4–2023ರ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಜಿ–20 ಶೃಂಗಸಭೆ ಹಿನ್ನೆಲೆಯಲ್ಲಿ ಕಾರ್ಯತಂತ್ರಗಳ ಚರ್ಚೆ ಹಾಗೂ ಪೂರಕವಾಗಿ ಸಲಹೆಗಳನ್ನು ಪಡೆಯುವ ಉದ್ದೇಶದಿಂದ ಕೇಂದ್ರ ಸರ್ಕಾರ ಸೋಮವಾರ ಸರ್ವಪಕ್ಷಗಳ ಸಭೆ ಕರೆದಿದೆ. ಭಾರತವು ಈ ಶೃಂಗಸಭೆಯ ಆತಿಥ್ಯವನ್ನು ವಹಿಸಲಿದೆ.

ರಾಷ್ಟ್ರಪತಿ ಭವನದಲ್ಲಿ ಸರ್ವಪಕ್ಷಗಳ ಸಭೆ ನಡೆಯಲಿದ್ದು, 40 ಪಕ್ಷಗಳ ಅಧ್ಯಕ್ಷರಿಗೆ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ ಜೋಷಿ ಆಹ್ವಾನನೀಡಿದ್ದಾರೆ. ಪ್ರಧಾನಿ ಮೋದಿ ಸಭೆಯಲ್ಲಿ ಭಾಗವಹಿಸುವರು. ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರೂ ಪಾಲ್ಗೊಳ್ಳುವ ಸಂಭವವಿದೆ. ಸರ್ವಪಕ್ಷಗಳ ಸಭೆಯಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪಾಲ್ಗೊಳ್ಳುವ ಸಂಭವವಿದೆ. ತೃಣಮೂಲ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆಯಾಗಿ ಭಾಗವಹಿಸುತ್ತಿದ್ದೇನೆ ಎಂದೂ ಸ್ಪಷ್ಟಪಡಿಸಿದ್ದಾರೆ.

ಭಾರತವು ಡಿ.1ರಂದು ಜಿ–20 ಶೃಂಗದ ಅಧ್ಯಕ್ಷತೆ ವಹಿಸಿಕೊಂಡಿದೆ. ಪೂರಕವಾಗಿ ದೇಶದ ವಿವಿಧೆಡೆ 200 ಸಭೆಗಳನ್ನು ಆಯೋಜಿಸುವ ನಿರೀಕ್ಷೆಯಿದೆ. ಮೊದಲ ಸಭೆಯು ಹೈದರಾಬಾದ್‌ನಲ್ಲಿ ನಡೆಯಲಿದೆ. ಜಿ–20 ಭಾರತ ಸೇರಿ ವಿಶ್ವದ ಪ್ರಮುಖ ದೇಶಗಳು ಸದಸ್ಯರಾಗಿರುವ ಅಂತರ ರಾಷ್ಟ್ರೀಯ ವೇದಿಕೆಯಾಗಿದೆ. ಜಿ20 ಶೃಂಗದ ಮುಂದಿನ ಸಭೆ 2023ರ ಸೆ.9 ಮತ್ತು 10ರಂದು ನವದೆಹಲಿಯಲ್ಲಿ ನಡೆಯಲಿದೆ.

ಭಾರತ–ಪಾಕ್ ಗಡಿಯಲ್ಲಿ 3 ಕೆಜಿ ಹೆರಾಯಿನ್ ಸಹಿತ ಡ್ರೋಣ್ ವಶ



ಚಂಡೀಗಢ: ಪಂಜಾಬ್ ಪೊಲೀಸರು ಮತ್ತು ಗಡಿ ಭದ್ರತಾ ಪಡೆ ಜಂಟಿ ಕಾರ್ಯಾಚರಣೆ ನಡೆಸಿ ಪಂಜಾಬ್‌ನ ತರ್ನ್ ತರನ್ ಜಿಲ್ಲೆಯ ಭಾರತ–ಪಾಕಿಸ್ತಾನ ಗಡಿ ಬಳಿ 3 ಕೆ.ಜಿ ಹೆರಾಯಿನ್ ಸಹಿತ ಡ್ರೋಣ್ ವಶಪಡಿಸಿಕೊಂಡಿದೆ.

ಗಡಿಯಾಚೆಗಿನ ಕಳ್ಳಸಾಗಣೆ ಜಾಲಗಳ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರಿಸಿರುವ ▶ 8ನೇ ಪುಟಕ್ಕೆ

ಸಾಂಸ್ಥಿಕ ಜವಾಬ್ದಾರಿ ನಿಭಾಯಿಸಿ, ಇಲ್ಲವೇ ಸಹೋದ್ಯೋಗಿಗಳಿಗೆ ದಾರಿ ಮಾಡಿಕೊಡಿ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಖಡಕ್ ಸೂಚನೆ

ನವದೆಹಲಿ,ಡಿ.4–ಮೇಲ್ಮಟ್ಟದಿಂದ ಕೆಳಮಟ್ಟದವರೆಗೂ ಪಕ್ಷದ ಸಾಂಸ್ಥಿಕ ಹೊಣೆಗಾರಿಕೆಯನ್ನು ಉತ್ತಮವಾಗಿ ನಿಭಾಯಿಸಬೇಕು ಮತ್ತು ತಮ್ಮ ಜವಾಬ್ದಾರಿಗಳನ್ನು ಪೂರೈಸಲು ಸಾಧ್ಯವಾಗದವರು ತಮ್ಮ ಸಹೋದ್ಯೋಗಿಗಳಿಗೆ ದಾರಿ ಮಾಡಿಕೊಡಬೇಕಾಗುತ್ತದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.



ಖರ್ಗೆ ಅವರು ರಚಿಸಿದ ಕಾಂಗ್ರೆಸ್ ಸ್ಟೀರಿಂಗ್ ಕಮಿಟಿಯ ಮೊದಲ ಸಭೆಯಲ್ಲಿ ತಮ್ಮ ಆರಂಭಿಕ ಭಾಷಣದಲ್ಲಿ, ಮುಂದಿನ 30ರಿಂದ 90 ದಿನಗಳಲ್ಲಿ ಜನರ ಸಮಸ್ಯೆಗಳ ಕುರಿತು ಚಳವಳಿಯ ಮಾರ್ಗಸೂಚಿಯನ್ನು ಸಲ್ಲಿಸುವಂತೆ ರಾಜ್ಯ ಉಸ್ತುವಾರಿಗಳಿಗೆ ಹೇಳಿದರು. ಪಕ್ಷ ಮತ್ತು ದೇಶದ ಕಡೆಗಿನ ನಮ್ಮ ಜವಾಬ್ದಾರಿಯ ದೊಡ್ಡ ಭಾಗವೆಂದರೆ ಉನ್ನತ ಮಟ್ಟದಿಂದ ಕೆಳಮಟ್ಟದವರೆಗೂ ಸಾಂಸ್ಥಿಕ ಹೊಣೆಗಾರಿಕೆ ಎಂದು ನಾನು ನಂಬುತ್ತೇನೆ. ಪಕ್ಷ ಸಂಘಟನೆ ಬಲಿಷ್ಠವಾಗಿದ್ದರೆ, ಜವಾಬ್ದಾರಿಯುತವಾಗಿ, ಜನರ ನಿರೀಕ್ಷೆಗೆ ತಕ್ಕಂತೆ ನಡೆದುಕೊಂಡರೆ ಮಾತ್ರ ಚುನಾವಣೆಯಲ್ಲಿ ಗೆದ್ದು ಜನರ ಸೇವೆ ಮಾಡಲು ಸಾಧ್ಯವಾಗುತ್ತದೆ ಎಂದರು. ▶ 8ನೇ ಪುಟಕ್ಕೆ

“ ರಾಹುಲ್ ಗಾಂಧಿ ನೇತೃತ್ವದಲ್ಲಿ ಭಾರತ್ ಜೋಡೋ ಯಾತ್ರೆಯು ಇತಿಹಾಸ ಬರೆಯುತ್ತಿದೆ. ಯಾತ್ರೆ ಇದೀಗ ಆಂದೋಲನದ ರೂಪವನ್ನು ಪಡೆದುಕೊಂಡಿದೆ. ದ್ವೇಷದ ಬೀಜಗಳನ್ನು ಬಿತ್ತುವ ಮತ್ತು ವಿಭಜನೆಯ ಫಲವನ್ನು ಕೊಯ್ಯುವ ಆಳುವ ಶಕ್ತಿಗಳ ವಿರುದ್ಧ ಹೋರಾಡುವುದು ಕಾಂಗ್ರೆಸ್ ಪಕ್ಷದ ಕರ್ತವ್ಯ. **–ಮಲ್ಲಿಕಾರ್ಜುನ ಖರ್ಗೆ**

ಶಾಲಾ ಪಠ್ಯದಲ್ಲಿ ಭಗವದ್ಗೀತೆ ಸೇರಿಸಬೇಕು

ದಾವಣಗೆರೆ: ಶಾಲಾ ಪಠ್ಯದಲ್ಲಿ ಭಗವದ್ಗೀತೆ ಬರಬೇಕು. ಅದನ್ನು ಎಲ್ಲಾ ಶಾಲೆಗಳಲ್ಲೂ ಕಡ್ಡಾಯಗೊಳಿಸಬೇಕು ಎಂಬ ಸರ್ಕಾರದ ನಿರ್ಧಾರಕ್ಕೆ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಬೆಂಬಲ ಸೂಚಿಸಿದರು.



ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ–2ರ ರಾಜ್ಯಮಟ್ಟದ ಭಗವದ್ಗೀತಾ ಅಭಿಯಾನದ ಮಹಾ ಸಮರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪಠ್ಯದಲ್ಲಿ ಭಗವದ್ಗೀತೆ ಸೇರಿಸಬೇಕು ಎನ್ನುವ ಚರ್ಚೆಯಾಗುತ್ತಿದೆ. ಪಠ್ಯದಲ್ಲಿ ಭಗವದ್ಗೀತೆ ಸೇರಿಸಬೇಕು. ಪಠ್ಯದಲ್ಲಿ ಭಗವದ್ಗೀತೆ ಸೇರಿಸುವುದರ ಜೊತೆಗೆ ಅದನ್ನ ಕಡ್ಡಾಯವಾಗಿ ಮಕ್ಕಳಿಗೆ ಕಲಿಸಬೇಕು ಎಂದು ಒತ್ತಾಯಿಸಿದರು. ಸಮಾಜದ ಸ್ಥಿತಿಗತಿಗಳನ್ನು, ಆಗುಹೋಗುಗಳನ್ನು ಗಮನಿಸಿದರೆ ಮನಸ್ಸುಗಳು ಅನೇಕ ರೀತಿಯಲ್ಲಿ ಒಡೆದು ಹೋಗಿವೆ. ಭಾಷೆಗಾಗಿ, ಗಡಿಗಳಿಗಾಗಿ, ನೀರಿಗಾಗಿ, ಆಹಾರ ಪದ್ಧತಿಗಳಿಗಾಗಿ, ಪ್ರತಿಯೊಂದರಲ್ಲೂ ಭಿನ್ನತೆಗಳನ್ನು ಕಾಣುತ್ತಿದ್ದೇವೆ. ನಮ್ಮಲ್ಲಿ ಏಕತೆ ಬೆಳೆಯಬೇಕಾದರೆ ಅದಕ್ಕೆ ಭಗವದ್ಗೀತೆಯೇ ಮೂಲ ಆಧಾರವಾಗಿರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಗುಜರಾತ್ ಚುನಾವಣೆ
ಇಂದು ಎರಡನೇ ಹಂತದ ಮತದಾನ



ಅಹಮದಾಬಾದ್: ಗುಜರಾತ್ ವಿಧಾನಸಭಾ ಚುನಾವಣಾ ಸಮರ ಅಂತಿಮ ಹಂತ ತಲುಪಿದ್ದು, ಸೋಮವಾರ 2ನೇ ಹಂತದಲ್ಲಿ 14 ಜಿಲ್ಲೆಗಳ 93 ವಿಧಾನಸಭಾ ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. 2017ರ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿ ಈ ಕ್ಷೇತ್ರಗಳಲ್ಲಿ 51 ಸ್ಥಾನಗಳನ್ನು ಗೆದ್ದಿತ್ತು. ಕಾಂಗ್ರೆಸ್ 39 ಹಾಗೂ ಇತರರು 3 ಸ್ಥಾನ ಪಡೆದುಕೊಂಡಿದ್ದರು.

ಕೇಂದ್ರ ಗುಜರಾತ್‌ನಲ್ಲಿ ಬಿಜೆಪಿ 37 ಸ್ಥಾನ ಪಡೆದಿದ್ದರೆ, ಕಾಂಗ್ರೆಸ್ 22 ಕ್ಷೇತ್ರಗಳಲ್ಲಿ ವಿಜಯಶಾಲಿಯಾಗಿತ್ತು. ಉತ್ತರ ಗುಜರಾತ್‌ನಲ್ಲಿ ಕಾಂಗ್ರೆಸ್ 17, ಬಿಜೆಪಿ 14 ಸ್ಥಾನ ಪಡೆದುಕೊಂಡಿದ್ದವು.

ಶನಿವಾರ ಸಂಜೆಯೇ ಬಹಿರಂಗ ಪ್ರಚಾರ ಅಂತ್ಯಗೊಂಡಿದೆ. ಡಿ.1ರಂದು ಮೊದಲ ಹಂತದಲ್ಲಿ 89 ಕ್ಷೇತ್ರಗಳಲ್ಲಿ ಶೇ.63.31ರಷ್ಟು ಮತದಾನವಾಗಿದೆ. ಎರಡನೇ ಹಂತದಲ್ಲಿ 61 ರಾಜಕೀಯ ಪಕ್ಷಗಳ 833 ▶ 8ನೇ ಪುಟಕ್ಕೆ

ರಾಜ್ಯಾದ್ಯಂತ ಆಸ್ತಿ ನೋಂದಣಿ ಪ್ರಮಾಣ ಜಿಗಿತ
ಸರ್ಕಾರದ ಆದಾಯ ಹೆಚ್ಚಳ

ಬೆಂಗಳೂರು: ಕೋವಿಡ್ ಲಾಕ್‌ಡೌನ್‌ನಿಂದ ಮಂಕಾಗಿದ್ದ ಆಸ್ತಿ ನೋಂದಣಿ ಇದೀಗ ಮತ್ತೆ ಸಹಜ ಸ್ಥಿತಿಗೆ ಮರಳುತ್ತಿದೆ. ಹಣದುಬ್ಬರ, ದುಬಾರಿ ಬಡ್ಡಿದರ, ಅನಿಶ್ಚಿತತೆಯ ಹೊರತಾಗಿಯೂ ಪ್ರಸಕ್ತ 2022–23 ಸಾಲಿನಲ್ಲಿ ರಾಜ್ಯಾದ್ಯಂತ ಆಸ್ತಿ ಪತ್ರಗಳ ನೋಂದಣಿ ಪ್ರಮಾಣ ಗಣನೀಯ ಏರುಗತಿಯಲ್ಲಿದೆ.



ಕೋವಿಡ್‌ನಿಂದಾಗಿ 2 ವರ್ಷ ಭೂಮಿ ಖರೀದಿ–ಮಾರಾಟ ವಹಿವಾಟು ಸಂಪೂರ್ಣ ನೆಲಕಚ್ಚಿತ್ತು. ಇದರಿಂದ ರಾಜ್ಯಾದ್ಯಂತ ಆಸ್ತಿ ಪತ್ರಗಳ ನೋಂದಣಿ ಪ್ರಕ್ರಿಯೆಯಲ್ಲಿ ಬಹುತೇಕ ಕುಸಿತ ಕಂಡಿತ್ತು. 2020–21ರಲ್ಲಿ ಲಾಕ್‌ಡೌನ್ ಕಾರಣ 24 ಮಾರ್ಚ್ 2020ರಿಂದ 24 ಏಪ್ರಿಲ್ 2020ವರೆಗೆ ಉಪನೋಂದಣಿ ಕಚೇರಿಗಳು ಮುಚ್ಚಿದ್ದವು. ಇನ್ನು 2021–22ರಲ್ಲಿ ಎರಡನೇ ಅಲೆ ವೇಳೆ ಸರ್ಕಾರ ಹೇರಿದ ಲಾಕ್‌ಡೌನ್ ಕಾರಣ ಮೇ 10ರಿಂದ ಜೂ.7ರವರೆಗೆ ಉಪ ನೋಂದಣಿ ಕಚೇರಿಗಳು ಮುಚ್ಚಲ್ಪಟ್ಟಿದ್ದವು. 2022–23 ಸಾಲಿನಲ್ಲಿ ನವೆಂಬರ್‌ವರೆಗೆ ರಾಜ್ಯಾದ್ಯಂತ ▶ 8ನೇ ಪುಟಕ್ಕೆ

ಈ ವರ್ಷ 100 ಆಸ್ಪತ್ರೆಗಳು ಮೇಲ್ದರ್ಜೆಗೆ

ಶಿಗ್ಗಾಂವಿ, ಡಿ. 4– ಈ ವರ್ಷ ನಮ್ಮ ಸರ್ಕಾರ ಆರೋಗ್ಯ ಕ್ಷೇತ್ರಕ್ಕೆ ಅತ್ಯಧಿಕ ಹಣವನ್ನು ಬಜೆಟ್‌ನಲ್ಲಿ ಕೊಟ್ಟಿದ್ದು, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಸಮುದಾಯದ ಆರೋಗ್ಯ ಕೇಂದ್ರದಿಂದ 100 ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದನ್ನು ಇದೇ ವರ್ಷ ಮಾಡುತ್ತಿದ್ದೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.



ಶಿಗ್ಗಾಂವಿಯಲ್ಲಿ 250 ಬೆಡ್‌ನ ಆಸ್ಪತ್ರೆ ಮೇಲ್ದರ್ಜೆಗೇರಿಸುವ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು. ಜನರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಅದಕ್ಕೆ ಸ್ಪಂದಿಸಿ ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ. ನಮ್ಮ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಒದಗಿಸಿ ರಾಜ್ಯದಲ್ಲಿ ಪ್ರತಿದಿನ 30 ಸಾವಿರದಿಂದ 60 ಸಾವಿರ ಸೈಕಲ್‌ಗೆ ಡಯಾಲಿಸಿಸ್‌ನ್ನು ಹೆಚ್ಚಿಸಿದ್ದೇವೆ. 12 ಹೊಸ ಕ್ಯಾನ್ಸರ್ ಕೇಂದ್ರಗಳನ್ನು ನಾವು ಪ್ರಾರಂಭ ಮಾಡುತ್ತಿದ್ದೇವೆ ಎಂದರು. ರಾಜ್ಯದಲ್ಲಿ ಇದೇ ಡಿಸೆಂಬರ್‌ನಿಂದ 437 ನಮ್ಮ ಕ್ಲಿನಿಕ್ ಆರಂಭ ಮಾಡುತ್ತಿದ್ದೇವೆ. ಯಾವುದಾದರೂ ಸಣ್ಣ ಪುಟ್ಟ ರೋಗ ಬಂದರೆ ಜನರು ಮುಖ್ಯ ಆಸ್ಪತ್ರೆಗೆ ಬರುವ ಅವಶ್ಯಕತೆ ಇಲ್ಲ. ನಮ್ಮ ಕ್ಲಿನಿಕ್‌ಗೆ ಹೋದರೆ ಅಲ್ಲಿ ಔಷಧ ಉಪಚಾರ ಮಾಡುವ ವ್ಯವಸ್ಥೆ ಮಾಡಿದ್ದೇವೆ. 60 ಮೇಲ್ಪಟ್ಟವರ ಕಣ್ಣಿನ ತಪಾಸಣೆ ಮಾಡಿ, ಕನ್ನಡಕ ಕೊಡುವ ವ್ಯವಸ್ಥೆ ಇದೇ ವರ್ಷ ಮಾಡುತ್ತಿದ್ದೇವೆ. ಕಾಕ್ಲಿಯರ್ ಇಂಪ್ಲಾಂಟ್‌ಗೆ 500 ಕೋಟಿ ರೂ. ಕೊಟ್ಟಿದ್ದೇವೆ. 1 ಕೋಟಿಗಿಂತ ಹೆಚ್ಚು ಆಯುಷ್ಮಾನ್ ಕಾರ್ಡ್ ಕೊಡುತ್ತಿದ್ದೇವೆ. ಇದೊಂದು ದಾಖಲೆ. ಕೋವಿಡ್ ನಿಯಂತ್ರಣಕ್ಕೆ ವೈದ್ಯರ ಸೇವೆ ಅಪಾರ. ತಮ್ಮ ಜೀವದ ಹಂಗು ತೊರೆದು ರೋಗಿಗಳ ಜೀವ ಉಳಿಸಿದ್ದಾರೆ ಎಂದರು.

ಶ್ರೀರಂಗಪಟ್ಟಣದಲ್ಲಿ ಸಂಭ್ರಮದ ಹನುಮ ಸಂಕೀರ್ತನಾ ಯಾತ್ರೆ

ಶ್ರೀರಂಗಪಟ್ಟಣ, ಡಿ.4– ಹನುಮ ಜಯಂತಿ ಅಂಗವಾಗಿ ಪಟ್ಟಣದಲ್ಲಿ ಸಾವಿರಾರು ಹನುಮ ಮಾಲಾಧಾರಿಗಳು ಭಾನುವಾರ ಸಂಭ್ರಮ ಸಡಗರದಿಂದ ಹನುಮ ಸಂಕೀರ್ತನಾ ಶೋಭಾ ಯಾತ್ರೆ ನಡೆಸಿದರು. ಪಟ್ಟಣದ ಹೊರವಲಯದಲ್ಲಿರುವ ಗಂಜಾಂನ ಕಾವೇರಿ ನದಿ ದಂಡೆಯಲ್ಲಿರುವ ಆಂಜನೇಯಸ್ವಾಮಿ ದೇವಾಲಯದಲ್ಲಿ ಡಾ.ಭಾನುಪ್ರಕಾಶ್ ಶರ್ಮಾ ವಿಶೇಷ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡುವ ಮೂಲಕ ಬೆಳಗ್ಗೆ 10.30ಕ್ಕೆ ಮೆರವಣಿಗೆಯ ಸಂಕೀರ್ತನಾ ಯಾತ್ರೆಗೆ ಚಾಲನೆ ನೀಡಿದರು.

ಮಾಲಾಧಾರಿಗಳು ಗಂಜಾಂನಿಂದ ಪಟ್ಟಣದ ಮೂಡಲ ಬಾಗಿಲು ಆಂಜನೇಯಸ್ವಾಮಿ ದೇವಾಲಯದವರೆಗೆ ಸುಮಾರು 6 ಕಿ.ಮೀ ಯಾತ್ರೆ ಕೈಗೊಂಡು, ಗಂಜಾಂನ ಬೇಸಿಗೆ ಅರಮನೆ, ಆಸ್ಪತ್ರೆ, ಬೆಂಗಳೂರು–ಮೈಸೂರು ಹೆದ್ದಾರಿ ಹಾಗೂ ಪುರಾತನ ಕೋಟೆದ್ವಾರದಲ್ಲಿ ಯಾತ್ರೆ ಸಂಚರಿಸಿ ಮಧ್ಯಾಹ್ನ ಸುಮಾರು 2.30ರ ವೇಳೆಗೆ ಐತಿಹಾಸಿಕ ಮೂಡಲ ಬಾಗಿಲು ಆಂಜನೇಯಸ್ವಾಮಿ ದೇವಾಲಯ ತಲುಪಿತು.

ಮೆರವಣಿಗೆಯ ಉದ್ದಕ್ಕೂ ಹಿಂದೂ ಹಾಗೂ ಹನುಮ ಮಾಲಾಧಾರಿಗಳು ಕೇಸರಿ ಧ್ವಜ ಹಿಡಿದು, ಭಗವಾಧ್ವಜಗಳನ್ನು ಬೀಸಿ, ಜೈ ಶ್ರೀರಾಂ, ಶ್ರೀರಾಮ, ಭಜರಂಗಿ ಭಜರಂಗಿ ಎಂಬ ಘೋಷಣೆಗಳು ಮೊಳಗಿಸಿ ಜೈ ಹನುಮ ಎಂಬ ಘೋಷಣೆ ಕೂಗಿ ಹನುಮ ಚಾಲಿಸಾ ಪಠಿಸಿ ಸಂಭ್ರಮಿಸಿದರು. ದಾರಿಯುದ್ದಕ್ಕೂ ಭಜನೆ, ಕೀರ್ತನೆಗಳನ್ನು ಮಾಡಿದರು. ಪುಟ್ಟ ಮಕ್ಕಳು ಹಾಗೂ ಕೆಲವರು ಶ್ರೀರಾಮ, ಲಕ್ಷ್ಮಣ, ಹನುಮಂತ ವೇಷ ತೊಟ್ಟು ಗಮನ ಸೆಳೆದರು. ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ನಗಾರಿ, ಗೊಂಬೆಕುಣಿತ, ತಮಟೆ ಹಾಗೂ ಡಿಜೆ ವಾದ್ಯಗಳೊಂದಿಗೆ ಹನುಮ ಭಕ್ತರು ದಾರಿಯುದ್ದಕ್ಕೂ ಭಜನೆ, ಕೀರ್ತನೆಗಳನ್ನು ಮಾಡಿದರು. ಮಂಡ್ಯ ಮಾತ್ರವಲ್ಲದೆ ರಾಮನಗರ, ಮೈಸೂರು, ಮದ್ದೂರು, ಪಾಂಡವಪುರ, ನಾಗಮಂಗಲ, ಕೆ.ಆರ್. ಪೇಟೆ ಹಾಗೂ ಶ್ರೀರಂಗಪಟ್ಟಣ ಸುತ್ತಮುತ್ತಲ ಗ್ರಾಮಗಳಿಂದ ಸುಮಾರು 15–20 ಸಾವಿರಕ್ಕೂ ಹೆಚ್ಚು ಹನುಮ ಭಕ್ತರು ಈ ಸಂಕೀರ್ತನಾ ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಧಾರ್ಮಿಕ ವಿಧಿ ವಿಧಾನಗಳಂತೆ ಮಾಲಾಧಾರಿಗಳು ಮೂಡಲಬಾಗಿಲು ಆಂಜನೇಯ ಸ್ವಾಮಿ ದೇವಾಲಯದಲ್ಲಿ ತಮ್ಮ ಮಾಲೆಗಳನ್ನು ವಿಸರ್ಜಿಸಿದರು.



ಸಚಿವ ಸಾಥ್: ಸಂಕೀರ್ತನಾ ಯಾತ್ರೆಗೆ ಸಚಿವ ಕೆ.ಸಿ.ನಾರಾಯಣಗೌಡ ಭಾಗಿಯಾಗಿ ಮೆರವಣಿಗೆಯಲ್ಲಿ ಸ್ವಲ್ಪ ದೂರ ಸಾಗಿ ಯಾತ್ರೆಗೆ ಬೆಂಬಲ ನೀಡಿದರು. ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ಉಮೇಶ್, ತಾಲೂಕು ಅಧ್ಯಕ್ಷ ಪಿ.ಹಳ್ಳಿ ರಮೇಶ್, ಜಿಲ್ಲಾ ಉಪಾಧ್ಯಕ್ಷ ಟಿ.ಶ್ರೀಧರ್, ಯುವ ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಫೈಟರ್ ರವಿ ಇತರರು ಸಚಿವರ ಜೊತೆ ಸಾಗಿದರು.

ಯಾತ್ರೆಗೆ ಜನರ ಸ್ವಾಗತ: ಗಂಜಾಂ ಹಾಗೂ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗುತ್ತಿದ್ದ ಸಂಕೀರ್ತನಾ ಯಾತ್ರೆಗೆ ಜನರು ಸಹ ತಮ್ಮ ತಮ್ಮ ಮನೆಗಳ ಮುಂದೆ ರಂಗೋಲಿ ಹಾಕಿ ಯಾತ್ರೆಗೆ ಸ್ವಾಗತ ಕೋರಿದರು. ಅಲ್ಲದೆ ಹನುಮ ಮಾಲಾಧಾರಿಗಳಿಗೆ ಮಜ್ಜಿಗೆ, ಪಾನಕ ನೀಡಿ ಸತ್ಕರಿಸಿದರು. ಹನುಮನ ಉತ್ಸವ ಮೂರ್ತಿಗೆ ಹಣ್ಣು, ಕಾಯಿ ಹೊಡೆದು ಪೂಜೆ ಸಲ್ಲಿಸಿದರು.

'ಮಂದಿರವಿಲ್ಲೇ ಕಟ್ಟುವೆವು': ಸಂಕೀರ್ತನಾ ಯಾತ್ರೆ ಪಟ್ಟಣದ ಜಾಮಿಯಾ ಮಸೀದಿ ಬಳಿ ಆಗಮಿಸುತ್ತಿದ್ದಂತೆ ▶ 8ನೇ ಪುಟಕ್ಕೆ

ಮಾತಿನ ಚಕಮಕಿ: ಪಟ್ಟಣ ಪುರಸಭೆ ವೃತ್ತದ ಬಳಿ ಸಂಕೀರ್ತನ ಯಾತ್ರೆ ಬಂದ ವೇಳೆ ಹನುಮ ಮಾಲಾಧಾರಿಗಳು ಮಂದಿರ ಕಟ್ಟುವೆವು ಎಂದು ಜಾಮೀಯ ಮಸೀದಿ ಎದುರು ಕೂಗುತ್ತಿದ್ದರು. ಕೆಲ ಹನುಮ ಮಾಲಾಧಾರಿಗಳು ರಾಮ, ಹನುಮನಿಗೆ ಜೈಕಾರ ಕೂಗಿ ಮಸೀದಿಗೆ ನುಗ್ಗಲು ಯತ್ನಿಸಿದ ಘಟನೆ ನಡೆಯಿತು. ಪೊಲೀಸರು ಮಸೀದಿಗೆ ನುಗ್ಗಲು ಯತ್ನಿಸಿದವರನ್ನು ತಡೆದರು ಈ ವೇಳೆ ನೂಕು ನುಗ್ಗಲು ಏರ್ಪಟ್ಟು, ಕೆಲ ಕಾಲ ಪೊಲೀಸರು ಹಾಗೂ ಮಾಲಾಧಾರಿಗಳ ನಡುವೆ ಮಾತಿನ ಚಕಮಕಿ ನಡೆಯಿತು.

ನಕ್ಕರೆ ಅದೇ ಸ್ವರ್ಗ

ಟೀಚರ್: ಗುಂಡ ಮನುಷ್ಯನಿಗೂ ಮೊಬೈಲ್‌ಗೂ ಏನು ವ್ಯತ್ಯಾಸ?
ಗುಂಡ : ಮೇಡಂ ಮನುಷ್ಯ ಕಾಲು ಇಲ್ಲದೆ ಬ್ಯಾಲೆನ್ಸ್ ಮಾಡೋಕ್ಕಾಗಲ್ಲ, ಮೊಬೈಲ್‌ನಲ್ಲಿ ಬ್ಯಾಲೆನ್ಸ್ ಇಲ್ಲದೆ ಕಾಲ್ ಮಾಡೋಕೆ ಆಗಲ್ಲ.

ಮೈಸೂರು ಮಿತ್ರ

ಸೋಮವಾರ, 5 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕೊಟ್ಟಿದ್ದು, ತನಗೆ, ಬಚ್ಚಿಟ್ಟಿದ್ದು ಪರರಿಗೆ.

ನಿಮ್ಮ ಪತ್ರಗಳು

ಕೊಳಚೆ ಕೆರೆಯಂತಿರುವ ವಿಜಯನಗರ ಬಡಾವಣೆ

ಮಾನ್ಯರೇ,

ಮೈಸೂರಿನ ವಿಜಯನಗರ 4ನೇ ಹಂತ ದೊಡ್ಡ ಬಡಾವಣೆ ಎಂಬ ಹೆಗ್ಗಳಿಕೆ ಪಡೆದಿದೆ. ಆದರೆ ಈ ಬಡಾವಣೆ ಹೆಬ್ಬಾಗಿಲಲ್ಲೆ ರಸ್ತೆ ಎಡ ಮತ್ತು ಬಲ ಭಾಗದಲ್ಲಿ ಕೊಳಚೆ ನೀರಿನ ಕೆರೆಯಂತಾಗಿದ್ದು, ಅದು ವಿಜಯನಗರ 4ನೇ ಹಂತ ಹೆಬ್ಬಾಗಿಲು ಎಂಬ ನಾಮಫಲಕ ಹೊಂದಿರುವ ಆರ್ಚ್‌ನ ಬಳಿಯೇ ಸ್ವಾಗತ ನೀಡುತ್ತದೆ.

ಎಷ್ಟೋ ವರ್ಷಗಳಿಂದ ಸಂಗ್ರಹವಾಗಿರುವ ಕೊಳಚೆ ನೀರು ಬಡಾವಣೆಗೆ ಪ್ರವೇಶಿಸುವಾಗಲೆ ಮೂಗಿಗೆ ರಾಚುತ್ತದೆ. ಇದನ್ನು ಆಸ್ವಾದಿಸಿಯೇ ಬಡಾವಣೆ ಪ್ರವೇಶ ಮಾಡಬೇಕು. ಇದರ ಸುತ್ತ-ಮುತ್ತ ಇರುವ ನಿವಾಸಿಗಳಿಗಂತು ನಿತ್ಯ ನರಕಯಾತನೆ ಅನುಭವಿಸುವಂತಾಗಿದೆ. ಹೆಸರಿಗೆ ಪ್ರತಿಷ್ಠಿತ ಬಡಾವಣೆ. ಮೇಲೆ ತಳುಕು ಒಳಗೆ ಹುಳುಕು ಎನ್ನುವಂತೆ ಈ ಭಾಗದಲ್ಲಿ ನಿವೇಶನ ಹೊಂದಿರುವವರು ಮನೆ ಕಟ್ಟುವಂತಿಲ್ಲಾ, ನಿವೇಶನ ಮಾರೋಣವೆಂದರೆ ಕೊಳ್ಳುವವರು ಇಲ್ಲ ಎಂಬಂತಾಗಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಗರ ಯೋಜನಾ ಪ್ರಾಧಿಕಾರದ ಇಂಜಿನಿಯರ್‌ಗಳು ಯಾವ ರೀತಿ ಯೋಜನೆ ರೂಪಿಸಿದರೊ ಗೊತ್ತಿಲ್ಲಾ. ಯಾವುದೇ ಬಡಾವಣೆ ನಿರ್ಮಾಣಕ್ಕೂ ಮುನ್ನ ನೀರು ನಿಲ್ಲದಂತೆ ನಿರ್ಮಿಸುವುದು. ಅದನ್ನು ಕಾರ್ಯರೂಪಕ್ಕೆ ತರುವುದು ಪ್ರಾಧಿಕಾರದ ಪ್ರಥಮ ಆದ್ಯತೆಯಲ್ಲವೇ. ಬಡಾವಣೆ ನಿರ್ಮಾಣ ಮಾಡಿ 29 ವರ್ಷ ಕಳೆದರೂ ಕೊಳಚೆ ನೀರು ಕೆರೆಯಂತೆ ನಿಂತಿದೆ. ಅಂದರೆ ಇದು ಪ್ರಾಧಿಕಾರದ ಕಳಪೆ ನಗರ ಯೋಜನೆ ಆಗುವುದಿಲ್ಲವೇ. ಈಗಲಾದರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಹಾಗೂ ಈ ಭಾಗದ ಶಾಸಕರು ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸಿ ಪ್ರತಿಷ್ಠಿತ ಬಡಾವಣೆಯ ಮಾನ ಕಾಪಾಡಬೇಕಾಗಿ ಈ ಮೂಲಕ ಮನವಿ ಮಾಡಿಕೊಳ್ಳುತ್ತೇನೆ.

– ಬಿ.ಜಿ. ರಂಗೇಗೌಡ, ವಿಜಯನಗರ.

ಮೈಸೂರಲ್ಲಿ ಪಿಜಿಗಳ ಬಗ್ಗೆ ಗಮನ ಅಗತ್ಯ

ಮಾನ್ಯರೆ,

ಇತ್ತೀಚೆಗೆ ನಡೆದ ಮಂಗಳೂರು ಕುಕ್ಕರ್ ಸ್ಫೋಟದ ನಂತರ ಮೈಸೂರು ನಗರದ ಪೊಲೀಸ್ ಪ್ರತಿಯೊಬ್ಬ ಬಾಡಿಗೆದಾರು ವಿವರಗಳನ್ನು ಸುರಕ್ಷಾ ನಮೂನೆಯಲ್ಲಿ ಪಡೆಯುವಂತೆ ಮನೆ ಮಾಲೀಕರಿಗೆ ಸೂಚಿಸಿರುವುದು ಒಂದು ಒಳ್ಳೆಯ ಬೆಳವಣಿಗೆ.

ಮೈಸೂರು ನಗರದ ಕೆಲವು ಬಡಾವಣೆಗಳಲ್ಲಿ ಪೇಯಿಂಗ್ ಗೆಸ್ಟ್(ಪಿಜಿ)ಗಳಿವೆ. ಎಲ್ಲಾ ಪಿಜಿಗಳು, ವಿದ್ಯಾರ್ಥಿಗಳು, ಉದ್ಯೋಗಿಗಳು ಹಾಗೂ ಮಹಿಳೆಯರಿಗೆ ಆಸರೆಯಾಗಿದೆ. ವಿಷಾದಕರ ವಿಷಯವೆಂದರೆ ಯಾವುದೇ ಪಿಜಿ ಮಾಲೀಕರು ಯಾವುದೇ ನಿಯಮಗಳನ್ನು ಪಾಲಿಸುತ್ತಿಲ್ಲ.

ಕೆಲವೊಂದು ಪಿಜಿ ಮಾಲೀಕರು ಬೇರೆಲ್ಲೋ ಇದ್ದು ಪಿಜಿಯಲ್ಲಿರುವವರಿಗೆ ಸಮಯಕ್ಕೆ ಸರಿಯಾಗಿ ಊಟ-ತಿಂಡಿ ಒದಗಿಸಿ ನಾಪತ್ತೆಯಾಗಿ ಬಿಡುತ್ತಾರೆ. ಕೆಲವೊಂದು ಪಿಜಿಗಳಲ್ಲಿ ಮಾಲೀಕರು, ಮೇಲ್ವಿಚಾರಕರು ಸ್ಥಳದಲ್ಲಿ ಇಲ್ಲದಿರುವುದು ವಿದ್ಯಾರ್ಥಿನಿಯರ, ಮಹಿಳೆಯರ ಭದ್ರತೆಯ ಬಗ್ಗೆ ಕಳವಳಕಾರಿಯಾಗಿದೆ. ಕೆಲವರು ಇದನ್ನೇ ದುರುಪಯೋಗ ಪಡಿಸಿಕೊಂಡು, ಇಷ್ಟ ಬಂದ ಸಮಯಕ್ಕೆ ಪಿಜಿಗೆ ಬಂದು-ಹೋಗುವುದನ್ನು ಮಾಡುತ್ತಿರುತ್ತಾರೆ. ಕೆಲವೊಂದು ಸಮಯದಲ್ಲಿ ಮಧ್ಯರಾತ್ರಿಯಲ್ಲೂ ಪಿಜಿಗೆ ಬರುವ ದೃಶ್ಯ ಕಂಡು ಬರುತ್ತಿದೆ.

ಪಿಜಿ ಮಾಲೀಕರು ಕೆಲವು ನಿಯಮಗಳನ್ನು ಪಾಲಿಸುವಂತೆ ಪೊಲೀಸರು ಸೂಚಿಸಬೇಕಾಗಿದೆ. ಪ್ರತಿಯೊಂದು ಪಿಜಿಯ ಮುಂದೆ ಕಡ್ಡಾಯವಾಗಿ ನಾಮಫಲಕ ಅಳವಡಿಸುವುದು, ಪಿಜಿ ಮಾಲೀಕರ ಹೆಸರು, ದೂರವಾಣಿ ಸಂಖ್ಯೆ ಮತ್ತು ಮೇಲ್ವಿಚಾರಕರ ಹೆಸರು ಮತ್ತು ದೂರವಾಣಿ ಸಂಖ್ಯೆ ಹಾಕಬೇಕು. ಪ್ರತಿಯೊಂದು ಪಿಜಿಯ ಮುಂದೆ ಮುಖ್ಯ ದ್ವಾರ ಮುಚ್ಚುವ ಸಮಯ ಕಡ್ಡಾಯವಾಗಿ ನಮೂದಿಸಬೇಕು. ಮಹಿಳೆಯರ ಪಿಜಿಯಲ್ಲಿ 24X7ರಂತೆ ಮಾಲೀಕರು ಅಥವಾ ಮೇಲ್ವಿಚಾರಕರು ಕಡ್ಡಾಯವಾಗಿ ಸ್ಥಳದಲ್ಲೇ ಇರಬೇಕು. ಈ ನಿಯಮಗಳನ್ನು ಪಾಲಿಸಿದರೆ ಒಳಿತು. ಕೆಲವೊಂದು ಪಿಜಿ ಮಾಲೀಕರು ಇದನ್ನು ಲಾಭದಾಯಕ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆಯೇ ಹೊರತು ಇವರಲ್ಲಿ ವಿದ್ಯಾರ್ಥಿನಿಯರ, ಮಹಿಳೆಯರ ಭದ್ರತೆಯ ಬಗ್ಗೆ ಕಿಂಚಿತ್ತೂ ಕಾಳಜಿ ಇರುವುದಿಲ್ಲ. ಪೊಲೀಸ್ ಇಲಾಖೆ ಕಠಿಣ ಕ್ರಮ ಕೈಗೊಳ್ಳುತ್ತೆ ಎಂಬ ಅಭಿಲಾಷೆಯೊಂದಿಗೆ.

– ಚಿಕ್ಕವೀರಯ್ಯ, ಮೈಸೂರು.

'ಗೋಹತ್ಯೆ ನಿಷೇಧ'ದಿಂದ ಯಾರಿಗೆ ಲಾಭ

ಮಾನ್ಯರೆ,

ರಾಜ್ಯದಲ್ಲಿ 'ಗೋಹತ್ಯೆ ನಿಷೇಧ' ಕಾನೂನು ಜಾರಿಗೆ ತಂದಿರುವುದು, ಯಾರಿಗೆ ಲಾಭ ವಾಗಿದೇಯೋ ಗೊತ್ತಿಲ್ಲ? ಆದರೆ, ಕೃಷಿಯನ್ನೇ ನಂಬಿ ಜಾನುವಾರುಗಳಿಂದ, ವ್ಯವಸಾಯ ಮಾಡುವ ರೈತಾಪಿ ವರ್ಗಕ್ಕಂತೂ ತೀವ್ರ ತೊಂದರೆಯಾಗಿದೆ. ವಯಸ್ಸಾದ ಜಾನುವಾರುಗಳನ್ನು ನಿರ್ವಹಣೆ ಮಾಡುವುದಾದರೂ ಹೇಗೆ? ನಾವೇ ಸಾಕಿದ ಜಾನುವಾರುಗಳು ತಮ್ಮ ಕಣ್ಣ ಮುಂದೆಯೇ ಪ್ರಾಣ ಬಿಡುವುದನ್ನು ರೈತರು ನೋಡುವಂತಾಗಿದೆ, ವಯಸ್ಸಾದ, ಉಳುಮೆ ಮಾಡಲು ಸಾಧ್ಯವಿಲ್ಲದ ಹಸು ಒಂದಕ್ಕೆ ತಲಾ ಹತ್ತು ಸಾವಿರ ರೂಪಾಯಿಗಳನ್ನು 'ಜಾನುವಾರು ನಿರ್ವಹಣಾ' ವೆಚ್ಚವನ್ನು, ಸರ್ಕಾರ ಜಾರಿಗೆ ತರಲಿ, ಇಲ್ಲವೇ ಈಗಾಗಲೇ ಸರ್ಕಾರದ ಪುಣ್ಯಕೋಟಿ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರುವಂತಾಗಲಿ,

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ತೃತೀಯ ಲಿಂಗಿಗಳ ಸಾಧನೆ ಸರ್ವರಿಗೂ ಮಾದರಿ..!

ಮಾನ್ಯರೆ,

ಇತ್ತೀಚೆಗೆ ಪ್ರಕಟಗೊಂಡ ಸರ್ಕಾರಿ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ತೃತೀಯ ಲಿಂಗಿ ಕೋಟಾದಡಿಯಲ್ಲಿ ಮೂವರು ಸರ್ಕಾರಿ ಹುದ್ದೆ ಪಡೆಯುವಲ್ಲಿ ಯಶಸ್ವಿಯಾಗಿದ್ದು, ಇವರುಗಳ ಸಾಧನೆ ಹರ್ಷವೆನಿಸಿದೆ.! ತಮ್ಮದಲ್ಲದ ತಪ್ಪಿಗೆ ಹೆತ್ತವರು, ಬಂಧು ಬಳಗ ಹಾಗೂ ಸಮಾಜದಲ್ಲಿ ಶೋಷಣೆಗೆ ಒಳಗಾಗಿ ತೀರಾ ಮುಜುಗರಕ್ಕೆ ಈಡಾಗುವ ಇವರುಗಳು ಬೀದಿ ಬೀದಿಯಲ್ಲಿ ಭಿಕ್ಷಾಟನೆ ಮಾಡುತ್ತಾ ಜೀವನ ಸಾಗಿಸುವುದು ನೋವಿನ ಸಂಗತಿ.

ಸಮಾಜದಲ್ಲಿ ಬದುಕು ಕಟ್ಟಿಕೊಳ್ಳಲು ಇವರು ಪಾಡು ಕೇಳ ತೀರದು. ಸದ್ಯ, ಸುಪ್ರೀಂಕೋರ್ಟಿನ ತೀರ್ಪಿನಂತೆ ಶೇ. 1ರಷ್ಟು ಮೀಸಲಾತಿ ಸೌಲಭ್ಯವನ್ನು ಸರ್ಕಾರಿ ಕೆಲಸ ಪಡೆಯುವ ಮೂಲಕ ಸದ್ಬಳಕೆ ಮಾಡಿ ಸಾಧಿಸಿರುವುದು ಶ್ಲಾಘನೀಯ. ಸರ್ಕಾರಿ ಉದ್ಯೋಗಕ್ಕೆ ಸಿದ್ಧತೆ ನಡೆಸುವ ಅಪಾರ ಆಕಾಂಕ್ಷಿಗಳಿಗೆ ಇಂದಿನ ಯುವ ಸಮೂಹಕ್ಕೆ ಈ ತೃತೀಯ ಲಿಂಗಿಗಳು ನಿಜಕ್ಕೂ ಪ್ರೇರಣೆ ಎನ್ನಬಹುದು. ಸಾಮಾಜಿಕವಾಗಿ ನಿರ್ಲಕ್ಷ್ಯಕ್ಕೆ ಒಳಗಾಗಿ ನೊಂದು ಬೆಂದು, ಭೇದ ಭಾವಕ್ಕೆ ಒಳಗಾಗುತ್ತ ನಕಾರಾತ್ಮಕ ದೃಷ್ಟಿಕೋನಗಳಿಂದ ನೋಡುವ ಸಮೂಹದ ನಡುವೆ ಮೀಸಲಾತಿಯ ವರದಾನ ಹಾಗೂ ನ್ಯಾಯಯುತವಾದ ತನ್ನ ನೈತಿಕ ಹಕ್ಕಿನ ಅರಿವಿನಿಂದ ಛಲ ಬಿಡದ ಇವರುಗಳ ಸಾಧನೆ ಸಮಾಜದಲ್ಲಿ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಮುನ್ನೆಲೆಗೆ ಬರುತ್ತಿರುವುದು ಸಕಾರಾತ್ಮಕ ಅಂಶ. ಇಂತಹ ಬೆಳವಣಿಗೆಗಳಿಂದ ಸಂವಿಧಾನದ ಮೂಲಭೂತ ಹಕ್ಕುಗಳಲ್ಲಿ ಒಂದಾದ ಸಮಾನತೆಯ ಆಶಯದ ಹಕ್ಕನ್ನು ಎತ್ತಿ ಹಿಡಿಯುತ್ತಿದ್ದು ದೇಶದ ಗಣತಂತ್ರ ವ್ಯವಸ್ಥೆಗೆ ಸಿಕ್ಕಂತಹ ಅಭೂತಪೂರ್ವ ಗೆಲುವು. ಜೊತೆಗೆ ವೈಚಾರಿಕತೆ ಹಾಗೂ ವೈಜ್ಞಾನಿಕವಾಗಿ ಶೋಷಣೆ, ಅವಮಾನವನ್ನು ಮೆಟ್ಟಿ ಹಾಕಲು ಶಿಕ್ಷಣವು ಪ್ರಬಲ ಅಸ್ತ್ರ ಎಂದು ನಿರೂಪಿತವಾಗುತ್ತಿದೆ.

– ಅನಿಲ್‌ಕುಮಾರ್, ನಂಜನಗೂಡು.

ಇಂದು ವಿಶ್ವ ಮಣ್ಣಿನ ದಿನ: ಮಣ್ಣಿನ ಋಣ ತೀರಿಸುವ ದಿನ

2002ರಲ್ಲಿ ಮೊದಲ ಬಾರಿಗೆ ಮಣ್ಣಿನ ವಿಜ್ಞಾನಿಗಳ ಅಂತಾರಾಷ್ಟ್ರೀಯ ಒಕ್ಕೂಟ "ವಿಶ್ವ ಮಣ್ಣಿನ ದಿನ" ಆಚರಿಸುವ ಪ್ರಸ್ತಾವನೆಯನ್ನು ಥೈಲ್ಯಾಂಡಿನ ರಾಜಪ್ರಭುತ್ವದ ನೇತೃತ್ವದಲ್ಲಿ ವಿಶ್ವಸಂಸ್ಥೆಯಲ್ಲಿ ಮುಂದಿಟ್ಟಿತು. 2014ರ ಡಿಸೆಂಬರ್ 5ರಂದು ಮೊದಲ ಬಾರಿಗೆ ವಿಶ್ವಸಂಸ್ಥೆ ವಿಶ್ವ ಮಣ್ಣಿನ ದಿನಾಚರಣೆ ಆಚರಿಸಿತು. ಪ್ರತೀ ವರ್ಷವೂ ಹೊಸ ಧ್ಯೇಯ ವಾಕ್ಯದೊಂದಿಗೆ ಆಚರಿಸಲಾಗುತ್ತದೆ. ಈ ಬಾರಿಯ ಧ್ಯೇಯವಾಕ್ಯ "Soil where food begin"

ಹೌದಲ್ಲವೇ ಮಣ್ಣಿನ ಆರೋಗ್ಯವೇ ಪ್ರಕೃತಿಯ ಆರೋಗ್ಯ, ನಾವು ತಿನ್ನುವ ಆಹಾರದ ಆರೋಗ್ಯ ನಮ್ಮೆಲ್ಲರ ಆರೋಗ್ಯ ಎಂಥಾ ಸರಪಳಿ! ಮಣ್ಣಿನ ಜೀವಂತಿಕೆ ಪ್ರಕೃತಿಯ ಜೀವಂತಿಕೆ. ಮಣ್ಣಿನಲ್ಲಿರುವ ಸೂಕ್ಷ್ಮಜೀವಿಗಳು ಅದರಲ್ಲಿರುವ ಸಾವಯವ ವಸ್ತುಗಳಾದ ಎಲೆ, ಸತ್ತ ಜೀವಿಗಳ ದೇಹಗಳು, ಕಸ, ಕಡ್ಡಿ, ಆಹಾರದ ಪದಾರ್ಥಗಳು ಮುಂತಾದವುಗಳನ್ನು ವಿಘಟಿಸಿ, ಅವುಗಳನ್ನು ಮಣ್ಣಿಗೆ ಸೇರಿಸಬೇಕು. ಮಣ್ಣು ಈ ಜೀವಿಗಳನ್ನು ತನ್ನಲ್ಲಿ ಬೆಳೆಯುವ ಸಸ್ಯ, ಮರಗಿಡಗಳನ್ನು ಪೋಷಿಸಿ ಬೆಳೆಸುವಂತಿರಬೇಕು, ಸೂಕ್ತ ಅನಿಲಗಳು, ಲವಣಾಂಶಗಳು ಇದ್ದಲ್ಲಿ ಮಾತ್ರ ಮಣ್ಣಿನಲ್ಲಿ ಜೀವಂತಿಕೆ ಇದೆ. ಎಂದರ್ಥ. ಸಾಮಾನ್ಯವಾಗಿ ಮೇಲ್ಮೈಯಲ್ಲಿರುವ ಮಣ್ಣಿನಲ್ಲಿ ಮಾತ್ರ ಈ ರೀತಿಯ ಜೈವಿಕ ಘಟಕಗಳು ಇದ್ದು ಫಲವತ್ತಾಗಿರುತ್ತದೆ. ಇಂತಹ ಜೈವಿಕ ಘಟಕಗಳು, ಜೈವಿಕ ವೈವಿಧ್ಯಗಳು, ಬ್ಯಾಕ್ಟೀರಿಯಾ, ಶಿಲೀಂಧ್ರಗಳು, ವಲಯವಂತಗಳು, ಪ್ರೋಟೋ ಜೋವಗಳು, ಕೀಟಗಳು, ಸರೀಸೃಪಗಳು, ಸಸ್ತನಿಗಳು ಎಲ್ಲವನ್ನೂ ಕಾಪಾಡಬೇಕು. ಇಂತಹ ಜೈವಿಕ ವೈವಿಧ್ಯವಿರುವ ಮಣ್ಣಿನ ಫಲವತ್ತತೆ ನಾವಿಂದು ಮಣ್ಣಿಗೆ ಸೇರಿಸುತ್ತಿರುವ



ರಾಸಾಯನಿಕ ವಸ್ತುಗಳು, ಘನ ಮತ್ತು ದ್ರವ ತ್ಯಾಜ್ಯಗಳು ಮಾರಕವಾಗುತ್ತಿರುವುದರಿಂದ ಅದರಲ್ಲಿರುವ ಒಳ್ಳೆಯ ಸೂಕ್ಷ್ಮಜೀವಿಗಳು ಕಡಿಮೆಯಾಗಿವೆ. ಸಾವಯವ ವಸ್ತುಗಳು ವಿಘಟನೆಯಾಗದೇ ಮಣ್ಣಿನಲ್ಲಿರುವ ಹ್ಯೂಮಸ್ ಸಾವಯವ ಪದಾರ್ಥ ಹಾಗೆಯೇ ಉಳಿಯುವುದರಿಂದ ಮಣ್ಣು ತನ್ನ ಫಲವತ್ತತೆಯನ್ನು, ಜೈವಿಕ ವೈವಿಧ್ಯತೆಯನ್ನು ಕಳೆದುಕೊಳ್ಳುತ್ತಿದೆ.

ಮಣ್ಣು ಜಾಗೃತಿಗಾಗಿ ಸದ್ಗುರುಗಳು ಜಾಗತಿಕ ಬೈಕ್ ರ್ಯಾಲಿಯನ್ನೇನೋ ಮಾಡಿದರು. ವಿಷಯ ಜನಜಾಗೃತಿಯ ವಿಶೇಷ ವಿಷಯವಾಯಿತು. ತಿಳುವಳಿಕೆ ಕೊರತೆ, ಸಮರ್ಪಕ ಕಾನೂನಿನ ನಿಯಂತ್ರಣ ಇಲ್ಲದಿರುವುದರಿಂದ, ನಮ್ಮ ಆಹಾರೋತ್ಪಾದನೆಯಲ್ಲಿ ವಿಷಕಾರಿ ಕಳೇನಾಶಕ, ಕೀಟನಾಶಕಗಳನ್ನು ಮನಬಂದಂತೆ ಬಳಸಲಾಗುತ್ತಿದೆ. ಇವೇ ಫಸಲು ಉಳಿಸಿಕೊಳ್ಳಲು ಬಳಸುವ ಹಾಲಾಹಲವು ಮಣ್ಣಿನ ಫಲವತ್ತತೆಯನ್ನು ಹಾಳು ಮಾಡುತ್ತಿದ್ದು, ಬೆಳೆದು ತಿನ್ನುತ್ತಿರುವ ಆಹಾರದಲ್ಲಿಯೂ ಸೇರುತ್ತಿದೆ. ಪರಿಣಾಮ ಹುಲ್ಲು, ಕಳೆ, ತಿನ್ನುವ ಜಾನುವಾರುಗಳೂ ಸಾಯುತ್ತಿವೆ, ಹುಳು ಹುಪ್ಪಟೆಗಳೂ ನಾಶವಾಗುತ್ತಿವೆ. ತಾನೇ ಬೆಳೆದು ತಿನ್ನುತ್ತಿರುವ ಮನುಷ್ಯ ದುಷ್ಪರಿಣಾಮಗಳಾದ ನರಮಂಡಲದ ಸಮಸ್ಯೆಗಳು, ಹಾರ್ಮೋನ್‌ಗಳ ವ್ಯತ್ಯಾಸ, ಅಜೀರ್ಣ, ನಿಶ್ಶಕ್ತಿ, ನರದೌರ್ಬಲ್ಯ, ಗಂಟು ನೋವು, ಥೈರಾಯ್ಡ್ ಸಮಸ್ಯೆ, ಸಂಧಿವಾತ, ಕ್ಯಾನ್ಸರ್‌ನಂತಹ ಹತ್ತಾರು ಆರೋಗ್ಯದ ತೊಂದರೆಗಳಿಂದ ಬಳಲುತ್ತಿದ್ದಾನೆ. ಸಾಮಾನ್ಯ ಸ್ವಾಸ್ಥ್ಯವೇ ಹಳಿತಪ್ಪಿದ ಕಾಲಘಟ್ಟದಲ್ಲಿ ವಿಷಭರಿತ ಕೊಳಕು ನೀರು, ಮಣ್ಣು ಇವಿಷ್ಟೇ ನಾವು ಮುಂದಿನ ಪೀಳಿಗೆಗೆ ಉಳಿಸುತ್ತಿದ್ದೇವೆ. ಹೆಚ್ಚುತ್ತಿರುವ ಮಣ್ಣಿನ ಸವಕಳಿ ಮುಂದೆ ಕೃಷಿಗೆ ಸಂಚಕಾರ ತಂದಿದೆ. ಭೂ ಒಡಲಿನ ಮಣ್ಣು ನಂಜು ಬಟ್ಟಲಾಗಿದೆ. ಮಣ್ಣಿಂದ ಸಕಲ ವಸ್ತುಗಳೆಲ್ಲ, ಮಣ್ಣು ಬಿಟ್ಟವರಿಗೆ ಆಧಾರವಿಲ್ಲ ಎಂದು ಪುರಂದರ ದಾಸರು ಹಾಡಿದ್ದಾರೆ. ಮಣ್ಣಿನಲ್ಲಿಯೇ ಲೀನವಾಗಬೇಕಾದ ನಾವೆಲ್ಲಾ ಇನ್ನಾದರೂ ಕಸಿರು ಅಂದರೆ ಮಣ್ಣಿನ ಸತ್ವ ಉಳಿಸಿ ಆರೋಗ್ಯವನ್ನು ಕಾಪಾಡಿ, ಈ ಮಣ್ಣಿನ ಋಣ ತೀರಿಸಬೇಕಲ್ಲವೇ?



ಡಾ.ಸುಧಾ. ಎಂ.ಎನ್. ಮೈಸೂರು. 9448071933

ಜ್ಞಾನ, ಆದರ್ಶ ಜೀವನ ಹುಡುಕುವುದರೊಂದಿಗೆ ದೇಶಕ್ಕೆ ಏನಾದರೂ ಕೊಡುಗೆ ನೀಡಬೇಕು

ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಮುಕ್ತಿದಾನಂದಜೀ ಮಹಾರಾಜ್ ಸಲಹೆ

ಮೈಸೂರು, ಡಿ.4(ಜಿಎ)–ಜ್ಞಾನ ಮತ್ತು ಆದರ್ಶ ಜೀವನ ಹುಡುಕುವುದರೊಂದಿಗೆ ಭಾರತಕ್ಕೆ ಏನಾದರೂ ಕೊಡುಗೆ ನೀಡಬೇಕು ಎಂದು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಮುಕ್ತಿದಾನಂದಜೀ ಮಹಾರಾಜ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ದಿನೇಶ್ ಕೋಚಿಂಗ್ ಸೆಂಟರ್‌ನ ರಜತ ಮಹೋತ್ಸವದ ಅಂಗವಾಗಿ ಕಲಾಮಂದಿರದಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕ ಪಡೆದು ಉತ್ತೀರ್ಣರಾದ 8 ವಿದ್ಯಾರ್ಥಿಗಳು, ನಾಲ್ಕು ಮಂದಿ ಸಿಬಿಎಸ್‌ಇ ಟಾಪರ್ ಹಾಗೂ 600ಕ್ಕಿಂತ ಹೆಚ್ಚು ಅಂಕ ಪಡೆದ 105, ನಾನಾ ವಿಷಯಗಳಲ್ಲಿ ಪ್ರತಿ ಶತ ನೂರು ಅಂಕ ಗಳಿಸಿದ 238 ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದರು.

ಕಳೆದ 25 ವರ್ಷಗಳಿಂದ ನಾನು ರಾಮಕೃಷ್ಣ ಆಶ್ರಮದ ಶಾಲೆಯ ಎಲ್ಲಾ ವಿದ್ಯಾರ್ಥಿಗಳೊಂದಿಗೆ ನಿಕಟವಾದ ಸಂಬಂಧ ಹೊಂದಿದ್ದೇನೆ. ನಾ ಕಂಡ ಹಾಗೇ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆಯ ದಾಹ ಮುಖ್ಯವಾಗಿರಬೇಕು. ಈ ಅಂಶ ವಿದ್ಯಾರ್ಥಿ ಜೀವನದಲ್ಲಿದ್ದರೆ ಗೊತ್ತಿಲ್ಲದಿರುವುದನ್ನು ಗೊತ್ತು ಮಾಡಿಕೊಳ್ಳಬಹುದಾದ ಇಚ್ಛಾಶಕ್ತಿ



ಬೆಳೆಸಿಕೊಳ್ಳಬಹುದು ಎಂದರು.

ಅನೇಕ ತಿಂಗಳು, ವರ್ಷಗಳ ಪರಿಶ್ರಮದಿಂದ ಪಡೆದ ಹೆಚ್ಚು ಅಂಕ ನಿಮ್ಮಲ್ಲಿ ಆಂತರೀಕ ಸಂತೋಷವನ್ನುಂಟು ಮಾಡುತ್ತದೆ. ಆದರೆ, ಈ ವಿದ್ಯಾಭ್ಯಾಸ ಅಂಕ ಮತ್ತು ಪ್ರಶಸ್ತಿಗೆ ಸೀಮಿತಗೊಳ್ಳಬಾರದು. ವ್ಯಕ್ತಿತ್ವ ರೂಪಿಸಿಕೊಳ್ಳಲು ಸಹಕಾರಿಯಾಗಬೇಕು ಹೊರತು ನಿಮ್ಮ ಯಶಸ್ಸು ನಿಮ್ಮ ವಿದ್ಯಾರ್ಥಿ ಜೀವನಕ್ಕೆ ಕೊನೆಗೊಳ್ಳಬಾರದು. ಅನೇಕರು ಜ್ಞಾನ ಜೊತೆಗೆ ಇಷ್ಟೆಲ್ಲ ಅಂಕಗಳನ್ನು ಪಡೆದವರು ಅದನ್ನು ಸಮಾಜಕ್ಕೆ ಸೇವೆಗೆ ಅರ್ಪಣೆ ಮಾಡಿದ್ದರೆ, ನಮ್ಮ ಮೈಸೂರು ಆದರ್ಶ ನಗರವಾಗುತ್ತಿತ್ತು ಎಂದರು.

ಮನೆಯೇ ಮೊದಲ ಪಾಠ ಶಾಲೆ, ಜನನಿ ತಾನೇ ಮೊದಲ ಗುರು ಎಂಬಂತೆ ಪೋಷಕರು ನೀಡುವ ಶಿಕ್ಷಣ ಜೀವನದಲ್ಲಿ ಬಹಳ ಮುಖ್ಯವಾದದ್ದು, ಮನೆಯಲ್ಲಿ ತಂದೆ-ತಾಯಿ ಶಾಲೆಗೆ ಮಕ್ಕಳನ್ನು ಸೇರಿಸಿ ನಮ್ಮ ಕರ್ತವ್ಯ ಮುಗಿಯಿತು ಎಂದು ಭಾವಿಸುತ್ತಿದ್ದಾರೆ. ಪೋಷಕರು ಮನೆಯಲ್ಲಿಯೇ ಸುಲಭ ಸರಳವಾಗಿ ಸಂಸ್ಕೃತಿ, ಸಂಸ್ಕಾರವನ್ನು ಕಲಿಸುವ ಬಗ್ಗೆ ನಮ್ಮಲ್ಲಿಯೇ ಅನೇಕ ಅಂಶಗಳಿವೆ. ಆದರೆ ಅದನ್ನು ಯಾರೂ ಪಾಲಿಸುತ್ತಿಲ್ಲ. ಇದರೊಟ್ಟಿಗೆ ಬಹಳ ಮುಖ್ಯವಾದ ಶಿಕ್ಷಣವೆಂದರೆ, ಅದು ಮಾಧ್ಯಮಗಳ ಶಿಕ್ಷಣ. ಅರ್ಧದಷ್ಟು ವಿದ್ಯಾರ್ಥಿಗಳನ್ನು ನಾವು ಕಳೆದುಕೊಳ್ಳುತ್ತಿರುವುದು ಮನರಂಜನೆಯಿಂದ. ಮನರಂಜನೆ ಎಂಬುದು ಇತ್ತೀಚಿನ ದಿನಗಳಲ್ಲಿ ದೊಡ್ಡ ಪಿಡುಗಾಗಿ ಬಾಧಿಸುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಅಣುಬಾಂಬ್ ಕಂಡು ಹಿಡಿದುಕೊಂಡರೆ ಸೂಪರ್ ಪವರ್ ಆಗುವುದಿಲ್ಲ. ಬದಲಿಗೆ ಒಳ್ಳೆಯ ಆದರ್ಶ ಜೀವನದ ಶಕ್ತಿ ಹೊಂದಬೇಕು. ಅದುವೇ ಸೂಪರ್ ಪವರ್. ನಮ್ಮವರು ಮಾತ್ರ ಡಾಲರ್, ಪೌಂಡ್‌ಗಳನ್ನು ಹುಡುಕಿಕೊಂಡು ವಿದೇಶಗಳಿಗೆ ಹೋಗುತ್ತಾರೆ. ಇಂದು ವಿದೇಶಿಗರು ಭಾರತಕ್ಕೆ ಆಗಮಿಸಿ ಇಲ್ಲಿನ ಆಧ್ಯಾತ್ಮ, ಯೋಗ ಹಾಗೂ ಜ್ಞಾನ ಪಡೆಯುತ್ತಿದ್ದಾರೆ. ಇದು ನಮ್ಮ ದೇಶದ ಸಂಸ್ಕೃತಿಯ ಶಕ್ತಿಯಾಗಿದೆ. ಭಾರತ ವಿಶ್ವ ಗುರು ಆಗುವುದರೊಂದಿಗೆ ಮಾಡಲ್ ಪವರ್ ಆಗಬೇಕು ಎಂದು ತಿಳಿಸಿದರು.

ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ಸ್ವಾಮಿ ವಿರೇಶಾನಂದ ಸರಸ್ವತಿ ಮಾತನಾಡಿ, ಶೈಕ್ಷಣಿಕ ವೃದ್ಧಿಯೊಂದಿಗೆ ಸಮಾಜಕ್ಕೆ ಏನಾದರೂ ಕೊಡುಗೆ ನೀಡುವಲ್ಲಿ ವಿದ್ಯಾರ್ಥಿಗಳು ಉತ್ತಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು' ಎಂದರು.

ಬಳಿಕ ದಿನೇಶ್ ಕೋಚಿಂಗ್ ಸೆಂಟರ್ ಸಂಸ್ಥಾಪಕ ಅಧ್ಯಕ್ಷ ಎನ್.ವಿ. ದಿನೇಶ್ ಮಾತನಾಡಿ, ಉತ್ತಮ ವಿದ್ಯಾರ್ಥಿಗಳನ್ನು ಹುಟ್ಟು ಹಾಕುವಲ್ಲಿ ಪೋಷಕರ ಪಾತ್ರವೇನು? ವಿದ್ಯಾರ್ಥಿಗಳ ಸಾಧನೆಯ ಹಾದಿ, ಜೀವನದಲ್ಲಿ ಯಶಸ್ವಿಯಾಗಲು ವಿದ್ಯಾರ್ಥಿಗಳು ಏನು ಮಾಡಬೇಕು? ಎಂಬ ವಿಚಾರಗಳನ್ನು ತಿಳಿಸಿದರು.

ಇಂದು ದಸರಾ ವಸ್ತುಪ್ರದರ್ಶನ ದೇವಾಲಯದಲ್ಲಿ ವಿವಿಧ ಪೂಜಾ ಕೈಂಕರ್ಯ

ಮೈಸೂರು, ಡಿ.4(ಪಿಎಂ)– ಮೈಸೂರು ದಸರಾ ವಸ್ತುಪ್ರದರ್ಶನದ ಆವರಣದಲ್ಲಿನ ಶತಮಾನದ ಇತಿಹಾಸ ಹೊಂದಿರುವ ಪುರಾತನ ಶ್ರೀ ವೀರಾಂಜನೇಯಸ್ವಾಮಿ ಮತ್ತು ಶ್ರೀ ಸಾಂಬ ಸದಾಶಿವ ದೇವಾಲಯದ ಜೀರ್ಣೋದ್ಧಾರ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಡಿ.5ರಂದು ಬೆಳಗ್ಗೆ 9.30ಕ್ಕೆ ದೇವಾಲಯದಲ್ಲಿ ವಿವಿಧ ಪೂಜಾ ಕೈಂಕರ್ಯ ಹಮ್ಮಿಕೊಳ್ಳಲಾಗಿದೆ.

ಪುಣ್ಯಾಹ, ಗಣಪತಿ ಹೋಮ, ನವಗ್ರಹ ಹೋಮ, ಶಾಂತಿ ಹೋಮ, ವಾಸ್ತು ಹೋಮ, ಶ್ರೀರಾಮತಾರಕ ಹೋಮ, ಮಹಾಮಂಗಳಾರತಿ ಪೂರ್ಜಾ ಕಾರ್ಯಗಳು ನಡೆಯಲಿದ್ದು, ಶ್ರೀ ವೀರಾಂಜನೇಯಸ್ವಾಮಿ ಮತ್ತು ಶ್ರೀ ಸಂಬಸದಾಶಿವಸ್ವಾಮಿರವರಿಗೆ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ನೆರವೇರಿಸಲಾಗುವುದು. ಬಳಿಕ ಪ್ರಸಾದ ವಿನಿಯೋಗ ಹಮ್ಮಿಕೊಳ್ಳಲಾಗಿದೆ.

ಶ್ರೀ ಹನುಮ ಜಯಂತಿ ಅಂಗವಾಗಿಯೂ ಈ ಧಾರ್ಮಿಕ ಕಾರ್ಯಗಳನ್ನು ಏರ್ಪಡಿಸಲಾಗಿದೆ. ಸದ್ಭಕ್ತರು ಆಗಮಿಸಿ ಸದರಿ ಧಾರ್ಮಿಕ ಕಾರ್ಯಗಳಲ್ಲಿ ಭಾಗಿಯಾಗಬೇಕೆಂದು ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ ಪ್ರಕಟಣೆಯಲ್ಲಿ ಕೋರಿದ್ದಾರೆ.

ವಿಶ್ವ ಚಿತ್ರರಂಗ ಚಕಿತಗೊಳಿಸಿದ ಪುಟ್ಟಣ್ಣ

ಸಾಹಿತಿ ಬನ್ನೂರು ರಾಜು ಸ್ಮರಣೆ

ಮೈಸೂರು, ಡಿ.4– ಕನ್ನಡ ಚಿತ್ರರಂಗ ಮಾತ್ರವಲ್ಲದೆ ಇಡೀ ಭಾರತೀಯ ಚಿತ್ರರಂಗ ಕಂಡಂತಹ ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ಅವರದು ಹೆಸರಷ್ಟೇ ಪುಟ್ಟಣ್ಣನಾದರೂ ಬಣ್ಣದ ಲೋಕದ ದೈತ್ಯ ಪ್ರತಿಭೆಯಾಗಿದ್ದ ಅವರು ಬೆಳ್ಳಿ ತೆರೆಯ ದೊಡ್ಡಣ್ಣನಾಗಿ ವಿಶ್ವ ಚಿತ್ರರಂಗವೇ ಕನ್ನಡದತ್ತ ತಿರುಗಿ ನೋಡುವಂತೆ ಮಾಡಿದವರು ಎಂದು ಸಾಹಿತಿ ಬನ್ನೂರು ಕೆ.ರಾಜು ಬಣ್ಣಿಸಿದರು.

ನಗರದ ಪಡುವಾರಹಳ್ಳಿ ಸ್ನೇಹ ಬಳಗದಿಂದ ಜಲದರ್ಶಿನಿ ಅತಿಥಿ ಗೃಹದ ಆವರಣದಲ್ಲಿ ಏರ್ಪಡಿಸಿದ್ದ ಸುವಿಖ್ಯಾತ ಚಲನಚಿತ್ರ ನಿರ್ದೇಶಕ ಎಸ್.ಆರ್.ಪುಟ್ಟಣ್ಣ ಕಣಗಾಲರ ಜನ್ಮದಿನೋತ್ಸವವನ್ನು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವುದರ ಮುಖೇನ ಉದ್ಘಾಟಿಸಿದ ಅವರು, ಪುಟ್ಟಣ್ಣನವರು ಖ್ಯಾತ ಚಿತ್ರೋದ್ಯಮಿ ಬಿ.ಆರ್. ಪಂತುಲು ಗರಡಿಯಲ್ಲಿ ಸಹಾಯಕ ನಿರ್ದೇಶಕರಾಗಿ ಪಳಗಿ 'ಬೆಳ್ಳಿಮೋಡ' ಚಿತ್ರದಿಂದ ಸ್ವತಂತ್ರ ನಿರ್ದೇಶಕರಾಗಿ ತಮ್ಮ ಚಿತ್ರ ಪಯಣ ಆರಂಭಿಸಿ 'ಮಸಣದ ಹೂ' ಚಿತ್ರದ ತನಕ ಅಮೂಲ್ಯವಾದ 24 ಕನ್ನಡ ಚಿತ್ರಗಳನ್ನು ಹಾಗೂ ತಮಿಳಿನಲ್ಲಿ ಮೂರು, ತೆಲುಗಿನಲ್ಲಿ ಮೂರು, ಮಲಯಾಳಂನಲ್ಲಿ ಆರು, ಹಿಂದಿಯಲ್ಲಿ ಒಂದು ಸೇರಿದಂತೆ ಇತರೆ ಭಾಷೆಗಳಲ್ಲಿ 13 ಚಿತ್ರಗಳನ್ನು ನಿರ್ದೇಶಿಸಿ ಪ್ರಖ್ಯಾತ ಬಹುಭಾಷಾ ಚಿತ್ರ ನಿರ್ದೇಶಕರೆಂದು ದೇಶದ ಗಮನ ಸೆಳೆದವರೆಂದರು.

ಕನ್ನಡ ಚಿತ್ರರಂಗದ ದೆಸೆಗಳನ್ನೆಲ್ಲಾ ಬದಲಾಯಿಸಿ ಪ್ರಯೋಗಾತ್ಮಕ ಸ್ಪರ್ಶ ನೀಡಿದ ಚಿತ್ರಬ್ರಹ್ಮ. ತಮ್ಮದೇ ಆದ ಚಿತ್ರ ಪರಂಪರೆ ಸೃಷ್ಟಿಸಿ ನೆಟ್ಟಿಗೆ ಏನೇನೂ ಇರದಿದ್ದ ಕಾಲದಲ್ಲೇ ಸೃಜನಾತ್ಮಕತೆಯನ್ನು ನೆಟ್ಟಿ ತಾಂತ್ರಿಕವಾಗಿ ಭವ್ಯತೆಯನ್ನು ಭಿತ್ತಿದ ಭವ್ಯಕಲ್ಪ. ಚಲನಚಿತ್ರಗಳನ್ನು ಹೀಗೂ ತೆಗೆಯಬಹುದೆಂಬ ಪರಿಕಲ್ಪನೆ ನೀಡಿ ಇತರೇ ಭಾಷಿಕರಿಗೂ ದಿಕ್ಸೂಚಿಯಾದ ದಿವ್ಯ



ದಿಗ್ದರ್ಶಕ, ಕಲಾವಿದ-ಕಲಾವಿದೆಯರೆಂದರೆ ಹೀಗಿರಬೇಕೆಂದು ಕೆತ್ತಿ ತೋರಿಸಿದ ಕಲಾಶಿಲ್ಪಿ ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ದಿ ಮೈಸೂರು ಕೋಆಪರೇಟಿವ್ ಬ್ಯಾಂಕಿನ ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ ಅವರು, 'ಪಡುವಾರಹಳ್ಳಿ ಪಾಂಡವರು' ಎಂಬ ಚಲನಚಿತ್ರವನ್ನು ನಿರ್ದೇಶಿಸುವುದರ ಮೂಲಕ ನಮ್ಮ ಪಡುವಾರಹಳ್ಳಿಯನ್ನು ಸಿನಿಮಾ ಲೋಕದ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚಿರಸ್ಥಾಯಿಗೊಳಿಸಿದ ಕೀರ್ತಿ ಪುಟ್ಟಣ್ಣನವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಭೂಮಿಗಿರಿ ಪ್ರಕಾಶನದ ಖ್ಯಾತ ಪುಸ್ತಕೋದ್ಯಮಿ ಎನ್. ಬೆಟ್ಟೇಗೌಡ, ಸಿ.ರೇವಣ್ಣ, ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಎಸ್.ಕೃಷ್ಣಕುಮಾರ್, ಬಿ.ಕುಮಾರ್, ಕೇಬಲ್ ಕಿಟ್ಟಿ, ವಿಜಿಲೆನ್ಸ್ ಕಮಿಟಿಯ ಸದಸ್ಯ ಎಂ.ಶಿವಪ್ರಕಾಶ್, ರಾ.ಸಿದ್ಧರಾಮು, ಸುರೇಂದ್ರ ಕುಮಾರ್, ಸಿ.ಸಂತೋಷ್, ಈ.ಬಸವರಾಜು ಮುಂತಾದವರಿದ್ದರು.

ಇಂದು ಬಹುರೂಪಿ ಪ್ರಚಾರಕ್ಕೆ ಚಾಲನೆ

ಮೈಸೂರು,ಡಿ.4(ಪಿಎಂ)–ಮೈಸೂರು ರಂಗಾಯಣ ಆಯೋಜನೆಯ ಬಹುರೂಪಿ ರಾಷ್ಟ್ರೀಯ ರಂಗೋತ್ಸವದ ಪ್ರಚಾರ ಕಾರ್ಯಕ್ರಮ 'ಮನೆ ಮನೆಗೆ ರಂಗಾಯಣ, ಮನ ಮನಕ್ಕೆ ಬಹುರೂಪಿ'ಗೆ ಡಿ.5ರಂದು ಚಾಲನೆ ದೊರೆಯಲಿದೆ.

ಬೆಳಗ್ಗೆ 10.30ಕ್ಕೆ ಮೇಯರ್ ಶಿವಕುಮಾರ್ ಅವರ ನಿವಾಸಕ್ಕೆ ಭೇಟಿ ನೀಡಿ ಅವರನ್ನು ಆಹ್ವಾನಿಸಲಾಗುವುದು. ಬಳಿಕ ಬೆಳಗ್ಗೆ 11.30ಕ್ಕೆ ಹಿರಿಯ ಸಾಹಿತಿ ಡಾ.ಪ್ರಧಾನ್ ಗುರುದತ್ ಅವರನ್ನು ಆಹ್ವಾನಿಸಲಾಗುವುದು. ನಂತರ ಸಂಜೆ 4ಕ್ಕೆ ಪ್ರಖ್ಯಾತ ಭರತನಾಟ್ಯ ಹಿರಿಯ ಕಲಾವಿದೆ ವಸುಂಧರಾ ದೊರೆಸ್ವಾಮಿ ಅವರನ್ನು ಆಹ್ವಾನಿಸಲಾಗುವುದು ಎಂದು ಪ್ರಕಟಣೆಯಲ್ಲಿ ರಂಗಾಯಣ ಉಪ ನಿರ್ದೇಶಕರು ತಿಳಿಸಿದ್ದಾರೆ.

ಚಿಕ್ಕಳ್ಳಿ ಗ್ರಾಮದಿಂದ ವ್ಯಕ್ತಿ ನಾಪತ್ತೆ

ಮೈಸೂರು, ಡಿ.4– ಮನೆಯಿಂದ ಹೊರಗೆ ಹೋದ ವ್ಯಕ್ತಿಯೊಬ್ಬರು ನಾಪತ್ತೆಯಾಗಿರುವ ಪ್ರಕರಣ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ವರುಣಾ ಹೋಬಳಿ ಚಿಕ್ಕಳ್ಳಿ ಗ್ರಾಮದ ಮಾದಪ್ಪ(75) ಕಾಣೆಯಾದವರಾಗಿದ್ದು, ಅವರು ಮನೆಯಲ್ಲಿ ತಿಂಡಿ ತಿಂದು ಚಿಕ್ಕಳ್ಳಿ ಸರ್ಕಲ್ ಹತ್ತಿರ ಹೋಗಿ ಬರುವುದಾಗಿ ಹೋದವರು ಇದುವರೆಗೂ ಮನೆಗೆ ಹಿಂತಿರುಗಿಲ್ಲ ಎಂದು ಅವರ ಪತ್ನಿ ಶ್ರೀಮತಿ ನಾಗಮ್ಮ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಸುಳಿವು ಸಿಕ್ಕವರು ದೂ:0821-2418340, 2418339, 2418311 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ಎಂ.ಕಮಲಮ್ಮಗೆ ಪಿಎಚ್.ಡಿ



ಮೈಸೂರು, ಡಿ.4– ಮೈಸೂರು ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕಿ ಡಾ.ಎಚ್.ಪಿ.ಗೀತಾ ಅವರ ಮಾರ್ಗದರ್ಶನದಲ್ಲಿ ಎಂ.ಕಮಲಮ್ಮ ಅವರು 'ಮೈಸೂರು ಕರ್ನಾಟಕ ವೃತ್ತಿ ರಂಗಭೂಮಿಯಲ್ಲಿ ಮಹಿಳಾ ಅಸ್ಮಿತೆಯ ಹುಡುಕಾಟ' ಎಂಬ ವಿಷಯ ಕುರಿತು ಸಮಗ್ರ ಅಧ್ಯಯನ ನಡೆಸಿ, ಹಂಪಿ ಕನ್ನಡ ವಿವಿಗೆ ಸಲ್ಲಿಸಿದ ಪ್ರಬಂಧಕ್ಕೆ ಪಿಎಚ್.ಡಿ ಪದವಿ ಲಭಿಸಿದೆ.

ಮೈಸೂರಿಂದ ಶ್ರೀರಂಗಪಟ್ಟಣಕ್ಕೆ ತೆರಳಿದ ಸಂಕೀರ್ತನಾ ರ್‍ಯಾಲಿಗೆ ರಾಮದಾಸ್ ಚಾಲನೆ

ಮೈಸೂರು, ಡಿ.4(ಎಸ್‌ಪಿಎನ್)– ಶ್ರೀರಂಗಪಟ್ಟಣದಲ್ಲಿ ಹಿಂದೂ ಸಂಘಟನೆಗಳು ಹಮ್ಮಿಕೊಂಡಿದ್ದ ಸಂಕೀರ್ತನಾ ರ್‍ಯಾಲಿಯಲ್ಲಿ ಪಾಲ್ಗೊಳ್ಳಲು ಮೈಸೂರಿಂದ ಹೊರಟಿದ್ದ ಬೈಕ್ ರ್‍ಯಾಲಿಗೆ ಶಾಸಕ ಎಸ್.ಎ. ರಾಮದಾಸ್, ಮೈಸೂರಿನ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನ ಮುಂಭಾಗ ಭಾನುವಾರ ಚಾಲನೆ ನೀಡಿದರು.

ನಂತರ ಮಾತನಾಡಿ, ನೂರಾರು ಹಿಂದೂ ಕಾರ್ಯಕರ್ತರ ತ್ಯಾಗ-ಬಲಿದಾನದಿಂದಾಗಿ ಅಯೋಧ್ಯೆಯಲ್ಲಿ ಪ್ರಭು ಶ್ರೀರಾಮ ಚಂದ್ರರ ಮಂದಿರ ನಿರ್ಮಾಣವಾಗುತ್ತಿದೆ. ಅದೇ ರೀತಿ ಇತಿಹಾಸ ಪುಟದಲ್ಲಿ ಶ್ರೀರಂಗಪಟ್ಟಣದಲ್ಲಿ ಹನುಮನ ಗುಡಿಯನ್ನು ಕಿತ್ತು ಹಾಕಿ, ಜಾಮಿಯಾ ಮಸೀದಿ ನಿರ್ಮಾಣಗೊಂಡು ಅಸಂಖ್ಯಾತ ಹಿಂದೂಗಳ



ಭಾವನೆಗಳಿಗೆ ಧಕ್ಕೆಯಾಗಿದ್ದು, ಇದು ಮನುಕುಲಕ್ಕೆ ಮಾಡಿದ ಅವಮಾನ ಎಂದು ಬೇಸರ ವ್ಯಕ್ತಪಡಿಸಿದರು.

ಹಾಗಾಗಿ ಹನುಮನ ಜಾಗದಲ್ಲಿ ಮಸೀದಿ ಹೇಗೆ ನಿರ್ಮಾಣವಾಗಿತ್ತೋ ಅದೇ ರೀತಿ ಹನುಮನ ಮಂದಿರ ನಿರ್ಮಾಣಕ್ಕಾಗಿ ಹಮ್ಮಿಕೊಂಡಿರುವ ಸಂಕೀರ್ತನಾ ರ್‍ಯಾಲಿಗೆ ಶಕ್ತಿ ತುಂಬಲು ಮೈಸೂರಿಂದ ಹೊರಟಿರುವ ಹಿಂದೂ ಕಾರ್ಯಕರ್ತರು ಆ ರ್‍ಯಾಲಿಯಲ್ಲಿ ಭಾಗಿಯಾಗಿ ಹನುಮನ ಕೃಪೆಗೆ ಪಾತ್ರರಾಗಲಿದ್ದಾರೆ ಎಂದರು.

ರ್‍ಯಾಲಿಯು ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಚಾಲನೆಗೊಂಡು ಇರ್ವಿನ್ ರಸ್ತೆ, ಮೈಸೂರು -ಬೆಂಗಳೂರು ರಸ್ತೆ ಮುಖಾಂತರ ಬೈಕ್ ರ್‍ಯಾಲಿ ಶ್ರೀರಂಗಪಟ್ಟಣ ತಲುಪಿತು. ಮೈಸೂರಿಂದ ಹೊರಟ ಬೈಕ್ ರ್‍ಯಾಲಿಯಲ್ಲಿ ಶಾಸಕ ಎಸ್.ರಾಮದಾಸ್ ಕಾರ್ಯಕರ್ತರ ಬೈಕ್‌ನಲ್ಲಿ ಹಿಂಬದಿ ಸ್ವಲ್ಪ ದೂರ ಸಂಚರಿಸಿ ಕಾರ್ಯಕರ್ತರ ಉತ್ಸಾಹ ಇಮ್ಮಡಿಗೊಳಿಸಿ, ಕಾರ್ಯಕರ್ತರ ಪ್ರೀತಿಗೆ ಪಾತ್ರರಾದರು.

ಈ ವೇಳೆ ಹಿಂದೂ ಮುಖಂಡರಾದ ಗಿರಿಧರ್, ಹಿಂದು ಸಂಚಾಲಕ ಪ್ರಶಾಂತ್, ಸಂತೋಷ, ಶಂಭು, ಹೇಮಂತ್, ಮನು ಶೈವ, ರಂಗಸ್ವಾಮಿ, ಮೈಸೂರು ಜಿಲ್ಲಾ ಒಬಿಸಿ ಮೋರ್ಚಾ ಅಧ್ಯಕ್ಷ ಜೋಗಿ ಮಂಜು ಸೇರಿದಂತೆ ಎಲ್ಲಾ ಮೋರ್ಚಾದ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಜಂಟಿ ತಪಾಸಣೆ; 1.39 ಲಕ್ಷ ರೂ. ವಶ

ಮೈಸೂರು, ಡಿ.4(ಎಂಕೆ)– ವಿಶೇಷ ಜಂಟಿ ತಪಾಸಣಾ ಕಾರ್ಯಾಚರಣೆ ಮುಂದುವರೆಸಿರುವ ಮೈಸೂರು ನಗರ ಪೊಲೀಸರು, ಭಾನುವಾರ 1.39 ಲಕ್ಷ ರೂ. ದಂಡ ವಸೂಲಿ ಮಾಡಿದ್ದಾರೆ.

ಸಂಚಾರ ನಿಯಮಗಳ ಜಾರಿ ಹಾಗೂ ಅಪರಾಧ ಪ್ರಕರಣಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸಂಜೆ 6 ಗಂಟೆಯಿಂದ ರಾತ್ರಿ 9ರವರೆಗೆ ವಿಶೇಷ ಜಂಟಿ ತಪಾಸಣಾ ಕಾರ್ಯಾಚರಣೆ ನಡೆಸಲಾಗುತ್ತಿದ್ದು, ಭಾನುವಾರ 997 ವಾಹನಗಳನ್ನು ತಪಾಸಣೆ ನಡೆಸಿ 274 ಪ್ರಕರಣ ದಾಖಲಿಸಿ 11 ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ. ಅಲ್ಲದೆ ನಿಯಮ ಉಲ್ಲಂಘಿಸಿದವರಿಂದ 1,39,600 ರೂ. ದಂಡ ವಸೂಲಿ ಮಾಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ದೆಹಲಿ ಕರ್ನಾಟಕ ಸಂಘದಿಂದ ಮೈಸೂರು, ಚಾಮರಾಜನಗರ, ಕೊಡಗು ಸಾಂಸ್ಕೃತಿಕ ಉತ್ಸವ

ಗಡಿನಾಡು ಕನ್ನಡಿಗರಿಗಾಗಿ ಪ್ರತ್ಯೇಕ ಸಚಿವಾಲಯ ಅವಶ್ಯ

ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ ಅಭಿಮತ



ನವದೆಹಲಿ, ಡಿ.4–ಗಡಿನಾಡು ಕನ್ನಡಿಗರ ಸಮಸ್ಯೆಗಳನ್ನು ಪರಿಹರಿಸಲು ಪ್ರತ್ಯೇಕವಾಗಿ ಗಡಿನಾಡು ಸಚಿವಾಲಯ ಅಸ್ತಿತ್ವಕ್ಕೆ ತರಬೇಕು ಎಂದು ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ ಅಭಿಪ್ರಾಯಪಟ್ಟರು.

ಅಮೃತ ಮಹೋತ್ಸವ ಸಂಭ್ರಮದಲ್ಲಿರುವ ದೆಹಲಿ ಕರ್ನಾಟಕ ಸಂಘವು ನವದೆಹಲಿಯಲ್ಲಿ ಆಯೋಜಿಸಿದ್ದ ಮೈಸೂರು, ಚಾಮರಾಜನಗರ, ಕೊಡಗು ಜಿಲ್ಲೆಗಳ ಸಾಂಸ್ಕೃತಿಕ ಉತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಗಡಿನಾಡು ಕನ್ನಡಿಗರು ಅನೇಕ ಜ್ವಲಂತ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಹೀಗಿರುವ ಗಡಿನಾಡು ಅಭಿವೃದ್ಧಿ ಪ್ರಾಧಿಕಾರದಿಂದ ಅವರ ಸಮಸ್ಯೆಗಳಿಗೆ ಸಮರ್ಪಕವಾಗಿ ಸ್ಪಂದಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಪ್ರತ್ಯೇಕ ಸಚಿವಾಲಯದ ಅವಶ್ಯಕತೆ ಇದೆ ಎಂದು ಹೇಳಿದರು.

ತಮಿಳುನಾಡು, ಆಂಧ್ರ ಹಾಗೂ ತೆಲಂಗಾಣ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಭಾಷಾ ಪ್ರೇಮ ಕಡಿಮೆ ಇದೆ. ಕನ್ನಡಿಗರಲ್ಲಿ ಭಾಷಾ ಪ್ರೇಮಕ್ಕಿಂತ ಜಾತಿ ಪ್ರೇಮವೇ ಹೆಚ್ಚಾಗಿದೆ ಎಂದು ವಿಷಾದಿಸಿದ ಅವರು, ಹೊರ ನಾಡ ಕನ್ನಡಿಗರು ಜಾತಿ ಪ್ರೇಮಕ್ಕಿಂತ ಭಾಷಾ ಪ್ರೇಮ ಬೆಳೆಸಿಕೊಂಡು ಕನ್ನಡಿಗರಾದ ನಾವೆಲ್ಲಾ ಒಂದೇ ಕುಟುಂಬದವರು ಎಂಬ ಭಾವನೆಯಿಂದ ಬದುಕಬೇಕು ಎಂದರು.

ಹೊರ ನಾಡ ಕನ್ನಡಿಗರು ಮತ್ತೆ ತಾಯ್ನಾಡಿಗೆ ಬಂದು ನೆಲೆಸಲು ಅನುಕೂಲವಾಗುವಂತೆ ಗೃಹ ಮಂಡಳಿ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳು ನಿವೇಶನಗಳನ್ನು ಹಂಚುವಾಗ ಹೊರನಾಡ ಕನ್ನಡಿಗರಿಗೆ ಮೀಸಲಿರಿಸಬೇಕು. ಅದೇ ರೀತಿ ಹೊರನಾಡ ಕನ್ನಡಿಗರ ಪ್ರತಿಭಾನ್ವಿತ ಮಕ್ಕಳಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕು ಎಂದು ಅವರು ಹೇಳಿದರು.

ವಿದ್ಯಾವರ್ಧಕ ಸಂಘ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಹೊರತುಪಡಿಸಿದರೆ, 75 ವರ್ಷಗಳನ್ನು ಸುದೀರ್ಘವಾಗಿ ಪೂರೈಸಿರುವ ಪರಂಪರೆ ಇರುವುದು ದೆಹಲಿ ಕರ್ನಾಟಕ ಸಂಘಕ್ಕೆ ಎಂಬುದು ಹೆಮ್ಮೆಯ ವಿಚಾರ ಎಂದು ಅವರು ಹೇಳಿದರು.

ಕಾರ್ಯಕ್ರಮವನ್ನು ಮೈಲ್ಯಾಕ್ ಅಧ್ಯಕ್ಷ ಆರ್.ರಘು ಕೌಟಿಲ್ಯ, ಮಾಜಿ ಸಚಿವ ಎಚ್.ಎನ್.ರೇವಣ್ಣ, ಇತಿಹಾಸ ತಜ್ಞ ಧರ್ಮೇಂದ್ರ ಕುಮಾರ್, ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಉದ್ಘಾಟಿಸಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ನಾಗರಾಜ್, ಪ್ರಧಾನ ಕಾರ್ಯದರ್ಶಿ ರೇಣುಕುಮಾರ್ ಉಪಸ್ಥಿತರಿದ್ದರು.

ಈ ಸಮಾರಂಭದಲ್ಲಿ ಜಾನಪದ ಹಾಡು, ನೃತ್ಯಗಳು ದೆಹಲಿ ಕನ್ನಡಿಗರ ಮನ ಸೆಳೆಯಿತು. ಇಡೀ ದಿನ ನಡೆದ ಕಾರ್ಯಕ್ರಮದಲ್ಲಿ ಮೈಸೂರು ಭಾಗದ ವಿವಿಧ ಕಲಾ ಪ್ರಕಾರಗಳ ಕಲಾವೈಭವ ಮೇಳೈಸಿತು.

ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕಿ

ಪ್ರೊ.ಎನ್.ಉಷಾರಾಣಿ ನಾಮನಿರ್ದೇಶನ

ಹಲವು ಶಿಕ್ಷಣ ತಜ್ಞರನ್ನು ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದ ಸರ್ಕಾರ



ಮೈಸೂರು,ಡಿ.4(ಪಿಎಂ)– ಮೈಸೂರು ವಿವಿ ಪತ್ರಿಕೋದ್ಯಮ ವಿಭಾಗದ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಎನ್.ಉಷಾರಾಣಿ ಸೇರಿದಂತೆ ಹಲವು ಶಿಕ್ಷಣ ತಜ್ಞರನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ಸದಸ್ಯರನ್ನಾಗಿ ರಾಜ್ಯ ಸರ್ಕಾರ ನಾಮನಿರ್ದೇಶನ ಮಾಡಿದೆ.

ಉನ್ನತ ಶಿಕ್ಷಣ ಇಲಾಖೆಯ ಸದರಿ ಪರಿಷತ್ತಿಗೆ ಹಲವು ಶಿಕ್ಷಣ ತಜ್ಞರನ್ನು ಐದು ವರ್ಷಗಳ ಅವಧಿಗೆ ನಾಮನಿರ್ದೇಶನ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಪ್ರೊ.ಎನ್.ಉಷಾರಾಣಿ ಅವರು ಮೈಸೂರು ವಿವಿಯ ಶೈಕ್ಷಣಿಕ ಬಹುಮಾಧ್ಯಮ ಸಂಶೋಧನಾ ಸಂಸ್ಥೆ (ಇಎಂಆರ್‌ಸಿ) ನಿರ್ದೇಶಕರಾಗಿ, ಕಲಾ ನಿಕಾಯದ ಡೀನ್ ಆಗಿ, ಯುಜಿಸಿ–ಯುಪಿಇ ಸಂಯೋಜಕರಾಗಿ ಕಾರ್ಯನಿರ್ವಹಿಸಿದ್ದಾರೆ. ಅಲ್ಲದೆ, ಇವರು ಐಸಿಎಸ್‌ಎಸ್‌ಆರ್ ಹಿರಿಯ ಪ್ರೊಫೆಸರ್ ಫೆಲೊ ಆಗಿಯೂ ಸೇವೆ ಸಲ್ಲಿಸಿದ್ದಾರೆ. ಮೈಸೂರು ವಿವಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿದ್ದಾರೆ.

ಬೆಂಗಳೂರಿನ ವೈಟ್‌ಫೀಲ್ಡ್‌ನ ಮೈಂಡ್‌ಟ್ರೀ ಲಿಮಿಟೆಡ್‌ನ ಸಿಇಓ ದೇಬಶಿಶ್ ಚಟರ್ಜಿ, ಆಂಧ್ರಪ್ರದೇಶದ ವಿಶಾಖಪಟ್ಟಣ ಕೇಂದ್ರೀಯ ಬುಡಕಟ್ಟು ವಿವಿ ಕುಲಪತಿ ಪ್ರೊ.ಟಿ.ವಿ.ಕಟ್ಟಿಮನಿ, ಶಿವಮೊಗ್ಗದ ಕುವೆಂಪು ವಿವಿ ವಿಶ್ರಾಂತ ಕುಲಪತಿ ಪ್ರೊ.ಜೋಗನ್ ಶಂಕರ್, ಸಿಗ್ಮಾ ಫೌಂಡೇಷನ್‌ನ ಸಂಸ್ಥಾಪಕ ಅಮೀನ್ ಇ ಮುದಸ್ಸರ್, ವಿಜಯಪುರ ಅಕ್ಕಮಹಾದೇವಿ ವಿವಿ ವಿಶ್ರಾಂತ ಕುಲಪತಿ ಪ್ರೊ.ಮೀನಾ ಚಂದಾ ವರ್ಕರ್, ಬೆಂಗಳೂರಿನ ಎಂಇಆರ್‌ಸಿಕೆ ಲೈಫ್ ಸೈನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಎನ್.ಎಸ್.ಶ್ರೀನಾಥ್, ಬೆಂಗಳೂರಿನ ಅಜೀಂ ಪ್ರೇಮ್‌ಜಿ ವಿವಿಯ ವಿಶ್ರಾಂತ ಕುಲಪತಿ ಪ್ರೊ.ಅನುರಾಗ್ ಬಿಹಾರ್, ಬೆಂಗಳೂರಿನ ಕ್ವೆಸ್ಟ್ ಗ್ಲೋಬಲ್ ಅಧ್ಯಕ್ಷ ಅಜಯ್‌ಪ್ರಭು ಮತ್ತು ಬೆಂಗಳೂರಿನ ಬಾಷ್ ಗ್ಲೋಬಲ್ ಸಾಫ್ಟ್‌ವೇರ್ ಟೆಕ್ನಾಲಜೀಸ್‌ನ ಮುಖ್ಯ ಕಾರ್ಯತಂತ್ರ ಅಧಿಕಾರಿ ರಾಘವೇಂದ್ರ ಕೃಷ್ಣಮೂರ್ತಿ ಸೇರಿದಂತೆ 10 ಮಂದಿ ಶಿಕ್ಷಣ ತಜ್ಞರನ್ನು ಪರಿಷತ್ತಿಗೆ ಸರ್ಕಾರ ನಾಮನಿರ್ದೇಶನ ಮಾಡಿದೆ.

ತ್ರಿಬಲ್ ರೈಡಿಂಗ್ ಮಾಡಿದರೆ ಕೇಸ್ ಫಿಕ್ಸ್

ಮೈಸೂರಲ್ಲಿ 266 ಪ್ರಕರಣ ದಾಖಲು





ಪಿಯು ಕಾಲೇಜುಗಳಲ್ಲಿ ಕಾರ್ಯಾಚರಣೆ...

ನಗರದಲ್ಲಿರುವ ಪಿಯು ಕಾಲೇಜುಗಳ ಎದುರು ಅಕ್ಕ–ಪಕ್ಕದಲ್ಲಿ ನಾಳೆಯಿಂದಲೇ ವಾಹನಗಳ ತಪಾಸಣಾ ಕಾರ್ಯಾಚರಣೆ ನಡೆಸಲಾಗುವುದು. ಪಿಯು ಕಾಲೇಜು ವಿದ್ಯಾರ್ಥಿಗಳಲ್ಲಿ ಸಂಚಾರ ನಿಯಮಗಳ ಕುರಿತು ಜಾಗೃತಿ ಮೂಡಿಸುವುದರ ಜೊತೆಗೆ ನಿಯಮ ಉಲ್ಲಂಘಿಸಿದ್ದಲ್ಲಿ ಸ್ಥಳದಲ್ಲಿಯೇ ದಂಡ ವಿಧಿಸಲಾಗುವುದು. - ಗೀತಾ ಪ್ರಸನ್ನ, ಡಿಸಿಪಿ

ಮೈಸೂರು, ಡಿ.4(ಎಂಕೆ)– ತ್ರಿಬಲ್ ರೈಡಿಂಗ್ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸುತ್ತಿರುವ ಮೈಸೂರು ನಗರ ಸಂಚಾರ ಪೊಲೀಸರು, 266 ಪ್ರಕರಣ ದಾಖಲಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆಗಳ ವಿರುದ್ಧ ಕ್ರಮ ಕೈಗೊಳ್ಳುತ್ತಿರುವ ಸಂಚಾರ ಪೊಲೀಸರು, ತ್ರಿಬಲ್ ರೈಡಿಂಗ್‌ನಿಂದ ಆಗಬಹುದಾದಂತಹ ರಸ್ತೆ ಅಪಘಾತಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ನ20ರಿಂದ ತ್ರಿಬಲ್ ರೈಡಿಂಗ್ ವಿಶೇಷ ಕಾರ್ಯಾಚರಣೆ ಹಮ್ಮಿಕೊಂಡಿದ್ದಾರೆ.

ನ20 ರಿಂದ ನ26ರವರೆಗೆ ನಡೆದ ಮೊದಲ ಹಂತದ ಕಾರ್ಯಾಚರಣೆಯಲ್ಲಿ 145 ಪ್ರಕರಣ ಹಾಗೂ ನ.27 ರಿಂದ ಡಿ.3 ರವರೆಗೆ ಎರಡನೇ ಹಂತದ ಕಾರ್ಯಾಚರಣೆಯಲ್ಲಿ 121 ಪ್ರಕರಣ ದಾಖಲಿಸಿದ್ದಾರೆ. ಅಲ್ಲದೆ ವಾಹನಗಳನ್ನು ವಶಕ್ಕೆ ಪಡೆದು ದಂಡ ವಸೂಲಿ ಮಾಡಿದ್ದಾರೆ. ಆದ್ದರಿಂದ ಸಾರ್ವಜನಿಕರು ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದರೊಂದಿಗೆ ಸಂಬಂಧಪಟ್ಟ ಅವಶ್ಯಕ ದಾಖಲಾತಿಗಳನ್ನು ತಮ್ಮೊಂದಿಗೆ ಇಟ್ಟುಕೊಳ್ಳುವಂತೆ ಮೈಸೂರು ನಗರ ಪೊಲೀಸ್ ಆಯುಕ್ತರು ಸೂಚಿಸಿರುತ್ತಾರೆ.

ಕಾಲೇಜು ಹುಡುಗರೇ ಹೆಚ್ಚು: ತ್ರಿಬಲ್ ರೈಡಿಂಗ್ ಕಾರ್ಯಾಚರಣೆಯಲ್ಲಿ ಕಾಲೇಜು ವಿದ್ಯಾರ್ಥಿಗಳೇ ಸಿಕ್ಕಿಬೀಳುತ್ತಿದ್ದಾರೆ. ವಾಹನ ಪರವಾನಗಿ ಹೊಂದಿಲ್ಲದ ವಿದ್ಯಾರ್ಥಿಗಳು ಹೆಚ್ಚಾಗಿ ತ್ರಿಬಲ್ ರೈಡಿಂಗ್ ಮಾಡುತ್ತಿದ್ದಾರೆ. ತ್ರಿಬಲ್ ರೈಡಿಂಗ್‌ನಿಂದಾಗಬಹುದಾದ ಅನಾಹುತಗಳನ್ನರಿತು ಪೋಷಕರೇ ಎಚ್ಚೆತ್ತುಕೊಳ್ಳಬೇಕು ಎಂದು ಡಿಸಿಪಿ ಗೀತಾ ಪ್ರಸನ್ನ ಮನವಿ ಮಾಡಿದ್ದಾರೆ.

ಕಳೆದ ಎರಡು ವಾರಗಳಿಂದ ತ್ರಿಬಲ್ ರೈಡಿಂಗ್ ಕಾರ್ಯಾಚರಣೆ ನಡೆಸಲಾಗುತ್ತಿದೆ. ಸಿಕ್ಕಿ ಬೀಳುವವರು ದಂಡ ಕಟ್ಟುತ್ತಿದ್ದಾರೆಯೇ ಹೊರತು ತ್ರಿಬಲ್ ರೈಡಿಂಗ್ ಸಂಚಾರ ನಿಯಮ ಉಲ್ಲಂಘನೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ಇದೇ ರೀತಿ ಮುಂದುವರೆದರೆ ಇನ್ನಷ್ಟು ಕಟ್ಟುನಿಟ್ಟಿನ ಕಾರ್ಯಾಚರಣೆ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಚಾಮುಂಡೇಶ್ವರಿಯಲ್ಲಿ ಬಿಜೆಪಿಗೆ ಬೆಂಬಲ ಖಚಿತ

ಕ್ಷೇತ್ರ ಪ್ರವಾಸ ನಡೆಸುತ್ತಿರುವ ಅರುಣ್ ಕುಮಾರ್ ಗೌಡ ವಿಶ್ವಾಸ



ಮೈಸೂರು, ಡಿ.4(ಎಸ್‌ಬಿಡಿ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜನತೆ ಮುಂಬರುವ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸುವುದು ಖಚಿತ ಎಂದು ಪಕ್ಷದ ಯುವ ಮುಖಂಡ ಅರುಣ್ ಕುಮಾರ್ ಗೌಡ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಕ್ಷ ಸಂಘಟನೆ ನಿಟ್ಟಿನಲ್ಲಿ ಕ್ಷೇತ್ರ ಪ್ರವಾಸ ನಡೆಸುತ್ತಿರುವ ಅವರು, ಇಲವಾಲ ಹೋಬಳಿ ಭದ್ರೇಗೌಡನ ಕೊಪ್ಪಲು ಗ್ರಾಮಕ್ಕೆ ಭೇಟಿ ನೀಡಿ ಸ್ಥಳೀಯರೊಂದಿಗೆ ಸಮಾಲೋಚನೆ ನಡೆಸಿ ಮಾತನಾಡಿದರು.

ಚಾಮುಂಡೇಶ್ವರಿ ಕ್ಷೇತ್ರದ ಜನರಿಗೆ ಬಿಜೆಪಿ ಮೇಲೆ ಒಲವಿದೆ. ಆದರೆ ಕೆಲವು ರಾಜಕೀಯ ಕಾರಣಗಳಿಂದಾಗಿ 2013 ಹಾಗೂ 2018ರ ಚುನಾವಣೆಗಳಲ್ಲಿ ಬಿಜೆಪಿಗೆ ಗಂಭೀರ ಸ್ಪರ್ಧೆ ಸಾಧ್ಯವಾಗಲಿಲ್ಲ. ಆದರೆ ಈ ಬಾರಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಗೆಲುವು ಸಾಧಿಸಲೇಬೇಕೆಂದು ಪಕ್ಷದ ವರಿಷ್ಠರು ಹಾಗೂ ರಾಜ್ಯ ನಾಯಕರು ಕಟಿಬದ್ಧರಾಗಿದ್ದಾರೆ ಎಂದು ತಿಳಿಸಿದರು.

ಈವರೆಗೆ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದವರು ಸಚಿವರಾಗಿ, ಮುಖ್ಯಮಂತ್ರಿಗಳಾಗಿಯೂ ಅಧಿಕಾರ ನಡೆಸಿದರು. ಆದರೆ ಜನರ ನಿರೀಕ್ಷೆಯಂತೆ ಕ್ಷೇತ್ರದ ಅಭಿವೃದ್ಧಿ ಮಾಡುವಲ್ಲಿ ವಿಫಲರಾದರು. ರಾಜ್ಯ ಸರ್ಕಾರ ಕೋಟ್ಯಾಂತರ ರೂ. ಅನುದಾನ ನೀಡಿದ್ದರೂ ಅದನ್ನು ಸಮರ್ಪಕವಾಗಿ ಬಳಕೆ ಮಾಡಿಲ್ಲ. ಜನ ಎಲ್ಲವನ್ನೂ ಗಮನಿಸಿದ್ದು, ಮುಂದಿನ ಚುನಾವಣೆಯಲ್ಲಿ ಪ್ರತಿಕ್ರಿಯಿಸಲಿದ್ದಾರೆ. ಅಭಿವೃದ್ಧಿಯೇ ಮೂಲಮಂತ್ರವಾಗಿರುವ ಬಿಜೆಪಿ ಗೆಲುವಿಗೆ ಪೂರಕ ವಾತಾವರಣವಿದೆ ಎಂದು ಹೇಳಿದರು.

ಇದೇ ವೇಳೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ನಿರ್ಮಾಣಕ್ಕೆ ಆರ್ಥಿಕ ನೆರವು ನೀಡಿದ ಅರುಣ್ ಕುಮಾರ್ ಗೌಡ ಅವರನ್ನು ಗ್ರಾಮದ ಯಜಮಾನರುಗಳು ಹಾಗೂ ಬಿಜೆಪಿ ಕಾರ್ಯಕರ್ತರು ಅಭಿನಂದಿಸಿದರು.

ಬಿಜೆಪಿ ಮುಖಂಡ ಗೋಪಾಲ್ ಗೌಡ, ಎಪಿಎಂಸಿ ಸದಸ್ಯ ರವಿ ಇಲವಾಲ, ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಪೈಲ್ವಾನ್ ರವಿ, ಯುವ ಮೋರ್ಚಾ ಮಾಜಿ ಜಿಲ್ಲಾಧ್ಯಕ್ಷ ವಿಜಯ್ ಗೌಡ, ರಾಜ್‌ಕುಮಾರ್, ವಿನ್ಸೆಂಟ್, ಶ್ರೀನಿವಾಸ್, ಗ್ರಾಮದ ಯಜಮಾನರುಗಳಾದ ಕರೀಗೌಡ, ರಾಮೇಗೌಡ, ಚಿಕ್ಕೇಗೌಡ, ರಾಜೇಗೌಡ, ಶಿವೇಗೌಡ, ಗಜೇಂದ್ರ, ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ನಿಧನ



ಇವರು ದಿ:04.12.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ದಿ:05.12.2022 ಸೋಮವಾರ ಬೆಳಗ್ಗೆ 11.00 ಗಂಟೆಗೆ ಕೆ.ಜಿ.ಕೊಪ್ಪಲಿನ ಕಾವೇರಿ ಶಾಲೆ ಪಕ್ಕದ ರುದ್ರಭೂಮಿಯಲ್ಲಿ, ಇಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು: ಕುಟುಂಬವರ್ಗ

ಬಸವರಾಜು

(ಲೇಟ್ ಮಾದ್ಯಯ್ಯ ಉ॥ ಭೂಪಣ್ಣನವರ ಮಗ)

ಅಪರಾಧ ತಡೆ ಮಾಸಾಚರಣೆ ಅಂಗವಾಗಿ ಸೈಕಲ್ ಜಾಥಾ



ಮೈಸೂರು, ಡಿ.4(ಎಂಕೆ)– ಅಪರಾಧ ತಡೆ ಮಾಸಾಚರಣೆ ಅಂಗವಾಗಿ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆ ಹಾಗೂ ಸೆನ್(ಸೈಬರ್ ಕ್ರೈಂ) ಪೊಲೀಸ್ ಠಾಣೆ ವತಿಯಿಂದ ಸೈಕಲ್ ಜಾಥಾ ನಡೆಸಲಾಯಿತು. ಮೈಸೂರು ವಿವಿ ಮಾನಸಗಂಗೋತ್ರಿ ಆವರಣದಲ್ಲಿರುವ ಕ್ಲಾಕ್ ಟವರ್ ಬಳಿ ಆರಂಭವಾದ ಸೈಕಲ್ ಜಾಥಾಗೆ ಎನ್.ಆರ್.ವಿಭಾಗದ ಎಸಿಪಿ ಶಿವಶಂಕರ್ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು. ಅಲ್ಲಿಂದ ಅರಮನೆ ಉತ್ತರದ್ವಾರದಲ್ಲಿರುವ ಕೋಟೆ ಆಂಜನೇಯ ದೇವಸ್ಥಾನ, ಸಯ್ಯಾಜಿರಾವ್ ರಸ್ತೆ, ದೇವರಾಜ ಅರಸು ರಸ್ತೆ ಸೇರಿದಂತೆ ನಗರದ ಪ್ರಮುಖ ರಸ್ತೆಗಳಲ್ಲಿ 12 ಕಿ.ಮೀ.ವರೆಗೆ ಜಾಥಾ ನಡೆಯಿತು.

ಸೈಕಲ್‌ಗಳ ಮುಂದೆ ಕುಡಿದು ವಾಹನ ಚಲಾಯಿಸಬೇಡಿ, ತ್ರಿಬಲ್ ರೈಡಿಂಗ್ ಸೇರಿದಂತೆ ಸಂಚಾರ ನಿಯಮಗಳನ್ನು ಪಾಲಿಸುವುದು ಹಾಗೂ ಅಪರಾಧ ಕೃತ್ಯಗಳಲ್ಲಿ ಸಾರ್ವಜನಿಕರು ಭಾಗವಹಿಸಬಾರದು ಎಂಬಿತ್ಯಾದಿ ಫ್ಲೆಕ್ಸ್ ಕಾರ್ಡ್‌ಗಳನ್ನು ಕಟ್ಟಿಕೊಂಡು ಜಾಗೃತಿ ಮೂಡಿಸಿದರು. ಜಯಲಕ್ಷ್ಮೀಪುರಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಜಯಕುಮಾರ್ ಸೇರಿದಂತೆ ಎರಡು ಠಾಣೆಗಳ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಬೆಂಗಳೂರಿನ ಪ್ರತಿಷ್ಠಿತ ಆಯುರ್ವೇದ ಅಕಾಡೆಮಿ ವತಿಯಿಂದ ಆಯುರ್ವೇದ ವೈದ್ಯರು ಹಾಗೂ ಅಧ್ಯಾಪಕರಾಗಿ ಅತ್ಯುತ್ತಮ ಸೇವೆ ಸಲ್ಲಿಸಿರುವ ಡಾ.ಬಿ.ಗುರುಬಸವರಾಜ ಅವರನ್ನು ಇತ್ತೀಚೆಗೆ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಆಯುರ್ವೇದ ವೈದ್ಯರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪಿಸಿ, ಪಿಎಸ್‌ಐ ಉಚಿತ ತರಬೇತಿ

ಮೈಸೂರು, ಡಿ.4– ಮೈಸೂರಿನ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ಆವರಣದ 'ಜ್ಞಾನಬುತ್ತಿ' ಸಂಸ್ಥೆಯಲ್ಲಿ ಪಿಸಿ ಹಾಗೂ ಪಿಎಸ್‌ಐ ಪರೀಕ್ಷೆಗಳ ಉಚಿತ ತರಬೇತಿ ಶಿಬಿರ ಆಯೋಜಿಸಿದ್ದು, ಲೋಕಾಯುಕ್ತ ಮೈಸೂರು ಎಸ್ಪಿ ವಿ.ಜೆ.ಸಜೀತ್ ನಾಳೆ(ಡಿ.5) ಸಂಜೆ 6ಕ್ಕೆ ಉದ್ಘಾಟಿಸಲಿದ್ದಾರೆ.

ರಾಜ್ಯ ಸಹಕಾರ ಮಾರುಕಟ್ಟೆ ನಿಗಮದ ನಿರ್ದೇಶಕ ವೈ.ಎನ್.ಶಂಕರೇಗೌಡ ಅಧ್ಯಕ್ಷತೆ ವಹಿಸಲಿದ್ದು, ನಿವೃತ್ತ ಪೊಲೀಸ್ ಅಧಿಕಾರಿ ಹಾಗೂ ಅಂಕಣಕಾರ ಜೆ.ಬಿ.ರಂಗಸ್ವಾಮಿ, ಪದವಿಪೂರ್ವ ಶಿಕ್ಷಣ ಇಲಾಖೆ ಮೈಸೂರು ಉಪನಿರ್ದೇಶಕ ನಾಗಮಲ್ಲೇಶ್, ಮಂಡ್ಯ ಉಪ ನಿರ್ದೇಶಕ ಎಸ್.ಉಮೇಶ್ ಭಾಗವಹಿಸಲಿದ್ದಾರೆ ಎಂದು ಸಂಸ್ಥೆಯ ಕಾರ್ಯದರ್ಶಿ ಎಸ್.ಬಾಲಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹನುಮ ಜಯಂತಿ

ಮೈಸೂರು, ಡಿ.4– ಮೈಸೂರಿನ ಹೆಬ್ಬಾಳು ಒಂದನೇ ಹಂತ, ಎಸ್‌ಬಿಐ ಮುಖ್ಯರಸ್ತೆಯ ಶ್ರೀ ಸಿದ್ದಪ್ಪಾಜಿ ದೇವಸ್ಥಾನ ಸೇವಾ ಸಮಿತಿ ಹಾಗೂ ಕೇಸರಿ ನಂದನ ಗ್ರೂಪ್ಸ್ ಸಹಯೋಗದಲ್ಲಿ ಸೋಮವಾರ(ಡಿ.5) ನಾಲ್ಕನೇ ವರ್ಷದ ಹನುಮ ಜಯಂತಿ ಪೂಜಾ ಮಹೋತ್ಸವ ಆಯೋಜಿಸಲಾಗಿದ್ದು, ಬೆಳಗ್ಗೆ 11ಕ್ಕೆ ಪ್ರಮುಖ ಬೀದಿಗಳಲ್ಲಿ ಕಂಡಾಯ ಮತ್ತು ಹರಿಗೆ ದೇವರ ಮೆರವಣಿಗೆ ನೆರವೇರಿದ ನಂತರ ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ ಜರುಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಶಾಸ್ತ್ರೀಯ ಸಂಗೀತಕ್ಕೆ ಮನಸೋತ ಕಲಾಭಿಮಾನಿಗಳು




ಮೈಸೂರು, ಡಿ.4(ಎಂಕೆ)– ಶಾಸ್ತ್ರೀಯ ಸುಗಮ ಸಂಗೀತ ನಾದ–ನಿನಾದಕ್ಕೆ ಮನಸೋತ ಕಲಾಭಿಮಾನಿಗಳು, ಅಭಿನಂದನೆಗಳ ಸುರಿಮಳೆಗೈದರು..! ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸ್ಮರಣಾರ್ಥ ಆಯೋಜಿಸಿರುವ ಇಪ್ಪತ್ತೇಳನೆಯ ಸಂಗೀತ ಸಮ್ಮೇಳನದಲ್ಲಿ ಶಾಸ್ತ್ರೀಯ ಸಂಗೀತದ ಇಂಪು ಅಪಾರ ಕಲಾರಸಿಕರನ್ನು ಮನಸೂರೆಗೊಳ್ಳುತ್ತಿದೆ.

ವಿದ್ವಾನ್ ಜಿ.ಕೆ.ಮೋಹನ್, ತ್ಯಾಗರಾಜರ ರಚನೆ 'ಈಶ ಪಾಯಿಮಾಮ್' ಹಾಡನ್ನು ಕಲ್ಯಾಣಿ ರಾಗದಲ್ಲಿ, 'ಸುಂದರ ನಟರಾಜ' ಹಾಡನ್ನು ಕರಹರ ಪ್ರಿಯ ರಾಗದಲ್ಲಿ, 'ಪಾಲಿಂಚು ಕಾಮಾಕ್ಷಿ' ಹಾಡನ್ನು ಸುಮಧುರವಾಗಿ ಹಾಡಿ ನೆರೆದಿದ್ದವರ ಹೃದಯಗೆದ್ದರು. ವಯೋಲಿನ್ ವಾದನದಲ್ಲಿ ವಿದ್ವಾನ್ ಸುಮಂತ್ ಮಂಜುನಾಥ್ ಹಾಗೂ ಮೃದಂಗದಲ್ಲಿ ವಿದ್ವಾನ್ ಅನಿರುದ್ ಭಟ್ ಕೈಚಳಕ ತೋರಿದರು.

ನಾದ ಇಂಪು: ಬಳಿಕ ವೇದಿಕೆಗೆ ಆಗಮಿಸಿದ ವಿದುಷಿ ಡಾ.ಜಯಂತಿ ಆರ್.ಕುಮರೇಶ್ ಅವರ ವೀಣಾವಾದನದ ಇಂಪು ಕೇಳುಗರ ಮನಸ್ಸಿಗೆ ಮುದ ನೀಡಿತು. ಮೃದಂಗ ವಾದನದಲ್ಲಿ ವಿದ್ವಾನ್ ತುಮಕೂರು ಬಿ.ರವಿಶಂಕರ್ ಹಾಗೂ ಘಟಂನಲ್ಲಿ ವಿದ್ವಾನ್ ತಿರುಚಿ ಕೃಷ್ಣಸ್ವಾಮಿ ಉತ್ತಮ ಸಹಕಾರ ನೀಡಿದರು.

ಬಸವರಾಜು ನಿಧನ



ಮೈಸೂರು, ಡಿ.4– ಮೈಸೂರಿನ ಕೆ.ಜಿ.ಕೊಪ್ಪಲು ಲೇಟ್ ಮಾದಯ್ಯ(ಭೂಪಣ್ಣ) ಅವರ ಪುತ್ರ ಬಸವರಾಜು(70) ಅವರು ಭಾನುವಾರ ನಿಧನರಾದರು.

ಮೃತರು ಪತ್ನಿ ಜಯಲಕ್ಷ್ಮೀ, ಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ಸೋಮವಾರ ಬೆಳಗ್ಗೆ 11.30ಕ್ಕೆ ಮೃತರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಶ್ರೀಮತಿ ಕೀರ್ತನ (ಶೋಭ ಬಿ.)

ಇವರು ದಿನಾಂಕ 24.11.2022 ಗುರುವಾರ ಶಿವೈಕ್ಯರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 05.12.2022 ಸೋಮವಾರ ಮಧ್ಯಾಹ್ನ 12.00 ಗಂಟೆಗೆ ಮೃತರ ಸ್ವಗೃಹ ಕುರುಬರಹುಂಡಿ, ಬೇಗೂರು (ಹೊ), ಗುಂಡ್ಲುಪೇಟೆ(ತಾ) ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿಸು ಆಗಮಿಸಿ ಮೃತರ ಶಿವೈಕ್ಯರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ

ದುಃಖತಪ್ತರು: ಕೆ.ಎಂ.ಮಹದೇವಸ್ವಾಮಿ ಮತ್ತು ಮಗ ಕೆ.ಎಂ ಮನಸ್ವಿತ್, ದಿವಂಗತ ಕೆ.ಎಸ್.ಮಲ್ಲಿಕಾರ್ಜುನಪ್ಪನವರ ಕುಟುಂಬವರ್ಗದವರು, ಮೂಡ್ಲುಪುರ ದಿವಂಗತ ಬಸವಣ್ಣನವರ ಕುಟುಂಬವರ್ಗದವರು ಕುರುಬರಹುಂಡಿ (ಶಿವಕುಮಾರಪುರ) ಗ್ರಾಮಸ್ಥರು

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ K.M.ಮಹದೇವ (ಅಪ್ಪಾಜಿ)

ಜಂಟಿ ಕಾರ್ಯದರ್ಶಿ, ಕುರುಬರ ಶ್ರೀ ಬೀರೇಶ್ವರ ಶ್ರೀರಾಮಮಂದಿರ ಟ್ರಸ್ಟ್, N.R.ಮೊಹಲ್ಲಾ

ದುಃಖತಪ್ತರು: ಎಂ.ಎನ್.ಮಹಾದೇವ, ಅಧ್ಯಕ್ಷರು. ಸಿದ್ದಯ್ಯ, ಉಪಾಧ್ಯಕ್ಷರು, ಎಸ್ ಬಸವರಾಜು, ಗೌ.ಕಾರ್ಯದರ್ಶಿ.ಚುಂಚಯ್ಯ, ಖಜಾಂಚಿ ಮತ್ತು ಆಡಳಿತ ಮಂಡಳಿ ಸದಸ್ಯರು.

5ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರು ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಚಿಕ್ಕಮ್ಮ ಮಹದೇವಮ್ಮ, ಎಂ. ಮಹದೇವು ಚಂದ್ರಮ್ಮ, ಲಕ್ಷ್ಮೀ, ದೇವರಾಜು, ಮುದ್ದು, ಮತ್ತು ಕುಟುಂಬಸ್ಥರು ರಮ್ಮನಹಳ್ಳಿ, ಮೈಸೂರು

ಸಿ ನಾಗರಾಜು

ನಿಧನ: 04.12.2017

ಮಾಜಿ ಗ್ರಾಪಂ. ಸದಸ್ಯರು, ರಮ್ಮನಹಳ್ಳಿ, ಮೈಸೂರು

1ನೇ ವರ್ಷದ ಸವಿನೆನಪು



ಶ್ರೀ ಎಸ್. ದೊರೆಸ್ವಾಮಿ

ಕಾರ್ಯಪಾಲಕ ಅಭಿಯಂತರರು (ನಿವೃತ್ತ)

ಜನನ : 18-06-1942 ನಿಧನ : 05-12-2021

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷಗಳು ಕಳೆದರೂ ಸದಾ ನಿಮ್ಮ ಪ್ರೀತಿ, ಆದರ್ಶಗಳು ನಮಗೆ ದಾರಿದೀಪವಾಗಿದೆ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ.

ಸದಾ ನಿಮ್ಮ ನೆನಪಿನಲ್ಲಿರುವ

ಮೃತರ ಪತ್ನಿ ಶ್ರೀಮತಿ ಎಸ್. ಜಯಮ್ಮ, ಮಕ್ಕಳು, ಅಳಿಯಂದಿರು, ಸೊಸೆಯಂದಿರು ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಒಂದನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಶ್ರೀ ಪಟೇಲ್ ನಿಂಗೇಗೌಡರು, ಹೆಣ್ಣುಮಕ್ಕಳು, ಅಳಿಯಂದಿರು, ಮಗ, ಸೊಸೆ, ಮೊಮ್ಮಕ್ಕಳು, ಕಡತನಾಳು ಗ್ರಾಮಸ್ಥರು ಹಾಗೂ ಕುಟುಂಬ ವರ್ಗದವರು.

ಶ್ರೀಮತಿ ಕೆ.ಸುಧರವರು

ನಿಧನ: 06.12.2021

ಸಾರ್ವಜನಿಕ ತಿಳುವಳಿಕೆ

ನಮ್ಮ ಕಕ್ಷೀದಾರರಾದ ಮೈಸೂರು ನಗರ, ಯಾದವಗಿರಿ, 3ನೇ ಮುಖ್ಯ ರಸ್ತೆ, ಮನೆ ನಂ. 20 ರಲ್ಲಿ ವಾಸವಾಗಿರುವ 1) ಶ್ರೀ ರವೀಂದ್ರ ಜೈನ್ ಬಿನ್ ಶ್ರೀ ರಾಜಕುಮಾರ್ ಜೈನ್, (2) ಶ್ರೀ ಮಾಯಾಂಕ್ ಜೈನ್ ಬಿನ್ ಶ್ರೀ ಅಜಿತ್ ಕುಮಾರ್ ಜೈನ್, (3) ಶ್ರೀ ಆಕಾಶ್ ಜೈನ್ ಎಸ್. ಬಿನ್ ಸಂತೋಷ್ ಜೈನ್ ಇವರುಗಳು ಷೆಡ್ಯೂಲಿನಲ್ಲಿ ಕಾಣಿಸಿರುವ ಸ್ವತ್ತನ್ನು ಕ್ರಯಕ್ಕೆ ಪಡೆಯುವ ಸಂಬಂಧ ಸದರಿ ಸ್ವತ್ತಿನ ಮಾಲೀಕರಾದ ಮೈಸೂರು ನಗರ, ಕೆ.ಜಿ.ಕೊಪ್ಪಲು, 2ನೇ ಕ್ರಾಸ್ ಹೊಸಬೀದಿ, ಮನೆ ನಂ. 2689 ರಲ್ಲಿ ವಾಸವಾಗಿರುವ 1) ಶ್ರೀ ಸಿ.ಸಿದ್ದೇಗೌಡ ಬಿನ್ ಚಿಕ್ಕಬೋರಯ್ಯ, (2) ಶ್ರೀಮತಿ ಗೀತಾ ಎಸ್. ಕೋಂ ಶ್ರೀ ಸಿ. ಸಿದ್ದೇಗೌಡ, (3) ಶ್ರೀಮತಿ ವನಜಾಕ್ಷಿ ಕೋಂ ಶ್ರೀ ಎನ್. ಶಿವಕುಮಾರ್ ಬಿನ್ ಶ್ರೀ ಸಿ. ಸಿದ್ದೇಗೌಡ, (4) ಶ್ರೀ ಎಸ್. ಸುರೇಶ ಬಿನ್ ಶ್ರೀ ಸಿ. ಸಿದ್ದೇಗೌಡ, (5) ಶ್ರೀಮತಿ ಸಹನಾ ಕೋಂ ಶ್ರೀ ಎಸ್. ಸುರೇಶ, (6) ಶ್ರೀ ನಿಶಿಕಾಂತ್ ಬಿನ್ ಶ್ರೀ ಎಸ್. ಸುರೇಶ (ಮೈನರ್ ಆಗಿದ್ದು ಇವರ ಪರ ಎಸ್. ಸುರೇಶ ಮೈನರ್ ಗಾರ್ಡಿಯನ್ ಆಗಿರುತ್ತಾರೆ), (7) ಶ್ರೀಮತಿ ಸರಸ್ವತಿ ಕೋಂ ಶ್ರೀ ಕುಮಾರ್ ಬಿನ್ ಶ್ರೀ ಸಿ. ಸಿದ್ದೇಗೌಡ ಇವರುಗಳೊಂದಿಗೆ ದಿನಾಂಕ 28–10–2021 ರಂದು ಕ್ರಯದ ಕರಾರನ್ನು ಮಾಡಿಕೊಂಡಿದ್ದು, ಸದರಿ ಕ್ರಯದ ಕರಾರಿನಂತೆ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಶುದ್ಧ ಕ್ರಯ ಪತ್ರವನ್ನು ನೋಂದಣಿ ಮಾಡಿಸಿಕೊಳ್ಳಲು ಮುಂದಾಗಿರುತ್ತಾರೆ. ನಮ್ಮ ಕಕ್ಷಿದಾರರನ್ನು ಹೊರತುಪಡಿಸಿ ಬೇರೆ ಯಾರಿಗಾದರೂ ಷೆಡ್ಯೂಲ್ ಸ್ವತ್ತಿನ ಕ್ರಯದ ಸಂಬಂಧ ಹಕ್ಕು, ಹಿತಾಸಕ್ತಿ ಇದ್ದಂತಹ ಸಂದರ್ಭದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 7 ದಿನಗಳೊಳಗೆ ನಮಗಾಗಲೀ ಅಥವಾ ನಮ್ಮ ಕಕ್ಷಿದಾರರಿಗಾಗಲೀ ಸದರಿ ಆಕ್ಷೇಪಣೆಗಳನ್ನು ನೋಂದಾಯಿತ ಅಂಚೆ ಸ್ವೀಕೃತಿ ಬಾಕಿ ಅಡಿಯಲ್ಲಿ ಸಲ್ಲಿಸಬಹುದು, ಒಂದು ವೇಳೆ ಸದರಿ ಅವಧಿಯಲ್ಲಿ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಮ್ಮ ಕಕ್ಷೀದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ತಕರಾರು ಇಲ್ಲವೆಂದು ಭಾವಿಸಿ ಕ್ರಯದ ವಹಿವಾಟನ್ನು ಪೂರ್ಣಗೊಳಿಸಲು ಮುಂದಾಗುತ್ತಾರೆಂದು ತಿಳಿಯುವುದು. ಷೆಡ್ಯೂಲ್ ಸ್ವತ್ತಿನ ಸಂಬಂಧ ನಂತರ ಬರುವ ಯಾವುದೇ ತಂಟೆ, ತಕರಾರು ನನ್ನ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲ ಎಂಬುದಾಗಿಯೂ ತಿಳಿಯುವುದು.

ಷೆಡ್ಯೂಲ್

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಸಿದ್ದಲಿಂಗಪುರ ಗ್ರಾಮದ ಸರ್ವೆ ನಂ. 7/1 A, ವಿಸ್ತೀರ್ಣ 19 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಮರಿಲಿಂಗು ಪಾಲಿನ ಆಸ್ತಿ ; ಪಶ್ಚಿಮಕ್ಕೆ: ಕೃಷ್ಣಪ್ಪನ ಜಮೀನು; ಉತ್ತರಕ್ಕೆ: ನೀರಳ್ಳ; ದಕ್ಷಿಣಕ್ಕೆ: ಕಾಲುವೆ ಏರಿ.

ಸಹಿ/– ಎಸ್. ವಿವೇಕ್ BAL, LL.B
ವಕೀಲರು ಕಛೇರಿ: ಸಂ. 452, 1 ನೇ ಮಹಡಿ, ಕೊಠಡಿ ಸಂಖ್ಯೆ 5, ಶ್ರೀ ನಂಜುಂಡೇಶ್ವರ ಕಾಂಪ್ಲೆಕ್ಸ್' M.G. ರಸ್ತೆ, ಫೋರ್ಟ್ ಮೊಹಲ್ಲಾ., ಮೈಸೂರು–4

ದಿನಾಂಕ: 4-12-2022
ಮೈಸೂರು

FOUNDATIONS SILVER SPRINGS OWNERS CO-OPERATIVE SOCIETY LTD.

KRS Road, Hootagalli, Mysuru – 570018 Mob: 84318 61147

ASSET LIQUIDATION TENDER : INVITATION FOR SUBMISSION OF BID

As per AGM resolution dated 07/08/2022 the undersigned is authorized to liquidate following assets 'as is' basis. Interested parties are requested to spot-inspect and submit their competitive bid within 15 days from the date of publication of this notice.


1.	Jindal GI Pipe : 6 Years old	Approximately 2 tons of GI pipes of various dimensions used for domestic piped LPG
2.	Garbage Composter	5 year old Eco Tatva Model 10-D quick garbage decomposer, sparingly used.

The winning bidder shall complete the liquidation process within 30 days and shall remove the item/s at his own cost. All disputes are subject to Mysuru jurisdiction only.

Sd/- Sri. P. S Nagaraj, Chief Executive Officer

ಮತದಾರರ ಪಟ್ಟಿಗೆ ಹೆಸರು ಸೇರಿಸಿ

ಕಾಲೇಜು ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರೊಂದಿಗೆ ಎಡಿಸಿ ಚರ್ಚೆ





ಮಡಿಕೇರಿ, ಡಿ.4– ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮುಖ್ಯ ಭಾಗವಾಗಿರುವ ಯುವ ಸಮೂಹವು ಮತದಾರರ ಪಟ್ಟಿಗೆ ಕಡ್ಡಾಯವಾಗಿ ಹೆಸರು ನೋಂದಾಯಿಸಿಕೊಂಡು 2023ರ ಸಾಲಿನ ಸಾರ್ವತ್ರಿಕ ಚುನಾವಣೆಯಲ್ಲಿ ಭಾಗವಹಿಸಲು ಕೈಜೋಡಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ. ನಂಜುಂಡೇಗೌಡ ಮನವಿ ಮಾಡಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮತದಾರರ ಪಟ್ಟಿಗೆ ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಳ್ಳುವ ಸಂಬಂಧ ಜಿಲ್ಲೆಯ ಎಲ್ಲಾ ಕಾಲೇಜು ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಮತದಾರರ ಪಟ್ಟಿಗೆ ಯುವ ಸಮೂಹ ಸೇರ್ಪಡೆಗಾಗಿ ಜಿಲ್ಲೆಯಾದ್ಯಂತ ಈಗಾಗಲೇ ಅಭಿಯಾನ ಆರಂಭಿಸಲಾಗಿದೆ. ಜಿಲ್ಲೆಯ ಅರ್ಹ ಪ್ರತಿಯೊಬ್ಬ ಯುವ ಸಮೂಹವು ಮತದಾರರ ಪಟ್ಟಿಗೆ ಸೇರ್ಪಡೆಯಾಗುವಂತೆ ಮತ್ತು ಚುನಾವಣಾ ಸಂದರ್ಭದಲ್ಲಿ ಪ್ರತಿಯೊಬ್ಬರೂ ತಪ್ಪದೇ ಮತದಾನ ಮಾಡುವಂತೆ ಸರಿಯಾದ ಮಾಹಿತಿ ಮತ್ತು ಜಾಗೃತಿಯನ್ನು ಮೂಡಿಸಬೇಕು ಎಂದು ಅವರು ಹೇಳಿದರು.

ಕಾಲೇಜು, ಶಿಕ್ಷಣ ಸಂಸ್ಥೆಗಳಲ್ಲಿ 01–01–2023ಕ್ಕೆ ಅರ್ಹತಾ ದಿನಾಂಕವಾಗಿ 18 ವರ್ಷ ಪೂರ್ಣಗೊಂಡವರು ಮತದಾರರ ಸಹಾಯವಾಣಿ ಆ್ಯಪ್ (VOTER HELPLINE APP) ಮೂಲಕ ಮಾಹಿತಿಯನ್ನು ಭರ್ತಿ ಮಾಡಿ ನೋಂದಾವಣಿ ಮಾಡಲು ಕ್ರಮ ವಹಿಸುವಂತೆ ಕಾಲೇಜು ಪ್ರಾಂಶುಪಾಲರಿಗೆ ನಿರ್ದೇಶನ ನೀಡಿದರು.

ಮತದಾರರ ಪಟ್ಟಿ ಮತ್ತು ಚುನಾವಣೆಯ ಕುರಿತು ಮತದಾರರಿಗೆ ಮಾಹಿತಿಯನ್ನು ನೀಡುವ ಸಲುವಾಗಿ ಭಾರತ ಚುನಾವಣಾ ಆಯೋಗವು ಮತದಾರರ ಸಹಾಯವಾಣಿ ಆ್ಯಪ್ ಅನ್ನು ಬಿಡುಗಡೆ ಮಾಡಿದ್ದು, ಎಲ್ಲಾ ಮತದಾರರು/ ನಾಗರಿಕರು ತಮ್ಮ ಮೊಬೈಲ್‌ನಲ್ಲಿ ಮತದಾರರ ಸಹಾಯವಾಣಿ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವುದು. ಮತ್ತು ಮತದಾರರ ಸಹಾಯವಾಣಿ ಆ್ಯಪ್ ಮೂಲಕ ನೋಂದಾಯಿಸಿಕೊಂಡ ವಿದ್ಯಾರ್ಥಿಗಳನ್ನು ಹೊರತುಪಡಿಸಿ 18 ವರ್ಷ ತುಂಬಿದ ಬಾಕಿ ಉಳಿದ ವಿದ್ಯಾರ್ಥಿಗಳನ್ನು ಶೀಘ್ರವೇ ನೋಂದಾಯಿಸಿಕೊಳ್ಳಲು ಕ್ರಮವಹಿಸುವಂತೆ ಅವರು ಸೂಚನೆ ನೀಡಿದರು.

ಭಾಗಮಂಡಲ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ದಿವಾಕರ ಅವರು ಮತದಾರರ ಸಹಾಯವಾಣಿ ಆ್ಯಪ್ ಮೂಲಕ ಯಾವ ರೀತಿ ನೋಂದಾಯಿಸಿ ಕೊಳ್ಳಬೇಕು ಎಂಬುದರ ಬಗ್ಗೆ ಮಾಹಿತಿ ನೀಡಿದರು.

ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಜೆನಿಫರ್ ಲೋಲಿಟ, ಪದವಿ ಪೂರ್ವ ಕಾಲೇಜಿನ ಉಪ ನಿರ್ದೇಶಕರಾದ ಪುಟ್ಟರಾಜು, ಜಿಲ್ಲೆಯ ವಿವಿಧ ಕಾಲೇಜುಗಳ ಪ್ರಾಂಶುಪಾಲರು, ಶಿರಸ್ತೆದಾರ್ ಪ್ರಕಾಶ್, ಚುನಾವಣೆ ಶಾಖೆಯ ಅನಿಲ್, ಇತರರು ಇದ್ದರು.

ಮಂಗಳೂರು ಕುಕ್ಕರ್ ಸ್ಫೋಟ ಪ್ರಕರಣ

ಕೊಡಗಿನಲ್ಲಿ ವಿಶೇಷ ತಂಡದಿಂದ ತನಿಖೆ

ಮಡಿಕೇರಿ, ಡಿ.4– ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳೂರು ಪೊಲೀಸರ ವಿಶೇಷ ತಂಡವೊಂದು ಕೊಡಗಿಗೆ ಆಗಮಿಸಿ ತನಿಖೆ ನಡೆಸಿ ಮಾಹಿತಿ ಸಂಗ್ರಹಿಸಿದೆ.



ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಆರೋಪಿ ಶಾರಿಕ್ ಎಂಬಾತನ ಸಹಚರರು ಎನ್ನಲಾಗಿರುವ 3 ಮಂದಿ ಆರೋಪಿಗಳು ಇದೇ ಮೇ ತಿಂಗಳಲ್ಲಿ ಕೊಡಗಿಗೆ ಆಗಮಿಸಿ ದಕ್ಷಿಣ ಕೊಡಗಿನ ಪೊನ್ನಂಪೇಟೆ ತಾಲೂಕಿನ ಹುದಿಕೇರಿಯ ಹೋಂ ಸ್ಟೇ ಒಂದರಲ್ಲಿ ತಂಗಿದ್ದರು ಎಂಬ ಮಾಹಿತಿ ಆಧರಿಸಿ ಪೊಲೀಸರು ತನಿಖೆ ನಡೆಸಿದ್ದಾರೆ. ಟಿ.ಶೆಟ್ಟಿಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೆಮ್ಮಲೆ ಗ್ರಾಮದ ಪೋಟೆಕಾಡ್ ವ್ಯಾಪ್ತಿಯ ಹೋಂ ಸ್ಟೇ ಒಂದರ ಮಾಲೀಕರನ್ನು ವಿಚಾರಣೆ ನಡೆಸಿರುವ ಪೊಲೀಸರು, ಸೋಮವಾರ ಮಂಗಳೂರಿಗೆ ಆಗಮಿಸಿ ತನಿಖೆಗೆ ಸಹಕರಿಸುವಂತೆ ಸೂಚಿಸಿರುವುದಾಗಿ ವಿಶ್ವಾಸನೀಯ ಮೂಲಗಳಿಂದ ತಿಳಿದು ಬಂದಿದೆ.

ಸಿದ್ದಾಪುರದಲ್ಲಿ ಕಸಾಪದಿಂದ ಪ್ರಬಂಧ, ಗೀತಾ ಗಾಯನ ಸ್ಪರ್ಧೆ



ಸಿದ್ದಾಪುರ, ಡಿ.4– ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಇಕ್ರಾ ಪಬ್ಲಿಕ್ ಶಾಲೆಯ ಸಂಯುಕ್ತ ಆಶ್ರಯದಲ್ಲಿ ಅಮ್ಮತ್ತಿ ಹೋಬಳಿ ಹಂತದ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಗೀತಾ ಗಾಯನ ಮತ್ತು ಪ್ರಬಂಧ ಸ್ಪರ್ಧೆ ಸಿದ್ದಾಪುರ ಇಕ್ರಾ ಶಾಲೆಯ ಸಭಾಂಗಣದಲ್ಲಿ ನಡೆಯಿತು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾಧ್ಯಕ್ಷ ಎಂ. ಪಿ ಕೇಶವ ಕಾಮತ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕನ್ನಡ ರಾಜ್ಯೋತ್ಸವ ಅಂಗವಾಗಿ ಜಿಲ್ಲೆಯಾದ್ಯಂತ 20ಕ್ಕೂ ಹೆಚ್ಚು ಶಾಲೆಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನ ಹಮ್ಮಿಕೊಳ್ಳುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಕನ್ನಡದ ಜಾಗೃತಿ ಮೂಡಿಸಲಾಗುತ್ತಿದ್ದು ಕನ್ನಡ ನಾಡು ನುಡಿ ಕಲೆ ಸಂಸ್ಕೃತಿಯನ್ನು ಪ್ರತಿಯೊಬ್ಬರು ಮೈಗೂಡಿಸಿಕೊಂಡು ಮುನ್ನಡೆಯಬೇಕೆಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಮೊಬೈಲ್ ಬಳಕೆಯಿಂದ ದೂರವಿದ್ದು ಗ್ರಂಥಾಲಯದ ಓದುವ ಜ್ಞಾನ ಬೆಳೆಸಿಕೊಳ್ಳಬೇಕೆಂದರು. ಶಾಲೆಯಲ್ಲಿ ಗೀತಾ ಗಾಯನ, ಪ್ರಬಂಧ ಸ್ಪರ್ಧೆ, ಹಾಡುಗಾರಿಕೆಯಲ್ಲಿ ಅಮ್ಮತ್ತಿ ಹೋಬಳಿ ಮಟ್ಟದ ವಿವಿಧ ಶಾಲೆಗಳ ನೂರಾರು ವಿದ್ಯಾರ್ಥಿಗಳು ಪಾಲ್ಗೊಂಡರು.

ಕನ್ನಡ ರಾಜ್ಯೋತ್ಸವ ಅಂಗವಾಗಿ ನಡೆದ ಶಾಲಾ ವಿದ್ಯಾರ್ಥಿಗಳ ನೃತ್ಯ ಕಾರ್ಯಕ್ರಮ ಗಮನ ಸೆಳೆಯಿತು. ಕನ್ನಡ ಸಾಹಿತ್ಯ ಪರಿಷತ್ ಅಮ್ಮತಿ ಹೋಬಳಿ ಘಟಕ ಅಧ್ಯಕ್ಷ ಟಿ.ಎಚ್.ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ತುಳಸಿ ಗಣಪತಿ, ಗುಯ್ಯ ಅಗಸ್ತ್ಯೇಶ್ವರ ಸೇವಾ ಸಹಕಾರ ಸಂಘದ ಅಧ್ಯಕ್ಷ ಎಂ.ಎಸ್ ವೆಂಕಟೇಶ್, ಇಕ್ರಾ ಪಬ್ಲಿಕ್ ಶಾಲೆಯ ಮುಖ್ಯ ಶಿಕ್ಷಕ ಕೆ.ಯು ಅಬ್ದುಲ್ ರಜಾಕ್, ಇಕ್ರಾಶಾಲಾ ಆಡಳಿತ ಮಂಡಳಿ ಕಾರ್ಯದರ್ಶಿ ಕೆ.ಯು ಅಬ್ದುಲ್ ಮಜಿದ್, ಗ್ರಾಮ ಪಂಚಾಯಿತಿ ಸದಸ್ಯ ಶಾಹಿನುಲ್ಲಾ, ವಿರಾಜಪೇಟೆ ಜನಪದ ಪರಿಷತ್ ಅಧ್ಯಕ್ಷ ಟೋಮಿ ಥೋಮಸ್, ಕಲಾವಿದ ಭಾವ ಮಾಲ್ದಾರೆ ಮೂಸ, ದರ್ಶನ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೂರನೇ ಅಂತಸ್ತಿನಿಂದ ಬಿದ್ದು ಕಟ್ಟಡ ಕಾರ್ಮಿಕ ಸಾವು

ಕುಶಾಲನಗರ, ಡಿ.4– ಹೊಸ ಮನೆ ನಿರ್ಮಾಣ ಕಾಮಗಾರಿ ಕೆಲಸದಲ್ಲಿ ತೊಡಗಿದ್ದ ಕಟ್ಟಡ ಕಾರ್ಮಿಕ ಮೂರನೇ ಅಂತಸ್ತಿನಿಂದ ಆಯತಪ್ಪಿ ಕೆಳಗೆ ಬಿದ್ದು ಮೃತಪಟ್ಟಿರುವ ಘಟನೆ ಭಾನುವಾರ ಇಲ್ಲಿನ ಆರ್.ಕೆ. ಬಡಾವಣೆಯಲ್ಲಿ ಸಂಭವಿಸಿದೆ.

ಪಿರಿಯಾಪಟ್ಟಣ ತಾಲೂಕಿನ ದೊಡ್ಡಹೊಸೂರು ಗ್ರಾಮದ ನಿವಾಸಿ ಲತೀಫ್ ಖಾನ್ ಎಂಬುವರ ಮಗ ಜಬೀರ್ (42) ಮೃತಪಟ್ಟ ದುರ್ದೈವಿ. ದುರ್ಘಟನೆಯಲ್ಲಿ ಜಬೀರ್ ಅವರ ತಲೆಗೆ ತೀವ್ರ ಸ್ವರೂಪದ ಪೆಟ್ಟು ಬಿದ್ದಿದ್ದ ಹಿನ್ನೆಲೆಯಲ್ಲಿ ಆತನನ್ನು ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮಂಗಳೂರು ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ಆತ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾನೆ. ಈ ಕುರಿತು ಕುಶಾಲನಗರ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಳೆಯಿಂದ ಕೊರಗಜ್ಜ ಸಾನ್ನಿಧ್ಯದಲ್ಲಿ ವರ್ಷಾವಧಿ ನೇಮೋತ್ಸವ

ಮಡಿಕೇರಿ, ಡಿ.4– ಉಡೋತ್‌ಮೊಟ್ಟೆ ಗ್ರಾಮದಲ್ಲಿರುವ ಶ್ರೀ ಸ್ವಾಮಿ ಕೊರಗಜ್ಜ ದೈವ ಸಾನ್ನಿಧ್ಯದಲ್ಲಿ ಡಿ.6 ಮತ್ತು 7ರಂದು ವರ್ಷಾವಧಿ ನೇಮೋತ್ಸವ ಹಾಗೂ ಪರಿವಾರ ಸತ್ಯ ದೈವಗಳ ನೇಮೋತ್ಸವ ನಡೆಯಲಿದೆ. ಡಿ.6ರಂದು ಬೆಳಿಗ್ಗೆ 7.30 ಗಂಟೆಗೆ ಗಣಪತಿ ಹೋಮ ನಡೆಯಲಿದ್ದು, ನಂತರ ಪ್ರಸಾದ ವಿತರಣೆಯಾಗಲಿದೆ.

ಸಂಜೆ 5.30ಕ್ಕೆ ದೈವಗಳ ಭಂಡಾರ ಇಳಿಸುವುದು, ರಾತ್ರಿ 7 ಗಂಟೆಯಿಂದ ಡಿ.7ರವರೆಗೆ ಶ್ರೀ ಮಂತ್ರವಾದಿ ಗುಳಿಗ, ಶ್ರೀ ಕಲ್ಲುರ್ಟಿ ದೈವ, ಶ್ರೀ ಧರ್ಮ ದೈವ ಹಾಗೂ ಶ್ರೀ ಸ್ವಾಮಿ ಕೊರಗಜ್ಜ ದೈವದ ನೇಮ ಜರುಗಲಿದೆ ಎಂದು ದೇವಾಲಯದ ಪ್ರಮುಖರು ತಿಳಿಸಿದ್ದಾರೆ.

ಪ್ರತಿ ಗ್ರಾಮಕ್ಕೂ ರಾಮಮಂದಿರ, ಸಮುದಾಯ ಭವನ ಅಗತ್ಯ



ಕೆ.ಆರ್.ಪೇಟೆ, ಡಿ.4– ತಾಲೂಕಿನ ಶೆಟ್ಟಿನಾಯಕನಕೊಪ್ಪಲು ಗ್ರಾಮಸ್ಥರು ನಿರ್ಮಿಸುತ್ತಿರುವ ರಾಮಮಂದಿರ ನಿರ್ಮಾಣ ಕಾಮಗಾರಿಗೆ ಸಮಾಜ ಸೇವಕ ಆರ್‌ಟಿಓ ಮಲ್ಲಿಕಾರ್ಜುನ್ ಆರ್ಥಿಕ ನೆರವು ನೀಡಿದರು.

ಈ ವೇಳೆ ಗ್ರಾಮಸ್ಥರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಮಲ್ಲಿಕಾರ್ಜುನ್ ಅವರು, ಪ್ರತಿಯೊಂದು ಗ್ರಾಮದಲ್ಲೂ ರಾಮ ಮಂದಿರ ಅಥವಾ ಸಮುದಾಯ ಭವನ ಇರಬೇಕು. ಇದರಿಂದ ಗ್ರಾಮದಲ್ಲಿ ಸಭೆ ಸಮಾರಂಭ ನಡೆಸಲು, ನ್ಯಾಯ– ಪಂಚಾಯಿತಿ ಮಾಡಲು ಸಹಾಯಕವಾಗುತ್ತದೆ. ಬಡವರು ಸರಳವಾಗಿ ವಿವಾಹ ಮಾಡಬಹುದಾಗಿದೆ. ಈ ಹಿನ್ನೆಲೆಯಲ್ಲಿ ಶೆಟ್ಟಿನಾಯಕನಕೊಪ್ಪಲು ಗ್ರಾಮಸ್ಥರು ರಾಮಮಂದಿರ ನಿರ್ಮಾಣ ಮಾಡುತ್ತಿರುವುದು ಒಳ್ಳೆಯ ಕಾರ್ಯ. ಇದೇ ರೀತಿ ಶಾಲೆ ಅಭಿವೃದ್ಧಿಗೂ ಗ್ರಾಮಸ್ಥರು ಮುಂದಾಗಬೇಕು ಎಂದರು.

ಈ ಸಂದರ್ಭ ಮುಖಂಡರಾದ ದೀಪು, ಜಗದೀಶ್, ಪರಮೇಶ್, ಗ್ರಾಪಂ ಉಪಾಧ್ಯಕ್ಷೆ ಆಶಾ, ವೀಣಾ, ಮಂಜುನಾಥ್, ಚಿಕ್ಕೇಗೌಡ, ಮಂಜು, ಜನಾರ್ಧನ್, ಸ್ವಾಮಿಗೌಡ, ರಾಮೇಗೌಡ, ನಾಗಣ್ಣ ದೇವರಾಜು, ರಾಜಣ್ಣ ಚಂದ್ರಣ್ಣ, ಹರೀಶ್, ಅರುಣ, ಪಾಪಣ್ಣ, ಮಹೇಶ್, ಶೇಖರ್, ಮನು, ಕುಮಾರ್, ಸೀನಣ್ಣ ನಾಗರಾಜಣ್ಣ ಸೇರಿದಂತೆ ಇತರರಿದ್ದರು.

ನಾಳೆ ಪ್ರತಿಭಾ ಕಾರಂಜಿ, ಕಲೋತ್ಸವ

ಮಂಡ್ಯ, ಡಿ.4– ಜಿಲ್ಲಾಡಳಿತ, ಜಿಪಂ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮವನ್ನು ಡಿ.6 ರಂದು ಬೆಳಗ್ಗೆ 10 ಗಂಟೆಗೆ ನಗರದ ಶ್ರೀಲಕ್ಷ್ಮಿ ಜನಾರ್ಧನ ಪ್ರೌಢಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಸಚಿವ ಕೆ.ಗೋಪಾಲಯ್ಯ ಉದ್ಘಾಟಿಸಲಿದ್ದಾರೆ. ಶಾಸಕ ಎಂ.ಶ್ರೀನಿವಾಸ್ ಅಧ್ಯಕ್ಷತೆ ವಹಿಸುವರು. ಸಚಿವ ಡಾ.ಕೆ.ಸಿ.ನಾರಾಯಣಗೌಡ, ಶಿಕ್ಷಣ ಸಚಿವ ನಾಗೇಶ್, ಸಂಸದೆ ಸುಮಲತಾ, ಎಂಎಲ್‌ಸಿಗಳಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಶಾಸಕರಾದ ಡಿ.ಸಿ ತಮ್ಮಣ್ಣ, ಸಿ.ಎಸ್.ಪುಟ್ಟರಾಜು, ಸುರೇಶ್‌ಗೌಡ, ಡಾ.ಕೆ.ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ನಗರ ಸಭೆ ಅಧ್ಯಕ್ಷ ಹೆಚ್.ಎಸ್. ಮಂಜು,ಉಪಾಧ್ಯಕ್ಷೆ ಇಷ್ರತ್ ಫಾತೀಮಾ, ಮುಡಾ ಅಧ್ಯಕ್ಷ ಕೆ.ಶ್ರೀನಿವಾಸ್ ಭಾಗವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಂ ರಾಯಪುರ, ಡಿಸಿ ಡಾ.ಎಚ್.ಎನ್.ಗೋಪಾಲಕೃಷ್ಣ ಜಿಪಂ ಸಿಇಓ ಶಾಂತ ಎಲ್.ಹುಲ್ಮನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್.ಎನ್, ಅಪರ ಜಿಲ್ಲಾಧಿಕಾರಿ ಡಾ.ಎಚ್.ಎಲ್.ನಾಗರಾಜ್ ಇನ್ನಿತರರಿದ್ದರು.

ಸೀತಾಪುರದಲ್ಲಿ ರಾಜ್ಯಮಟ್ಟದ ಹೊನಲುಬೆಳಕಿನ ವಾಲಿಬಾಲ್ ಪಂದ್ಯಾವಳಿಗೆ ಚಾಲನೆ

ಹುಬ್ಬಳ್ಳಿ ರೈಲ್ವೆಸ್ ಪ್ರಥಮ, ಎಲ್‌ಐಸಿ ತಂಡ ದ್ವಿತೀಯ





ಚಿನಕುರಳಿ, ಡಿ.4– ಇಲ್ಲಿಗೆ ಸಮೀಪದ ಸೀತಾಪುರದಲ್ಲಿ ರಾಯಲ್ ಯೂತ್ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ನಡೆದ ರಾಜ್ಯ ಮಟ್ಟದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿಗೆ ಶಾಸಕ ಸಿ.ಎಸ್.ಪುಟ್ಟರಾಜು ಹಾಗೂ ಎಸ್‌ಟಿಜಿ ಶಿಕ್ಷಣ ಸಂಸ್ಥೆ ಸಿಇಓ ಸಿ.ಪಿ.ಶಿವರಾಜು ಚಾಲನೆ ನೀಡಿದರು.

ಪಂದ್ಯಾವಳಿಯಲ್ಲಿ ಹುಬ್ಬಳ್ಳಿ ರೈಲ್ವೆಸ್, ಕರ್ನಾಟಕ ರಾಜ್ಯ ಪೊಲೀಸ್ ತಂಡ, ಬೆಂಗಳೂರು ಕ್ರೀಡಾ ಹಾಸ್ಟೆಲ್ ಹಾಗೂ ಎಲ್‌ಐಸಿ ತಂಡಗಳು ಭಾಗವಹಿಸಿದ್ದವು. ಲೀಗ್ ಮಾದರಿ ಪಂದ್ಯಾವಳಿ ನಡೆಯಿತು.

ಉದ್ಘಾಟನಾ ಪಂದ್ಯದಲ್ಲಿ ಹುಬ್ಬಳ್ಳಿ ರೈಲ್ವೆಸ್ ಹಾಗೂ ಬೆಂಗಳೂರು ಕ್ರೀಡಾ ಹಾಸ್ಟೆಲ್ ತಂಡಗಳು ಮುಖಾಮುಖಿಯಾಗಿದ್ದವು. ಸಾಕಷ್ಟು ರೋಚಕತೆಯಿಂದ ಕೂಡಿದ್ದ ಪಂದ್ಯದಲ್ಲಿ ಮೊದಲ ಸೆಟ್‌ನಲ್ಲಿ ಹುಬ್ಬಳ್ಳಿ ರೈಲ್ವೆಸ್, ಕ್ರೀಡಾ ಹಾಸ್ಟೆಲ್ ತಂಡದ ವಿರುದ್ಧ 24–20 ಅಂಕಗಳ ಅಂತರದಲ್ಲಿ ಮುನ್ನಡೆ ಪಡೆಯಿತು. 2ನೇ ಸೆಟ್‌ನಲ್ಲಿ ಬೆಂಗಳೂರು ಕ್ರೀಡಾ ಹಾಸ್ಟೆಲ್ ತಂಡ 25–20 ಅಂಕಗಳಿಂದ ಮುನ್ನಡೆ ಪಡೆದು ಸಮಬಲ ಸಾಧಿಸಿತು. ಈ ಹಿನ್ನೆಲೆಯಲ್ಲಿ ಮೂರನೇ ಸೆಟ್ ಅನ್ನು 15 ಅಂಕಕ್ಕೆ ಸೀಮಿತಗೊಳಿಸಲಾಯಿತು. 3ನೇ ಸೆಟ್ ಆರಂಭದಿಂದಲೂ ಎರಡೂ ತಂಡ ಪ್ರಬಲ ಹೋರಾಟ ನಡೆಸಿದವು. ಅಂತಿಮವಾಗಿ ಹುಬ್ಬಳಿ ರೈಲ್ವೆಸ್ ತಂಡ 15–12 ಅಂಕ ಪಡೆದು ಕ್ರೀಡಾ ಹಾಸ್ಟೆಲ್ ತಂಡ ಮಣಿಸಿ ವಿಜಯೋತ್ಸವ ಆಚರಿಸಿತು.

ನಂತರ ನಡೆದ 2ನೇ ಪಂದ್ಯದಲ್ಲಿ ರಾಜ್ಯ ಪೊಲೀಸ್ ತಂಡ ಹಾಗೂ ಎಲ್‌ಐಸಿ ತಂಡ ಸೆಣಸಾಡಿದವು. ಮೊದಲ ಸೆಟ್‌ನಲ್ಲಿ ಎಲ್‌ಐಸಿ ತಂಡ 12–25 ಅಂಕಗಳಿಂದ ಮುನ್ನಡೆ ಪಡೆಯಿತು. 2ನೇ ಸೆಟ್‌ನಲ್ಲಿ 25–13 ಅಂಕಗಳ ಅಂತರದಿಂದ ಎಲ್‌ಐಸಿ ತಂಡ ಪೊಲೀಸ್ ತಂಡವನ್ನು ಸೋಲಿಸಿ ಗೆಲುವು ಸಾಧಿಸಿತು.

3ನೇ ಪಂದ್ಯದಲ್ಲಿ ಎಲ್‌ಐಸಿ ಮತ್ತು ಹುಬ್ಬಳ್ಳಿ ರೈಲ್ವೆಸ್ ತಂಡಗಳು ಹೋರಾಡಿದವು. ಮೊದಲ ಹಾಗೂ 2ನೇ ಸೆಟ್‌ನಲ್ಲಿ ರೈಲ್ವೆಸ್ ತಂಡ ತಲಾ 26–24 ಅಂಕಗಳಿಂದ ಮುನ್ನಡೆ ಗಳಿಸಿ ಎಲ್‌ಐಸಿ ತಂಡವನ್ನು ಮಣಿಸಿ ಗೆಲುವು ಸಾಧಿಸಿತು.

4ನೇ ಪಂದ್ಯದಲ್ಲಿ ರಾಜ್ಯ ಪೊಲೀಸ್ ಹಾಗೂ ಕ್ರೀಡಾ ಹಾಸ್ಟೆಲ್ ತಂಡಗಳು ಮುಖಾಮುಖಿಯಾದವು. ಪಂದ್ಯದ ಮೊದಲ ಸೆಟ್‌ನಲ್ಲಿ ಕ್ರೀಡಾ ಹಾಸ್ಟೆಲ್ ತಂಡ 25–19 ಅಂಕ ಪಡೆದು ಮುನ್ನಡೆ ಪಡೆಯಿತು. 2ನೇ ಸೆಟ್‌ನಲ್ಲಿ 25–21 ಅಂಕಗಳ ಅಂತರದಿಂದ ಕ್ರೀಡಾ ಹಾಸ್ಟೆಲ್ ತಂಡ ಪೊಲೀಸ್ ತಂಡ ಸೋಲಿಸಿತು.

5ನೇ ಪಂದ್ಯದಲ್ಲಿ ಎಲ್‌ಐಸಿ ಹಾಗೂ ಕ್ರೀಡಾ ಹಾಸ್ಟೆಲ್ ತಂಡಗಳ ನಡುವೆ ಜರುಗಿತು. ಪಂದ್ಯದಲ್ಲಿ ಎಲ್‌ಐಸಿ ತಂಡ ಮೊದಲ ಸೆಟ್‌ನಲ್ಲಿ 25–23 ಅಂಕ ಗಳಿಸಿ ಮುನ್ನಡೆ ಪಡೆಯಿತು. 2ನೇ ಸೆಟ್‌ನಲ್ಲೂ ಎಲ್‌ಐಸಿ ತಂಡ 25–18 ಅಂಕಗಳೊಂದಿಗೆ ಮುನ್ನಡೆ ಪಡೆದು ಕ್ರೀಡಾ ಹಾಸ್ಟೆಲ್ ತಂಡದ ವಿರುದ್ಧ ಭರ್ಜರಿ ಗೆಲುವು ಸಾಧಿಸಿತು.

ಪಂದ್ಯಾವಳಿಯಲ್ಲಿ ಹುಬ್ಬಳ್ಳಿ ರೈಲ್ವೆಸ್ ಹಾಗೂ ಎಲ್‌ಐಸಿ 2 ಪಂದ್ಯಗಳಲ್ಲಿ ಜಯ ಗಳಿಸಿದರೆ. ಕ್ರೀಡಾ ಹಾಸ್ಟೆಲ್ ತಂಡ ಒಂದರಲ್ಲಿ ಗೆಲುವು ಸಾಧಿಸಿತ್ತು. ಪೊಲೀಸ್ ತಂಡ ಆಡಿದ ಎರಡು ಪಂದ್ಯದಲ್ಲಿ ಸೋಲುಂಡಿತ್ತು. ತಲಾ 2 ಪಂದ್ಯಗಳಲ್ಲಿ ಗೆಲುವು ಸಾಧಿಸಿ ರೈಲ್ವೆಸ್ ಹಾಗೂ ಎಲ್‌ಐಸಿ ತಂಡಗಳು ಸಮಬಲ ಸಾಧಿಸಿದ್ದವು. ಹೀಗಾಗಿ ನಂತರ ನಡೆದ ಫೈನಲ್ ಪಂದ್ಯದಲ್ಲಿ ರೈಲ್ವೆಸ್ ತಂಡ ಎಲ್‌ಐಸಿ ತಂಡವನ್ನು ಮಣಿಸಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದ ರೈಲ್ವೆಸ್ 50 ಸಾವಿರ ಬಹುಮಾನ ತನ್ನದಾಗಿಸಿಕೊಂಡರೇ, ಎರಡನೇ ಸ್ಥಾನ ಪಡೆದ ಎಲ್‌ಐಸಿ ತಂಡ 40 ಸಾವಿರ, ತೃತೀಯ ಸ್ಥಾನ ಪಡೆದ ಬೆಂಗಳೂರಿನ ಕ್ರೀಡಾ ಹಾಸ್ಟೆಲ್ ತಂಡ 30 ಸಾವಿರ ಹಾಗೂ ನಾಲ್ಕನೇ ಸ್ಥಾನ ಪಡೆದ ಪೊಲೀಸ್ ತಂಡ 20 ಸಾವಿರ ನಗದು ಬಹುಮಾನ ಪಡೆಯಿತು.

ವಿಜೇತರಿಗೆ ಶಾಸಕ ಸಿ.ಎಸ್.ಪುಟ್ಟರಾಜು ಬಹುಮಾನ ವಿತರಿಸಿದರು. ರೈಲ್ವೆಸ್ ತಂಡದಲ್ಲಿ ಅಂತಾರಾಷ್ಟ್ರೀಯ ಕ್ರೀಡಾಪಟು ಏಕಲವ್ಯ ಪ್ರಶಸ್ತಿಗೆ ಭಾಜನರಾಗಿರುವ ಪಾಂಡವಪುರ ತಾಲೂಕಿನ ಬೇವಿನಕುಪ್ಪೆ ಗ್ರಾಮದ ಹರಿಪ್ರಸಾದ್ ಭಾಗವಹಿಸಿದ್ದರು. ಎಲ್‌ಐಸಿ ತಂಡದಲ್ಲಿ ಭಾರತೀಯ ವಾಲಿಬಾಲ್ ತಂಡದ ನಾಯಕ ಕಾರ್ತಿಕ್ ಸೇರಿದಂತೆ ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದ ಹಲವು ಕ್ರೀಡಾಪಟುಗಳು ಭಾಗವಹಿಸಿದ್ದರು.

ಶಾಸಕ ಸಿ.ಎಸ್.ಪುಟ್ಟರಾಜು ಮಾತನಾಡಿ, ಸ್ಥಳೀಯ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಸೀತಾಪುರದಲ್ಲಿ ರಾಜ್ಯಮಟ್ಟದ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ. ಕ್ರೀಡಾಪಟುಗಳು ಕ್ರೀಡೆಯಲ್ಲಿ ಭಾಗವಹಿಸುವ ಮೂಲಕ ಕ್ರೀಡಾಸ್ಫೂರ್ತಿ ಮೆರೆಯಬೇಕು ಎಂದರು.

ಈ ವೇಳೆ ಮುಖಂಡ ವಿಶ್ವನಾಥ್ ಸೇರಿದಂತೆ ಹಲವರಿದ್ದರು.

ಉದರದರ್ಶಕ ಶಸ್ತ್ರಚಿಕಿತ್ಸಾ ಶಿಬಿರ

ಮಂಡ್ಯ, ಡಿ.4– ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಡಿ.7 ರಿಂದ 28 ರವರೆಗೆ ಉದರದರ್ಶಕ ಶಸ್ತ್ರಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ.

ಡಿ.7 ಅರಕೆರೆ ಸರ್ಕಾರಿ ಆರೋಗ್ಯ ಕೇಂದ್ರ, ಡಿ.9 ಕೀಲಾರ ಪ್ರಾಥಮಿಕ ಆರೋಗ್ಯ ಕೇಂದ್ರ, ಡಿ.13 ಕೆ.ಎಂ.ದೊಡ್ಡಿ ಸರ್ಕಾರಿ ಆರೋಗ್ಯ ಕೇಂದ್ರ, ಡಿ.14 ಕಿರುಗಾವಲು ಸರ್ಕಾರಿ ಆರೋಗ್ಯ ಕೇಂದ್ರ, ಡಿ.15 ಕೆರೆಗೋಡು ಪ್ರಾಥಮಿಕ ಆರೋಗ್ಯ ಕೇಂದ್ರ, ಡಿ.16 ಮದ್ದೂರು ತಾಲೂಕು ಆಸ್ಪತ್ರೆ, ಡಿ.17 ಶಿವಳ್ಳಿ ಸರ್ಕಾರಿ ಆರೋಗ್ಯ ಕೇಂದ್ರ, ಡಿ.27 ಬಿಂಡಿಗನವಿಲೆ ಸರ್ಕಾರಿ ಆರೋಗ್ಯ ಕೇಂದ್ರ ಹಾಗೂ ಮಧ್ಯಾಹ್ನ 1 ಗಂಟೆಗೆ ನಾಗಮಂಗಲ ಸರ್ಕಾರಿ ಆಸ್ಪತ್ರೆಯಲ್ಲಿ, ಡಿ.28 ಬಸರಾಳು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬೆಳಗ್ಗೆ 10 ಗಂಟೆಗೆ ಉದರದರ್ಶಕ ಶಸ್ತ್ರಚಿಕಿತ್ಸಾ ಶಿಬಿರ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಖಾಸಗಿ ವಲಯದಲ್ಲಿ ಮೀಸಲಾತಿ ಬಹಳ ಅವಶ್ಯಕ: ಚಿತ್ರನಟ ಚೇತನ್ ಅಹಿಂಸಾ

ಮೀಸಲಾತಿ ಪ್ರಾತಿನಿಧ್ಯವೋ– ಆರ್ಥಿಕ ಸಬಲೀಕರಣವೋ ವಿಚಾರ ಸಂಕಿರಣ ಕಾರ್ಯಕ್ರಮ



ಚಾಮರಾಜನಗರ, ಡಿ.4– ಖಾಸಗಿ ವಲಯದಲ್ಲಿ ಮೀಸಲಾತಿ ಬಹಳ ಅವಶ್ಯಕವಾಗಿದೆ ಎಂದು ಚಿತ್ರನಟ ಚೇತನ್ ಅಹಿಂಸಾ ಆಗ್ರಹಿಸಿದ್ದಾರೆ.

ನಗರದ ಜೆ.ಹೆಚ್.ಪಟೇಲ್ ಸಭಾಂಗಣ ಬಹುಜನ್ ವಾಲೆಂಟಿಯರ್ ಫೋರ್ಸ್– ಬಿವಿಎಫ್ ಜಿಲ್ಲಾ ಘಟಕದ ವತಿಯಿಂದ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ 66ನೇ ಪರಿನಿಬ್ಬಾಣ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡಿದ್ದ ಮೀಸಲಾತಿ ಪ್ರಾತಿನಿಧ್ಯವೋ– ಆರ್ಥಿಕ ಸಬಲೀಕರಣವೋ ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು. ನ್ಯಾಯ ಮೀಸಲಾತಿ ಪ್ರಾತಿನಿಧ್ಯವೋ– ಆರ್ಥಿಕ ಸಬಲೀಕರಣವೋ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕಾದರೆ ಮೀಸಲಾತಿ ಪ್ರಾತಿನಿಧ್ಯವೇ ಹೊರತು ಆರ್ಥಿಕ ಸಬಲೀಕರಣವಲ್ಲವೇ ಅಲ್ಲ. ನಮಗೆ ಮೀಸಲಾತಿ ಎಂದರೆ ಪ್ರತಿಯೊಂದು ಸಮುದಾಯಕ್ಕೂ ಆಯಾಯ ಸಮುದಾಯದ ಜನಸಂಖ್ಯೆ ಆಧಾರದ ಮೇಲೆ ಶಿಕ್ಷಣ, ಉದ್ಯೋಗ, ರಾಜಕೀಯ, ಭೌಗೋಳಿಕವಾಗಿ ಪ್ರಾಧಾನ್ಯತೆ ಕೊಡುವ ಒಂದು ಪ್ರಯತ್ನ ಎಂದರು.

ಚಾಮರಾಜನಗರಕ್ಕೆ ಬರಲು ಯಾವಾಗಲೂ ಖುಷಿ: ಚಾಮರಾಜನಗರ ಬರಲು ಯಾವಾಗಲು ಖುಷಿಯಾಗುತ್ತದೆ. ಅಮೇರಿಕಾದಿಂದ ಬಂದ ಮೇಲೆ ಚಾಮರಾಜನಗರದಿಂದ ನಮ್ಮ ಸಮಾಜ ಸೇವಾ ಶುರುವಾಗಿದೆ ಗುಂಡ್ಲುಪೇಟೆ, ಚಾಮರಾಜನಗರದಲ್ಲಿ ರಂಗಭೂಮಿ ಮುಖಾಂತರ ಪರಿವರ್ತನೆಯಾಗಬೇಕು ಎಂದು ಕೆಲಸ ಮಾಡಿ ಅನುಭವಪಟ್ಟ ನಂತರ ಸಿನಿಮಾದಲ್ಲಿ ಅವಕಾಶ ಸಿಕ್ಕಿತ್ತು. ಆನಂತರ ನಿಮ್ಮ ಜೊತೆ ಮಾತನಾಡಲು ಅವಕಾಶ ಸಿಕ್ಕಿರುವುದು ಬಹಳ ಸಂತೋಷವಾಗಿದೆ ಎಂದರು.

ಒಳ ಮೀಸಲಾತಿ ನ್ಯಾಯ ಬೇಡಿಕೆ : ಒಕ್ಕಲಿಗ ಸಮುದಾಯ ಶೇ.4 ರಿಂದ 12 ರವರೆಗೆ ಮೀಸಲಾತಿ ಬೇಕು ಎಂದು ಹೋರಾಟ ಮಾಡುವುದು ಸಮಂಜಸವಾಗಿದೆ. ಪಂಚಮಸಾಲಿ ಸಮುದಾಯ 3ಬಿ ಯಿಂದ 2 ಎಗೆ ಸೇರಿಸಬೇಕು ಎಂದು ಹೋರಾಟ ಮಾಡುವುದು ಸ್ವಾರ್ಥದ ಹೋರಾಟವಾಗಿದೆ. ನ್ಯಾ.ಸದಾಶಿವ ಆಯೋಗದ ಪ್ರಕಾರ ಒಳಮೀಸಲಾತಿ ನ್ಯಾಯಯುತ ಬೇಡಿಕೆಯಾಗಿದೆ. ಸರೋಜಿನಿ ಮಹಿಷಿ ವರದಿ ಆಧಾರಿತವಾಗಿ ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶ ನೀಡಬೇಕು ಎಂದರು. ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಮಾತನಾಡಿ, ಚುನಾವಣೆಗಳಲ್ಲಿ ಹಣಕ್ಕಾಗಿ ಮತ ಮಾರಾಟ ಮಾಡುವುದನ್ನು ಬಿಡುವ ತನಕ ಸಮಾನತೆ ಕಾಣಲು ಸಾಧ್ಯವಿಲ್ಲ. ಸಮಾಜಸೇವೆ ಮಾಡುವಂತಹ ವ್ಯಕ್ತಿಗಳ ಗುರುತಿಸಿ ಚುನಾವಣೆಗಳಲ್ಲಿ ಆಯ್ಕೆ ಮಾಡಿದರೆ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನ ಮೂಲಕ ನೀಡಿರುವ ಮೀಸಲಾತಿ, ಸಮಾನತೆಗೆ ಒಂದು ಅರ್ಥ ಬರುತ್ತದೆ, ಸಾರ್ಥಕವಾಗುತ್ತದೆ ಅ ಮೂಲಕ ಅಂಬೇಡ್ಕರ್ ಅವರ ಕನಸನ್ನು ನನಸು ಮಾಡಬಹುದಾಗಿದೆ ಎಂದರು

ಕರ್ನಾಟಕ ಬೌದ್ಧ ಸಮಾಜ ರಾಜ್ಯಾಧ್ಯಕ್ಷ ಹ.ರಾ. ಮಹೇಶ್ ಮೀಸಲಾತಿ ಕುರಿತು ಮಾತನಾಡಿ, ಮೀಸಲಾತಿ ಭಿಕ್ಷೆಯಲ್ಲ. ಅದು ಸಂವಿಧಾನಬದ್ಧವಾಗಿ ನಮಗೆ ನೀಡಿರುವ ಹಕ್ಕಾಗಿದೆ. ಯಾವುದೇ ಹೋರಾಟ ಉಪವಾಸ ಮಾಡದೇ ಇರುವ ಮೇಲ್ವರ್ಗದವರಿಗೆ ಶೇ.10 ರಷ್ಟು ಮೀಸಲಾತಿ ನೀಡಲಾಗಿದೆ. ಮೀಸಲಾತಿಗಾಗಿ ಬೀದಿಗಿಳಿದು ಹೋರಾಟ ಮಾಡುವ ಶೋಷಿತ ಸಮುದಾಯಗಳಿಗೆ ಮೀಸಲಾತಿ ನೀಡುವಲ್ಲಿ ಸರ್ಕಾರ ನಿರ್ಲಕ್ಷ್ಯ ವಹಿಸುತ್ತವೆ ಎಂದು ಆರೋಪಿಸಿದರು.

ತಿ.ನರಸೀಪುರದ ನಳಂದ ಬುದ್ಧವಿಹಾರ ಬೋಧಿರತ್ನ ಬಂತೇಜಿ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡಿ, ತುಳಿತಕ್ಕೊಳಗಾದವರಿಗೆ ಮೇಲೆ ಬರಲು ಆದ್ಯತೆ ನೀಡುವುದು ನಿನ್ನೆ, ಮೊನ್ನೆದಲ್ಲ. ಬುದ್ಧನ ಕಾಲದಿಂದಲೂ ನಡೆದುಕೊಂಡು ಬಂದಿದೆ ಎಂದರು. ಬಿವಿಎಫ್ ಜಿಲ್ಲಾಧ್ಯಕ್ಷ ಚಂದ್ರಕಾಂತ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಬಿಎಸ್‌ಪಿ ಜಿಲ್ಲಾಧ್ಯಕ್ಷ ಎನ್.ನಾಗಯ್ಯ, ರಾಜ್ಯ ಪ್ರಧಾನ ಕಾರ್ಯದರ್ಶಿ ಅರಕಲವಾಡಿ ನಾಗೇಂದ್ರ, ರಾಜ್ಯ ಕಾರ್ಯದರ್ಶಿ ಕಮಲ್, ನಗರಸಭಾ ಸದಸ್ಯರಾದ ಆರ್.ಪಿ.ನಂಜುಂಡಸ್ವಾಮಿ, ಎಂ.ಮಹೇಶ್, ಎಸ್‌ಡಿಪಿಐ ಜಿಲ್ಲಾಧ್ಯಕ್ಷ ಅಬ್ರಾರ್ ಅಹಮದ್, ಎಂ.ರವಿ ಮೌರ್ಯ, ಆಶ್ರಿತ್, ಮಹೇಶ್, ಯೋಗೇಶ್, ನಾಗಮಲ್ಲು, ಸುನೀಲ್, ಜೆ.ಶಿವಕುಮಾರ್, ಅಧ್ಯಕ್ಷರಾದ ಮನೋಜ್, ನಂಜುಂಡಸ್ವಾಮಿ, ಪ್ರಸನ್ನ, ಮನೋಜ್ ಇತರರು ಹಾಜರಿದ್ದರು.

ರಂಗಭೂಮಿಗೆ ತನ್ನದೇ ಆದ ವಿಶೇಷ ಶಕ್ತಿ ಇದೆ

ಜೆಎಸ್‌ಎಸ್ ರಂಗೋತ್ಸವ ಸಮಾರೋಪದಲ್ಲಿ ಡಿಸಿ ಅಭಿಪ್ರಾಯ



ಚಾಮರಾಜನಗರದಲ್ಲಿ ನಡೆದ ಜೆಎಸ್‌ಎಸ್ ರಂಗೋತ್ಸವ ಸಮಾರೋಪ ಸಮಾರಂಭದಲ್ಲಿ ಎಚ್.ಎಸ್. ಮುರಳೀಧರ ಹಾಗೂ ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ ಅವರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ, ಡಿ.4– ಮೋಹನ ದಾಸ ಕರಮಚಂದ ಗಾಂಧಿಯವರು ಮಹಾತ್ಮ ಗಾಂಧಿಯಾಗಲು ರಂಗಭೂಮಿ ಕಾರಣ. ಇದು ರಂಗಭೂಮಿಗಿರುವ ಮಹಾಶಕ್ತಿ ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಹೇಳಿದರು.

ನಗರದ ಜೆಎಸ್‌ಎಸ್ ಬಾಲಿಕಾ ಪ್ರೌಢ ಶಾಲೆ ಆವರಣದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಆಯೋಜಿಸಿದ್ದ ಜೆಎಸ್‌ಎಸ್ ರಂಗೋತ್ಸವ ಸಮಾರೋಪ ಸಮಾ ರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಒಂದೊಂದು ಕಲೆಗೂ ತನ್ನದೇ ಆದ ಶಕ್ತಿಯಿದೆ. ಇದರಲ್ಲಿ ರಂಗಭೂಮಿಗೆ ವಿಶೇಷ ಶಕ್ತಿಯಿದೆ. ಇದಕ್ಕೆ ಉತ್ತಮ ನಿದರ್ಶನವೆಂದರೆ ಮಹಾತ್ಮಗಾಂಧಿಯವರು ಮೋಹನ ದಾಸ ಕರಮಚಂದ ಗಾಂಧಿಯಾಗಿದ್ದರು. ಅವರನ್ನು ಮಹಾತ್ಮಗಾಂಧಿಯನ್ನಾಗಿ ಮಾಡಿದ್ದು ರಂಗಭೂಮಿ ಎಂದು ನಾನು ಭಾವಿಸುತ್ತೇನೆ. ಗಾಂಧಿಯವರು ಸತ್ಯ ಹರಿಶ್ಚಂದ್ರ ನಾಟಕ ನೋಡಿ ಪ್ರಭಾವಿತರಾಗಿ ಅವರ ಜೀವನವನ್ನೇ ಬದಲಿಸಿಕೊಂಡರು. ಅಂತಹ ಶಕ್ತಿ ರಂಗಭೂಮಿಗಿದೆ ಎಂದರು.

ಸತ್ಯಕ್ಕೆ ಬಹಳ ಶಕ್ತಿಯಿದೆ. ನಮ್ಮ ಹೋರಾಟವೆಲ್ಲ ಸತ್ಯದೆಡೆಗೇ ಇರಬೇಕು. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಸತ್ಯವನ್ನು ಅಳವಡಿಸಿಕೊಂಡು ಹೋಗಬೇಕು. ಜೀವನದ ಸತ್ಯಗಳನ್ನು ತೋರಿಸುವ ಮಾಧ್ಯಮ ರಂಗಭೂಮಿ ಎಂದು ಅವರು ಹೇಳಿದರು.

ರಂಗಾಯಣದ ಮಾಜಿ ನಿರ್ದೇಶಕ ಎಚ್. ಜನಾರ್ದನ್ ಮಾತನಾಡಿ, ನಾಟಕ ಎಂದರೆ ಅದು ಬರಿ ನಾಟಕವಲ್ಲ. ಅಲ್ಲಿ ಭಕ್ತಿ, ಮನಸ್ಸು, ಮಾರ್ಗ, ಅರಿವು ಎಲ್ಲ ಇರುತ್ತದೆ. ರಂಗಭೂಮಿ ನಮಗೆ ಕಲಿಸುತ್ತಾ ಇರುತ್ತದೆ. ನಾಟಕ ಎಂದರೆ ನಮ್ಮನ್ನು ಹೊರತುಪಡಿಸಿ, ಇನ್ನೊಂದು ಪಾತ್ರವನ್ನು ಅಭಿನಯಿಸುವ ಕಲೆ. ನಾಟಕ ಸಾಹಿತ್ಯ, ವಿಜ್ಞಾನ, ಸಂಸ್ಕೃತಿ ಎಲ್ಲವನ್ನೂ ಒಳಗೊಂಡಿರುತ್ತದೆ ಎಂದರು.

ಜೆಎಸ್‌ಎಸ್ ಸಂಸ್ಥೆ ನಾಟಕ ಕಲೆಯನ್ನು ಪೋಷಿಸುತ್ತಿದೆ. ಇಲ್ಲಿ ಆರು ಮಂದಿ ರಂಗ ಶಿಕ್ಷಕರಿರುವುದು ಇದಕ್ಕೆ ಉತ್ತಮ ಉದಾಹರಣೆ. ನಾಟಕದ ಮೂಲಕ ಬೇರೆ ಬೇರೆ ವಿಷಯಗಳನ್ನು ಕಲಿಸಬಹುದಾಗಿದೆ. ಸುತ್ತೂರು ಮಠ ಶರಣ ಸಂಸ್ಕೃತಿಯನ್ನು ನಾಡಿಗೆ ಪರಿಚಯಿಸುತ್ತಾ, ಸಾಂಸ್ಕೃತಿಕ ಲೋಕವನ್ನು ಬೆಳೆಸುತ್ತಿದೆ ಎಂದು ಶ್ಲಾಘಿಸಿದರು.

ಸಾನ್ನಿಧ್ಯ ವಹಿಸಿದ್ದ ಸುತ್ತೂರು ವೀರಸಿಂಹಾಸನ ಮಠಾಧ್ಯಕ್ಷರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಕಾವ್ಯೇಷು ನಾಟಕಂ ರಮ್ಯಂ, ಕಾವ್ಯಗಳಲ್ಲಿ ಅತ್ಯಂತ ರಮಣೀಯವಾದುದು ನಾಟಕ. ನಾಟಕವು ಕಲೆ, ನಟನೆ, ಸಂಗೀತ ಎಲ್ಲವನ್ನೂ ಒಳಗೊಂಡಿರುತ್ತದೆ. ನಾಟಕ ಕಲೆಯಲ್ಲಿ ತೊಡಗಿಸಿಕೊಂಡಿರುವ ವ್ಯಕ್ತಿಯು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ ಎಂದರು.

ವರನಟ ಡಾ. ರಾಜ್‌ಕುಮಾರ್ ಅವರು ಸಿನಿಮಾ ಕ್ಷೇತ್ರಕ್ಕೆ ಬಂದದ್ದೇ ರಂಗನಟರಾಗಿದ್ದರಿಂದ. ನಾಟಕದಲ್ಲಿ ಉತ್ತಮ ಕಲಾವಿದರಾಗಿದ್ದರಿಂದ ಅವರನ್ನು ಸಿನಿಮಾಕ್ಕೆ ಆಯ್ಕೆ ಮಾಡಲಾಯಿತು ಎಂದರು.

ವಿದ್ಯಾರ್ಥಿಗಳಲ್ಲಿ ರಂಗ ಕಲೆಯ ಬಗ್ಗೆ ಆಸಕ್ತಿ ಮೂಡಿಸುವ ಸಲುವಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ರಂಗೋತ್ಸವವನ್ನು ನಡೆಸಿಕೊಂಡು ಬರಲಾಗುತ್ತಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಎಚ್.ಎಸ್. ಮುರಳೀಧರ ಅವರಿಗೆ ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ ಹಾಗೂ ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ ಅವರಿಗೆ ಮೈಸೂರು ಕದಳಿ ವೇದಿಕೆಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಹವೆ ಮಠಾಧೀಶರಾದ ಶ್ರೀ ಸರ್ಪಭೂಷಣ ಸ್ವಾಮೀಜಿ ಉಪಸ್ಥಿತರಿದ್ದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿವಿಯಿಂದ ದಿವ್ಯಾಂಗ ಸಮಾನತೆ, ಸಂರಕ್ಷಣೆ, ಸಶಕ್ತೀಕರಣ



ಮೈಸೂರು, ಡಿ.4(ಎಸ್‌ಪಿಎನ್)– ದಿವ್ಯಾಂಗರ ಮೇಲೆ ದೌರ್ಜನ್ಯ ಎಸಗಿದರೆ 6 ತಿಂಗಳಿಂದ 6 ವರ್ಷದವರೆಗೆ ಶಿಕ್ಷೆ ವಿಧಿಸಲು ನಮ್ಮ ಸಂವಿಧಾನದಲ್ಲಿ ಅವಕಾಶವಿದೆ ಎಂದು ಮಾಜಿ ಶಾಸಕ ವಾಸು ಅಭಿಪ್ರಾಯಪಟ್ಟರು.

ಮೈಸೂರು ಯಾದವಗಿರಿಯ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಮೈಸೂರು ಉಪವಲಯದ ವತಿಯಿಂದ ಜ್ಞಾನಪ್ರಕಾಶ ಭವನದಲ್ಲಿ ಏರ್ಪಡಿಸಿದ್ದ 'ದಿವ್ಯಾಂಗ ಸಮಾನತೆ, ಸಂರಕ್ಷಣೆ ಹಾಗೂ ಸಶಕ್ತೀಕರಣ' ಕುರಿತು ಕರ್ನಾಟಕ ರಾಜ್ಯ ಸೇವಾ ಅಭಿಯಾನವನ್ನು ಉದ್ಘಾಟಿಸಿ ಅವರು, ಮಾತನಾಡಿದರು.

ಅಂಗವಿಕಲರಿಗೆ ಅನುಕಂಪಕ್ಕಿಂತ ಅವರ ಸಾಧನಾ ಕ್ಷೇತ್ರದಲ್ಲಿ ಪ್ರೋತ್ಸಾಹ ಮುಖ್ಯ ಏಕೆಂದರೆ ಅಂಗವಿಕಲರು ನಮಗಿಂತ ಬುದ್ಧಿವಂತರು, ಅವರು ಎಲ್ಲ ವಿಷಯವನ್ನು ಮೊದಲೇ ಖಚಿತಪಡಿಸಿಕೊಂಡು ಮುಂದಿನ ಹೆಜ್ಜೆ ಇಡುತ್ತಾರೆ. ಆದರೆ, ಪಂಚೇಂದ್ರಿಯಗಳು ಚೆನ್ನಾಗಿರುವ ನಾವು ನಿತ್ಯ ಜೀವನದಲ್ಲಿ ತಡಬಡಾಯಿಸುತ್ತೇವೆ ಎಂದರು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳಲ್ಲಿ ದಿವ್ಯಾಂಗ ಸಮಾನತೆ, ಸಂರಕ್ಷಣೆ ಹಾಗೂ ಸಶಕ್ತೀಕರಣ ಕುರಿತು ಅಂಗವಿಕಲರಲ್ಲಿ ಸೇವಾ ಅಭಿಯಾನಕ್ಕೆ ಚಾಲನೆ ನೀಡಿರುವುದು ಉತ್ತಮ ಬೆಳವಣಿಗೆ ಎಂದರು.

ಈಶ್ವರೀಯ ವಿವಿಯು ಅಂಗವಿಕಲರ ಬಗ್ಗೆ ವಿಶೇಷ ಆಸಕ್ತಿವಹಿಸಿ, ಅವರಿಗೆ ಈ ಕಾರ್ಯಕ್ರಮದಲ್ಲಿ ಅಂಗವಿಕಲರು ಮತ್ತು ಪೋಷಕರಿಗೂ ಬೇರೆ ಆಟಗಳ ಪರಿಚಯಿಸಿ, ಅವರನ್ನು ಸಂತೋಷಗೊಳಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಅಂಗವಿಕಲರಿಗೆ ಅನುಕಂಪಗಿಂತ, ಅವರು ಸಾಧಿಸುವ ಕ್ಷೇತ್ರದಲ್ಲಿ ಪ್ರೋತ್ಸಾಹಿಸುವ ಸಿಗುವಂತೆ ನೋಡಿಕೊಳ್ಳುವುದು ನಮ್ಮ–ನಿಮ್ಮೆಲ್ಲರ ಜವಾಬ್ದಾರಿ ಎಂದರಲ್ಲದೆ, ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ನೈಜ ಫಲಾನುಭವಿಗಳಿಗೆ ಸಿಗುವಂತೆ ನೋಡಿಕೊಳ್ಳುವುದು ಸಂಘ–ಸಂಸ್ಥೆಗಳ ಆದ್ಯ ಕರ್ತವ್ಯವಾಗಬೇಕು ಎಂದರು.

ವಿಕಲ ಚೇತನರ ಕುರಿತು ಪಿಹೆಚ್‌ಡಿ ಪಡೆದಿರುವ ಡಾ.ಶೋಭ ಮಾತನಾಡಿ, ವಿಕಲ ಚೇತನರ ಶೈಕ್ಷಣಿಕ ಏಳಿಗೆಗೆ 14 ತರಬೇತಿ ಕೋರ್ಸ್‌ಗಳನ್ನು ಆರಂಭಿಸಿ, ಓದು, ಬರವಣಿಗೆ ವಿಶೇಷ ಆಸಕ್ತಿವಹಿಸಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ತರಬೇತಿ ನೀಡಿ, ಸಜ್ಜುಗೊಳಿಸಲಾಗುತ್ತಿದೆ ಎಂದರು.

ಈ ವೇಳೆ ಈಶ್ವರೀಯ ವಿವಿ ದಿವ್ಯಾಂಗ ಸೇವಾ ವಿಭಾಗದ ಬಿ.ಕೆ.ಸೂರ್ಯಮಣಿ ಭಾಯಿಜೀ, ಪಂಚಾಯತ್ ರಾಜ್ ಕಾರ್ಯಪಾಲಕ ಇಂಜಿನಿಯರ್ ಆರ್.ರಮೇಶ್, ಮೈಸೂರು ಅಂಧ ಮಕ್ಕಳ ಸರ್ಕಾರಿ ಶಾಲೆ ಅಧೀಕ್ಷಕ ಸತೀಶ್ ಗೌಡ, ಹಿರಿಯ ರಾಜಯೋಗ ಶಿಕ್ಷಕಿ ಬಿ.ಕೆ.ವಾಣಿಜೀ, ಈಶ್ವರೀಯ ವಿವಿಯಮುಖ್ಯಸಂಚಾಲಕಿ, ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ, ಬಿ.ಕೆ.ರಂಗನಾಥ್, ಡಾ.ಶಿಲ್ಪಕ್ಕ ಉಪಸ್ಥಿತರಿದ್ದರು.

ಭಾರತದ ವಿರುದ್ಧ ಬಾಂಗ್ಲಾಗೆ ರೋಚಕ ಜಯ



ಮೀರ್‌ಪುರ್, ಡಿ.4– ತಂಡದ ಸಾಂಘಿಕ ಪ್ರದರ್ಶನದ ನೆರವಿನಿಂದ ಬಾಂಗ್ಲಾದೇಶ ಭಾರತದ ವಿರುದ್ಧ 1 ವಿಕೆಟ್‌ಗಳ ರೋಚಕ ಜಯ ಸಾಧಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 41.2 ಓವರ್‌ಗಳಲ್ಲಿ 186 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಏಕಾಂಗಿ ಹೋರಾಟ ನಡೆಸಿದ ಕನ್ನಡಿಗ ಕೆ.ಎಲ್.ರಾಹುಲ್ 5 ಬೌಂಡರಿ, 4 ಸಿಕ್ಸರ್ ಒಳಗೊಂಡ 73ರನ್ ಗಳಿಸಿದರೇ, ಶ್ರೇಯಸ್ ಅಯ್ಯರ್ 24, ರೋಹಿತ್ ಶರ್ಮಾ 27, ವಾಷಿಂಗ್‌ಟನ್ ಸುಂದರ್ 19 ರನ್ ಗಳಿಸಿದರು. ಬಾಂಗ್ಲಾ ಪರ ಇಬಾದೀತ್ ಹುಸೇನ್ 4, ಶಕೀಬ್ ಅಲ್ ಹಸನ್ 5, ಮೆಹದಿ ಹಸನ್ ಮಿರಾಜ್ 1 ವಿಕೆಟ್ ಪಡೆದರು.

ಭಾರತ ನೀಡಿದ 187ರನ್‌ಗಳ ಸಾಧಾರಣ ಗೆಲುವಿನ ಗುರಿ ಬೆನ್ನತ್ತಿದ ಬಾಂಗ್ಲಾದೇಶ 46 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ ಗುರಿ ತಲುಪಿತು. ತಂಡದ ಪರ ಲಿಟನ್ ದಾಸ್ 41, ಅನಾಮುಲ್ ಹಕ್ 14, ಶಕೀಬ್ ಅಲ್ ಹಸನ್ 29, ಮುಷ್ಫಿಕರ್ ರಹೀಮ್ 18, ಮೆಹೇದಿ ಹಸನ್ ಮಿರಾಜ್ ಅಜೇಯ 38 ರನ್ ಬಾರಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು. ಭಾರತದ ಪರ ಮೊಹಮ್ಮದ್ ಸಿರಾಜ್ 3, ಕುಲದೀಪ್ ಸೇನ್ ಮತ್ತು ವಾಷಿಂಗ್ಟನ್ ಸುಂದರ್ ತಲಾ 2, ದೀಪಕ್ ಚಹಾರ್ ಮತ್ತು ಶಾರ್ದೂಲ್ ಠಾಕೂರ್ ತಲಾ 1 ವಿಕೆಟ್ ಪಡೆದರು. ಮೆಹೇದಿ ಹಸನ್ ಮಿರಾಜ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಇಂದು ಪ್ರವಚನಕಾರ ನಾಗಸಂಪಿಗೆ ಅವರಿಗೆ ಅಭಿನಂದನೆ

ಮೈಸೂರು, ಡಿ.4–ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಗೀತಾ ಜಯಂತಿ ಮತ್ತು ಹೆಸರಾಂತ ಪ್ರವಚನಕಾರರಾದ ಪಂ.ರಘೋತ್ತಮಾಚಾರ್ಯ ನಾಗಸಂಪಿಗೆ ಅವರಿಗೆ ಅಭಿನಂದನಾ ಸಮಾರಂಭವನ್ನು ನಾಳೆ(ಡಿ.5) ಸಂಜೆ 6.30 ಗಂಟೆಗೆ ನಗರದ ಅಗ್ರಹಾರದಲ್ಲಿರುವ ಶ್ರೀ ಉತ್ತರಾದಿ ಮಠದ ಆವರಣದಲ್ಲಿ ಏರ್ಪಡಿಸಲಾಗಿದೆ ಎಂದು ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್ ತಿಳಿಸಿದ್ದಾರೆ.

ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉತ್ತರಾದಿ ಮಠದ ಆಡಳಿತಾಧಿಕಾರಿ ಪಂಡಿತ್ ಅನಿರುದ್ಧ ಆಚಾರ್ಯ ಪಾಂಡುರಂಗಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕ ಕೆ.ರಘುರಾಮ ವಾಜಪೇಯಿ, ಬ್ರಾಹ್ಮಣ ಅಭಿವೃದ್ಧಿ ರಾಜ್ಯ ನಿರ್ದೇಶಕ ಎಂ.ಆರ್.ಬಾಲಕೃಷ್ಣ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಅವರು ಹೇಳಿದ್ದಾರೆ.

ಇಂದು ಹನುಮ ಜಯಂತಿ

ಮೈಸೂರು, ಡಿ.4–ಮೈಸೂರಿನ ಮಾದಗಳ್ಳಿ ಗ್ರಾಮದ ಕಲ್ಯಾಣಿನಗರದಲ್ಲಿ ಶ್ರೀಮುತ್ತುರಾಯ ಸೇವಾ ಟ್ರಸ್ಟ್ ವತಿಯಿಂದ ನಾಳೆ(ಡಿ.5) ಹನುಮ ಜಯಂತಿ ಕಾರ್ಯಕ್ರಮ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 5.10 ರಿಂದ ಅಭಿಷೇಕ, ಅಗ್ನಿಹೋತ್ರ, ಗಣ ಹೋಮ ಹಾಗೂ ಪವಮಾನ ಹೋಮ ಸೇರಿದಂತೆ ಪೂಜಾ ಕೈಂಕರ್ಯಗಳು ಜರುಗಲಿದ್ದು, ಬೆಳಗ್ಗೆ 10 ರಿಂದ 4 ಗಂಟೆ ವರೆಗೂ ಉಚಿತ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಹಾಗೂ ಉಚಿತ ಕಣ್ಣಿನ ತಪಾಸಣೆ ಏರ್ಪಡಿಸಲಾಗಿದೆ.

ಎಸ್‌ಸಿ, ಎಸ್‌ಟಿ ಉದ್ಯೋಗಿಗಳ ಕ್ಷೇಮಾಭಿವೃದ್ಧಿ ಸಂಘಕ್ಕೆ ಆಯ್ಕೆ

ಮೈಸೂರು, ಡಿ.3–ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಉದ್ಯೋಗಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾಗಿ ಎಂ.ಮಹದೇವಮೂರ್ತಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಡಾ. ವೀರಸಿಂಗ್ ತಂಪೂ, ಕಾರ್ಯದರ್ಶಿ ಕೃಷ್ಣನಾಯಕ್ ಜಿ., ಜಂಟಿ ಕಾರ್ಯದರ್ಶಿಯಾಗಿ ಕುಮಾರ್ ಕೆ., ಖಜಾಂಚಿಯಾಗಿ ಶ್ರೀಮತಿ ಶಾಂತಿ ಗ್ರೇಸ್ ಆಯ್ಕೆಗೊಂಡಿದ್ದಾರೆ.

ಕಾರ್ಯನಿರ್ವಾಹಕ ಮಂಡಳಿ ಸದಸ್ಯರಾಗಿ ಡಾ. ಸುಜಾತ ಬಿ.ಹಂಚಿನೆಲ್ಕರ್, ಡಾ. ಸಂತೋಷ್ ಕುಮಾರ್, ಶ್ರೀಮತಿ ಚುಹೇನ್ ಮಿಂಜ್ (ಸ್ವಾತಿ) ಗಿರೀಶ್ ಸಿ., ಸಿದ್ದರಾಜು ಬಿ.ಎಂ. ಆಯ್ಕೆಯಾಗಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ ಸೋಮವಾರ 5 ಡಿಸೆಂಬರ್ 2022

ಮೂರನೇ ಪುಟದಿಂದ

ಇಂದು ಎರಡನೇ ಹಂತದ ಮತದಾನ

ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಬಿಜೆಪಿ ಮತ್ತು ಅರವಿಂದ್ ಕೇಜ್ರಿವಾಲ್ ಅವರ ಆಮ್ ಆದ್ಮಿ ಪಕ್ಷ ಎಲ್ಲ 91 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಕಾಂಗ್ರೆಸ್ 90 ಕ್ಷೇತ್ರಗಳಲ್ಲಿ ಕಣದಲ್ಲಿದ್ದರೆ, ಅದರ ಮಿತ್ರ ಪಕ್ಷ ಎನ್‌ಸಿಪಿ 2 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಅಹಮದಾಬಾದ್, ವಡೋದರ, ಗಾಂಧಿನಗರ ಮತ್ತು ಇತರ ಜಿಲ್ಲೆಗಳಲ್ಲಿ ಬಿರುಸಿನ ಸ್ಪರ್ಧೆಯಿದೆ. ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ವಿರಂಗಮದಿಂದ ಕಣದಲ್ಲಿದ್ದಾರೆ. ಹಾರ್ದಿಕ್ ಪಟೇಲ್, ಅಲ್ಪೇಶ್ ಠಾಕೂರ್ , ಜಿಗ್ನೇಶ್ ಮೇವಾನಿ, ವಿಧಾನ ಸಭೆಯಲ್ಲಿ ವಿಪಕ್ಷ ನಾಯಕ ಸುಖ್‌ರಾಂ ರಥ್ವ ಸ್ಪರ್ಧೆಯಲ್ಲಿರುವ ಪ್ರಮುಖರು. ಎರಡನೇ ಹಂತದಲ್ಲಿ 2.51 ಕೋಟಿ ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಅದರಲ್ಲಿ 1.29 ಕೋಟಿ ಪುರುಷರು ಮತ್ತು 1.22 ಕೋಟಿ ಮಹಿಳಾ ಮತದಾರರು. 14,975 ಮತದಾನ ಕೇಂದ್ರಗಳಲ್ಲಿ ಮತದಾನ ನಡೆಯಲಿದೆ. ಎಲ್ಲಾ ಸಿದ್ಧತೆ ಕೈಗೊಳ್ಳಲಾಗಿದೆ.

5 ತಿಂಗಳು ಬಳಿಕ ತಾಯಿ ಆಶೀರ್ವಾದ ಪಡೆದ ಮೋದಿ

ಗಾಂಧಿನಗರ: ಭಾರೀ ಕುತೂಹಲಕ್ಕೆ ಕಾರಣವಾಗಿರುವ ಗುಜರಾತ್ ಅಸೆಂಬ್ಲಿ ಚುನಾವಣೆಯಲ್ಲಿ ಬ್ಯುಸಿಯಾಗಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಬರೋಬ್ಬರಿ



ಐದು ತಿಂಗಳು ಬಳಿಕ ಗಾಂಧಿನಗರದಲ್ಲಿರುವ ನಿವಾಸಕ್ಕೆ ಆಗಮಿಸಿ ತಾಯಿ ಹೀರಾಬೆನ್ ಮೋದಿ ಅವರ ಕಾಲು ಮುಟ್ಟಿ ಆಶೀರ್ವಾದ ಪಡೆದುಕೊಂಡರು. ಬಳಿಕ ಟೀ ಸೇವಿಸುತ್ತ ತಾಯಿ ಜೊತೆ ಕುಳಿತು ಸಮಲೋಚನೆ ನಡೆಸಿದರು. ನರೇಂದ್ರ ಮೋದಿ ಅವರು ಕಳೆದ ಜೂನ್ 18ರಂದು ತಾಯಿ ಹೀರಾಬೆನ್ ಅವರಿಗೆ 100ನೇ ಹುಟ್ಟುಹಬ್ಬದ ಶುಭಾಶಯ ತಿಳಿಸಲು ಗಾಂಧಿನಗರ ನಿವಾಸಕ್ಕೆ ಭೇಟಿ ನೀಡಿದ್ದರು. ಅಂದು ತಾಯಿಯ ಪಾದಪೂಜೆ ಮಾಡಿ ಸಿಹಿ ತಿನಿಸಿ, ಜನ್ಮದಿನದ ಶುಭಾಶಯ ಕೋರಿದ್ದರು. ಅದಾದ 5 ತಿಂಗಳು ಬಳಿಕ ಮೋದಿ ತಾಯಿಯನ್ನು ಭೇಟಿ ಮಾಡಿದ್ದಾರೆ.

ಹೆರಾಯಿನ್ ಸಹಿತ ಡ್ರೋಣ್ ವಶ

ತರ್ನ್ ತರನ್ ಪೊಲೀಸರು ಮತ್ತು ಬಿಎಸ್‌ಎಫ್ ಜಂಟಿ ಕಾರ್ಯಾಚರಣೆಯಲ್ಲಿ ಪಿಎಸ್ ವಾಲ್ತೋಹಾ ಪ್ರದೇಶದಲ್ಲಿ ಶೋಧ ನಡೆಸಿದಾಗ 3 ಕೆಜಿ ಹೆರಾಯಿನ್ ಹೊಂದಿರುವ ಕ್ವಾಡ್ಕಾಪ್ಟರ್ ಡ್ರೋನ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮಹಾ ನಿರ್ದೇಶಕ ಗೌರವ್ ಯಾದವ್ ಟ್ವೀಟ್ ಮಾಡಿದ್ದಾರೆ. ಗಡಿ ಭದ್ರತಾ ಪಡೆ ಸುಮಾರು 25 ಕೆಜಿ ಹೆರಾಯಿನ್ ವಶಪಡಿಸಿಕೊಂಡ ಒಂದು ದಿನದ ನಂತರ ಈ ಘಟನೆ ನಡೆದಿದೆ. ಗುರುವಾರ ಮತ್ತು ಶುಕ್ರವಾರದ ಮಧ್ಯರಾತ್ರಿ, ತರ್ನ್ ತರನ್ ಜಿಲ್ಲೆಯ ಭಾರತ–ಪಾಕಿಸ್ತಾನ ಗಡಿ ಬಳಿಯ ಹೊಲದಲ್ಲಿ 5 ಕೆಜಿ ಹೆರಾಯಿನ್ ನೊಂದಿಗೆ ಡ್ರೋನ್ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಮೃತಸರ ಮತ್ತು ತರ್ನ್ ತರನ್ ಭಾರತ–ಪಾಕಿಸ್ತಾನ ಗಡಿಯಲ್ಲಿ ಸೋಮವಾರ ಸುಮಾರು 10 ಕೆ.ಜಿ ಹೆರಾಯಿನ್ ಸಾಗಿಸುತ್ತಿದ್ದ ಪಾಕಿಸ್ತಾನದ ಎರಡು ಡ್ರೋನ್‌ಗಳನ್ನು ಬಿಎಸ್‌ಎಫ್ ಹೊಡೆದುರುಳಿಸಿದೆ.

ಸಹೋದ್ಯೋಗಿಗಳಿಗೆ ದಾರಿ ಮಾಡಿಕೊಡಿ

ಪದಾಧಿಕಾರಿಗಳಿಗೆ ಕಟ್ಟುನಿಟ್ಟಿನ ಸಂದೇಶ ನೀಡಿರುವ ಖರ್ಗೆ, ಪಕ್ಷದಲ್ಲಿ ಅತ್ಯಂತ ಜವಾಬ್ದಾರಿಯುತ ವ್ಯಕ್ತಿಗಳು ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದರೆ, ಕೆಲವರು ಕಡಿಮೆ ಜವಾಬ್ದಾರಿ ಎಂದು ನಿರ್ಲಕ್ಷ್ಯಿಸುತ್ತಿದ್ದಾರೆ. ಇದು ಸರಿಯೂ ಅಲ್ಲ, ಸ್ವೀಕಾರಾರ್ಹವೂ ಅಲ್ಲ. ತಮ್ಮ ಜವಾಬ್ದಾರಿಯನ್ನು ನಿಭಾಯಿಸಲು ಸಾಧ್ಯವಾಗದವರು, ಅವರು ತಮ್ಮ ಸಹೋದ್ಯೋಗಿಗಳಿಗೆ ದಾರಿ ಮಾಡಿಕೊಡಬೇಕು ಎಂದರು. ಪಕ್ಷದ ಮಾಜಿ ಮುಖ್ಯಸ್ಥೆ ಸೋನಿಯಾ ಗಾಂಧಿ, ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್, ಛತ್ತೀಸ್ಗಢ ಮುಖ್ಯಮಂತ್ರಿ ಭೂಪೇಶ್ ಬಘೇಲಾ, ಹಿರಿಯ ನಾಯಕರಾದ ಪಿ ಚಿದಂಬರಂ, ಆನಂದ್ ಶರ್ಮಾ, ಮೀರಾ ಕುಮಾರ್ ಮತ್ತು ಅಂಬಿಕಾ ಸೋನಿ ಸಭೆಯಲ್ಲಿ ಭಾಗವಹಿಸಿದ್ದರು. ಅಕ್ಟೋಬರ್‌ನಲ್ಲಿ ಖರ್ಗೆ ಅಧಿಕಾರ ವಹಿಸಿಕೊಂಡ ನಂತರ ಪಕ್ಷದ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಸಂಸ್ಥೆಯಾದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಬದಲಿಗೆ ಸ್ಟೀರಿಂಗ್ ಸಮಿತಿಯನ್ನು ರಚಿಸಿದರು.

ಸರ್ಕಾರದ ಆದಾಯ ಹೆಚ್ಚಳ

16,32,727 ಆಸ್ತಿ ಪತ್ರಗಳು ನೋಂದಣಿಯಾಗಿವೆ. ಅದೇ ಕಳೆದ ವರ್ಷ ಇದೇ ಅವಧಿಗೆ 12,50,835 ಆಸ್ತಿ ಪತ್ರಗಳು ನೋಂದಣಿಯಾಗಿತ್ತು ಎಂದು ಕಂದಾಯ ಇಲಾಖೆ ಮಾಹಿತಿ ನೀಡಿದೆ. **ಆಸ್ತಿ ನೋಂದಣಿ ದುಪ್ಪಟ್ಟು:** ಹಿಂದಿನ ಅವಧಿಗೆ ಹೋಲಿಸಿದರೆ ಈ ಬಾರಿ ನವೆಂಬರ್‌ವರೆಗೆ 3,81,892 ಕ್ಕಿಂತ ಹೆಚ್ಚು ಆಸ್ತಿ ಪತ್ರಗಳು ನೋಂದಣಿ ಆಗಿವೆ. ಮುಂದ್ರಾಂಕ ಹಾಗೂ ನೋಂದಣಿ ಶುಲ್ಕದ ಮೂಲಕ ನವೆಂಬರ್‌ವರೆಗೆ ಸುಮಾರು 10,850 ಕೋಟಿ ರೂ. ಸಂಗ್ರಹವಾಗಿದೆ. ಗುರಿ ಮೀರಿ ಆದಾಯ ಸಂಗ್ರಹಿಸಲಾಗಿದೆ.

ರಿಯಾಯಿತಿ: ಮಾರ್ಗಸೂಚಿ ದರದ ಮೇಲೆ 10% ರಿಯಾಯಿತಿ ಆಸ್ತಿ ನೋಂದಣಿ ಪ್ರಮಾಣ ಹೆಚ್ಚಾಗಲು ಕಾರಣವಾಗಿದೆ. ಇತ್ತ ರಿಯಲ್ ಎಸ್ಟೇಟ್ ಚಟುವಟಿಕೆ ಮತ್ತೆ ಪುಟಿದೇಳುತ್ತಿರುವುದು ಈ ಅಂಕಿ ಅಂಶದಿಂದ ಗೊತ್ತಾಗುತ್ತಿದೆ. ಸರ್ಕಾರ ಜುಲೈವರೆಗೆ ಮಾರ್ಗಸೂಚಿ ದರದ ಮೇಲೆ 10% ರಿಯಾಯಿತಿ ನೀಡುತ್ತಿತ್ತು. ಜತೆಗೆ 45 ಲಕ್ಷ ರೂ ವರೆಗಿನ ಫ್ಲಾಟ್‌ಗಳಿಗೆ ಮುದ್ರಾಂಕ ಶುಲ್ಕವನ್ನು 5%ದಿಂದ 3%ಗೆ ಇಳಿಕೆ ಮಾಡಿತ್ತು.

ಚಿರತೆ ಸೆರೆಗೆ ತೀವ್ರ ಶೋಧ

13 ತಂಡದಿಂದ ಕಾರ್ಯಾಚರಣೆ: ಚಿರತೆ ಸೆರೆಗೆ ಇಳಿದಿರುವ ಅರಣ್ಯ ಇಲಾಖೆ 23 ಗ್ರಾಮ ಪಂಚಾಯಿತಿಯ 43 ಹಳ್ಳಿಗಳನ್ನು ಗುರುತಿಸಿದ್ದು, ಅದರಲ್ಲಿ 20 ಗ್ರಾಮಗಳಲ್ಲಿ ಚಿರತೆ ಸೆರೆಗೆ ಕಾರ್ಯಾಚರಣೆಗೆ ಇಳಿಯಲಾಗಿದೆ. ಅದಕ್ಕಾಗಿ ಒಬ್ಬರು ಸಿಎಫ್, ಇಬ್ಬರು ಡಿಸಿಎಫ್ ನೇತೃತ್ವದಲ್ಲಿ 15 ಮಂದಿ ಎಸಿಎಫ್ ಮತ್ತು ಆರ್‌ಎಫ್‌ಗಳು ಕಾರ್ಯಾಚರಣೆಗೆ ಇಳಿದಿದ್ದಾರೆ. ಪ್ರತಿ ತಂಡದಲ್ಲಿ ಆರ್‌ಎಫ್ಒ, ಶಾರ್ಪ್ ಶೂಟರ್ ಮತ್ತು ಇಲಾಖೆ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ.

16 ಬೋನ್, 20 ಕ್ಯಾಮೆರಾ ಟ್ರ್ಯಾಪ್: ಕಣ್ಣಿಗೆ ಬೀಳದೆ ನಾಪತ್ತೆಯಾಗಿರುವ ಚಾಲಾಕಿ ಚಿರತೆ ಸೆರೆಗೆ ಮತ್ತೊಂದು ಮಾರ್ಗ ಕಂಡುಕೊಂಡಿರುವ ಇಲಾಖೆ ಚಿರತೆ ಓಡಾಡುತ್ತಿರುವ ಆಯ್ದ 16 ಸ್ಥಳಗಳಲ್ಲಿ ಬೋನ್ ಇರಿಸಿದ್ದರೆ, 20 ಸ್ಥಳಗಳಲ್ಲಿ ಕ್ಯಾಮೆರಾ ಟ್ರ್ಯಾಪ್ ಅಳವಡಿಸಿದೆ. ಒಂದು ವೇಳೆ ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಚಿರತೆ ಚಲನವಲನ ಪತ್ತೆಯಾದರೆ ಅದನ್ನು ಸೆರೆ ಹಿಡಿಯಲು ಹೆಚ್ಚು ಸಹಕಾರಿಯಾಗಲಿದೆ.

ಮಲ್ಲಿಕಾರ್ಜುನಬೆಟ್ಟದಲ್ಲಿ ಪತ್ತೆ: ಚಿರತೆ ಮೊದಲು ಬಲಿ ಪಡೆದ ಪ್ರದೇಶದಲ್ಲಿ ಇಲಾಖೆ ಇರಿಸಿದ್ದ ಕ್ಯಾಮೆರಾ ಟ್ರ್ಯಾಪ್‌ನಲ್ಲಿ ಚಿರತೆ ಚಲನವಲನ ಸೆರೆಯಾಗಿದ್ದು, ಅದರ ಹೆಜ್ಜೆ ಗುರುತು ಹಾಗೂ ಎರಡೂ ಘಟನೆಗಳಲ್ಲಿ ಕಂಡುಬಂದ ಹೆಜ್ಜೆ ಗುರುತುಗಳಲ್ಲಿ ಸಾಮ್ಯತೆ ಇರುವುದರಿಂದ ಅದೇ ಚಿರತೆ ಎಂದು ತೀರ್ಮಾನಿಸಲಾಗಿದೆ. ಒಟ್ಟಾರೆ ಚಿರತೆ ಇರುವ ಸ್ಥಳವನ್ನು ಇಲಾಖೆ ಖಾತ್ರಿಪಡಿಸಿಕೊಂಡಿದ್ದು ದಿನಗಳಲ್ಲಿ ಸೆರೆ ಹಿಡಿಯುವ ಸಾಧ್ಯತೆಗಳಿವೆ.

ಇಲಾಖೆಯಿಂದ ಜಾಗೃತಿ: ಚಿರತೆಯೊಂದು ಇಬ್ಬರು ಮಕ್ಕಳನ್ನು ಬಲಿ ಪಡೆದ ಸುದ್ದಿ ಕೇಳುತ್ತಿದ್ದಂತೆ ಜನರು ಭಯಭೀತರಾಗಿದ್ದು ಮನೆಯಿಂದ ಹೊರಗೆ ಬಂದು ಓಡಾಡಲು, ಹೊಲ–ಗದ್ದೆಗಳ ಬಳಿ ತೆರಳಲು ಭಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕಾಗಿ ಇಲಾಖೆಯ 5 ತಂಡ ಚಿರತೆ ಓಡಾಡುತ್ತಿರುವ 43 ಗ್ರಾಮಗಳ ಪ್ರತಿ ಮನೆ ಮನೆಗೆ ಹೋಗಿ 6 ಗಂಟೆಯ ನಂತರ ಮನೆಯಿಂದ ಹೊರಗೆ ಬರದಂತೆ, ಹೊಲ–ಗದ್ದೆಗಳಿಗೆ ಗುಂಪಾಗಿ ಹೋಗುವಂತೆ ಹಾಗೂ ಎಚ್ಚರಿಕೆಯಿಂದ ಇರುವಂತೆ ಜಾಗೃತಿ ಮೂಡಿಸುವಲ್ಲಿ ನಿರತವಾಗಿದೆ. ಎರಡೂ ಘಟನೆಗಳು ಸಾಯಂಕಾಲ 4.30ರಿಂದ 6.30ರ ಆಸುಪಾಸಿನಲ್ಲಿ ನಡೆದಿರುವುದರಿಂದ ಚಿರತೆ ಆ ವೇಳೆಯಲ್ಲಿ ಗ್ರಾಮಗಳತ್ತ ಬರುವ ಅನುಮಾನವಿರುವುದರಿಂದ ಮುನ್ನೆಚ್ಚರಿಕೆ ವಹಿಸಲಾಗಿದೆ. ಹಾಗೆಯೇ ಚಿರತೆಯ ಸುಳಿವು ಇದ್ದಲ್ಲಿ ತಕ್ಷಣ ಇಲಾಖೆಗೆ ಮಾಹಿತಿ ನೀಡುವಂತೆ ತಿಳಿಸಲಾಗಿದೆ. ಅದಕ್ಕಾಗಿ ತಹಸೀಲ್ದಾರ್ ಮತ್ತು ಪಿಡಿಒಗಳ ಸಹಕಾರವನ್ನು ಇಲಾಖೆ ಪಡೆದುಕೊಂಡಿದೆ.

ಹನುಮ ಸಂಕೀರ್ತನಾ ಯಾತ್ರೆ

ಹನುಮಾ ಮಾಲಾಧಾರಿಗಳು, 'ಅಲ್ಲಿ ರಾಮ ಮಂದಿರ, ಇಲ್ಲಿ ಹನುಮ ಮಂದಿರ. ಹನುಮನ ಪಾದದ ಮೇಲಾಣೆ ಮಂದಿರವಲ್ಲಿ ಕಟ್ಟುವೆವು' ಎಂಬ ಘೋಷಣೆಗಳನ್ನು ಕೂಗಿದರು.

ಜಾಮಿಯಾ ಮಸೀದಿಗೆ ನುಗ್ಗಲು ಯತ್ನ: ಜಾಮಿಯಾ ಮಸೀದಿ ಬಳಿ ಸಂಕೀರ್ತನಾ ಯಾತ್ರೆ ಆಗಮಿಸುತ್ತಿದ್ದಂತೆ ಮಲಾಧಾರಿ ಯುವಕನೊಬ್ಬ ಪೊಲೀಸರು ನಿರ್ಮಿಸಿದ್ದ ಬ್ಯಾರಿಕೇಡ್ ಹತ್ತಿ ಮಸೀದಿ ಬಳಿ ತೆರಳಲು ಯತ್ನಿಸಿದ್ದಾನೆ. ಈ ವೇಳೆ ಸ್ಥಳದಲ್ಲಿದ್ದ ಪೊಲೀಸರು ಆತನನ್ನು ತಡೆದು ಹಿಂದಕ್ಕೆ ತಳ್ಳಿದ ಪ್ರಸಂಗ ನಡೆಯಿತು. ರಾಜ್ಯದ ನಾನಾ ಭಾಗಗಳಿಂದ ಹನುಮ ಮಾಲಧಾರಿಗಳು ಪಟ್ಟಣಕ್ಕೆ ಆಗಮಿಸಿ ಹನುಮಮಾಲೆ ವಿಸರ್ಜನೆ ಕಾರ್ಯಕ್ರಮ ಹಮ್ಮಿಕೊಂಡಿರುವುದರಿಂದ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಎಸ್ಪಿ, ಎಎಸ್ಪಿ, 6 ಡಿವೈಎಸ್ಪಿ, 20 ಸಿಪಿಐ, 40 ಪಿಎಸ್ಐ, 70 ಎಎಸ್ಐ, 750 ಮುಖ್ಯ ಪೇದೆ, 5 ಕೆಎಸ್‌ಆರ್‌ಪಿ ತುಕಡಿ, 8 ಡಿಎಆರ್ ಸೇರಿದಂತೆ ಸುಮಾರು 2 ಸಾವಿರ ಪೊಲೀಸರನ್ನು ನಿಯೋಜನೆ ಜೊತೆಗೆ ಡ್ರೋಣ್ ಹಾಗೂ ಮೊಬೈಲ್ ಕಮಾಂಡೊ ಕಣ್ಗಾವಲುಗಳನ್ನು ಇರಿಸಲಾಗಿತ್ತು. ಜೊತೆಗೆ ಜಾಮಿಯಾ ಮಸೀದಿ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಗಾನ ಮಾಧುರ್ಯದಲ್ಲಿ ಯೇಸುಕ್ರಿಸ್ತರ ಗುಣಗಾನ

● ಕ್ರಿಸ್ಮಸ್ ಅಂಗವಾಗಿ ಕರೋಲ್ ಸಿಂಗಿಂಗ್ ಸ್ಪರ್ಧೆ ● 108 ತಂಡಗಳಿಂದ ಗಾಯನ ಪ್ರಸ್ತುತಿ

ಮೈಸೂರು,ಡಿ.4(ಪಿಎಂ)– ಯೇಸು ಕ್ರಿಸ್ತರ ಸ್ಮರಿಸುವ ಸಂಗೀತ ಸುಧೆಯ ರೇಂಕಾರ... ಸಾಲು ಸಾಲು ಗಾನ ಮಾಧುರ್ಯದಲ್ಲಿ ಯೇಸುಕ್ರಿಸ್ತರ ಗುಣಗಾನ... ಜೊತೆಗೆ ಕ್ರಿಸ್ತರ ಜನ್ಮದಿನದ ಸಂಭ್ರಮದ ಕಿರು ನೃತ್ಯ ರೂಪಕ... ಈ ಎಲ್ಲದರ ಸಮ್ಮಿಲನದಲ್ಲಿ ಮೂಡಿಬಂದ ಕರೋಲ್ ಸಿಂಗಿಂಗ್ (ಕ್ರಿಸ್ಮಸ್ ಸಮೂಹ ಗಾಯನ) ಭಕ್ತಿಯ ಪರಾಕಾಷ್ಠೆಗೆ ಸಾಕ್ಷಿಯಾಯಿತು.



ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಕರೋಲ್ ಸಿಂಗಿಂಗ್ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ತಂಡಗಳು ಗಾಯನ ಸಾದರಪಡಿಸಿದವು.

ಮೈಸೂರಿನ ಬನ್ನಿಮಂಟಪದ ಸಂತ ಫಿಲೋಮಿನಾ ಕಾಲೇಜಿನ ಒಳಾಂಗಣ ಕ್ರೀಡಾಂಗಣದಲ್ಲಿ ಕ್ಯಾಥೋಲಿಕ್ ಅಸೋಸಿಯೇಷನ್ ಆಫ್ ಮೈಸೂರ್ ವತಿಯಿಂದ ಕ್ರಿಸ್‌ಮಸ್ ಹಬ್ಬದ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ ಮೈಸೂರು ಧರ್ಮಪ್ರಾಂತ್ಯ (ಕ್ಯಾಥೋಲಿಕ್) ಮಟ್ಟದ ಕರೋಲ್ ಸಿಂಗಿಂಗ್ (ಕ್ರಿಸ್ಮಸ್ ಸಮೂಹ ಗಾಯನ) ಸ್ಪರ್ಧೆಯಲ್ಲಿ ವಿವಿಧ ವಿಭಾಗಗಳ ಒಟ್ಟು 108 ತಂಡಗಳು ತಮ್ಮ ಸರದಿಯಲ್ಲಿ ಸುಮಧುರ ಸಂಗೀತದೊಂದಿಗೆ ಗೀತೆಗಳನ್ನು ಸಾದರಪಡಿಸಿ ಕ್ರಿಸ್ತರ ಸ್ಮರಿಸಿದವು.

ಕ್ಯಾಥೋಲಿಕ್ ಅಸೋಸಿಯೇಷನ್ ಆಫ್ ಮೈಸೂರ್ 2005ರಿಂದ ಕ್ರಿಸ್‌ಮಸ್ ಸಮೂಹ ಗಾಯನ ಸ್ಪರ್ಧೆ ನಡೆಸುತ್ತಾ ಬಂದಿದ್ದು, ಅಂತೆಯೇ ಈ ಬಾರಿ 18ನೇ ವರ್ಷದ ಸಮೂಹ ಗಾಯನ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಿತು. ಬೆಳಗ್ಗೆಯಿಂದ ಸಂಜೆವರೆಗೆ ನಡೆದ ಗಾಯನ ಸ್ಪರ್ಧೆಯಲ್ಲಿ ಮೈಸೂರು ಧರ್ಮಪ್ರಾಂತ್ಯ ವ್ಯಾಪ್ತಿಯ ಮೈಸೂರು, ಮಂಡ್ಯ, ಚಾಮರಾಜನಗರ ಮತ್ತು ಕೊಡಗು ಜಿಲ್ಲೆಗಳಿಂದ ಸ್ಪರ್ಧಿಗಳು ಭಾಗವಹಿಸಿದ್ದರು.

ಶಾಲಾ ವಿಭಾಗ, ಕಾಲೇಜು ವಿಭಾಗ, ಶಾಲಾ–ಕಾಲೇಜು ಸಿಬ್ಬಂದಿ ವರ್ಗದ ವಿಭಾಗ, ಕ್ಯಾಥೋಲಿಕ್ ಹೊರತಾದ ಇನ್ನಿತರ ಕ್ರಿಶ್ಚಿಯನ್ ಪಂಗಡ ಚರ್ಚ್‌ಗಳ ವಿಭಾಗ, ಕ್ಯಾಥೋಲಿಕ್ ಚರ್ಚ್‌ಗಳ ವಿಭಾಗ ಸೇರಿದಂತೆ ಐದು ವಿಭಾಗಗಳಲ್ಲಿ ಸ್ಪರ್ಧೆಗಳು ನಡೆದವು. ಅಲ್ಲದೆ, ಈ ಎಲ್ಲಾ ಐದು ವಿಭಾಗಗಳಲ್ಲೂ ಕನ್ನಡ, ಇಂಗ್ಲಿಷ್ ಮತ್ತು ಇತರ ಪ್ರಾದೇಶಿಕ ಭಾಷೆಗಳು ಎಂಬ ಮೂರು ಪ್ರತ್ಯೇಕ ವಿಭಾಗಗಳೂ ಸೇರಿದಂತೆ ಒಟ್ಟು 15 ವಿಭಾಗಗಳಲ್ಲಿ ಸ್ಪರ್ಧೆ ನಡೆಯಿತು.

ಪ್ರತಿ ತಂಡದಲ್ಲಿ ಕನಿಷ್ಠ 8 ಮಂದಿಯಿಂದ ಗರಿಷ್ಠ 60 ಮಂದಿಯವರೆಗೆ ಇರಲು ಅವಕಾಶ ಕಲ್ಪಿಸಲಾಗಿತ್ತು. ಕ್ರಿಸ್ತರ ಜನ್ಮದಿನ ಕುರಿತಂತೆ ಗಾಯನ ಸಾದರ ಪಡಿಸಲು ಪ್ರತಿ ತಂಡಕ್ಕೆ 6 ನಿಮಿಷ ಕಾಲಾವಕಾಶ ಕಲ್ಪಿಸಲಾಗಿತ್ತು. ಕ್ರಿಸ್ತ ಜಯಂತಿ ಹಾಡುಗಳನ್ನು ಸುಮಧುರವಾಗಿ ಎಲ್ಲಾ ತಂಡಗಳು ಸಾದರಪಡಿಸಿದವು. ಎಲ್ಲಾ ವಿಭಾಗಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನಗಳಿಗೆ ಆಯ್ಕೆ ನಡೆಯಿತು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅಸೋಸಿಯೇಷನ್ ಕಾರ್ಯದರ್ಶಿ ಪ್ರೇಮಾನಂದ್ ಡಿ'ಮೆಲೋ, ಎಲ್ಲಾ 15 ವಿಭಾಗಗಳಲ್ಲೂ ಕ್ರಮವಾಗಿ ಮೂರು ಸ್ಥಾನಗಳಿಗೆ ಆಯ್ಕೆ ನಡೆಯಲಿದ್ದು, ಆಯ್ಕೆಯಾದ ತಂಡಗಳಿಗೆ ಆಕರ್ಷಕ ಟ್ರೋಫಿ ಹಾಗೂ ರೋಲಿಂಗ್ ಶೀಲ್ಡ್ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು.

ಇದಕ್ಕೂ ಮುನ್ನ ಗಾಯನ ಸ್ಪರ್ಧೆಗೆ ಚಾಲನೆ ನೀಡಿದ ಮೈಸೂರು ಬಿಷಪ್ ಡಾ.ಕೆ.ಎ.ವಿಲಿಯಂ ಮಾತನಾಡಿ, ಕ್ಯಾಥೋಲಿಕ್ ಅಸೋಸಿಯೇಷನ್ ಆಫ್ ಮೈಸೂರ್ ಕಳೆದ 17 ವರ್ಷಗಳಿಂದ ಕ್ರಿಸ್ಮಸ್ ವೇಳೆ ಈ ಗಾಯನ ಸ್ಪರ್ಧೆ ಏರ್ಪಡಿಸುತ್ತಿದೆ. ಇದು ಶ್ಲಾಘನೀಯ. ಅಸೋಸಿಯೇಷನ್ 1944ರಲ್ಲಿ ಪ್ರಾರಂಭಗೊಂಡು ಅಂದಿನಿಂದಲೂ ಸೇವಾ ಕಾರ್ಯದಲ್ಲಿ ತೊಡಗಿಸಿಕೊಂಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ವಿಜೇತ ತಂಡಗಳಿಗೆ ಟ್ರೋಫಿಗಳನ್ನು ವಿತರಣೆ ಮಾಡಲಾಯಿತು. ಇದೇ ವೇಳೆ 2022ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಶೇ.90ಕ್ಕೂ ಹೆಚ್ಚು ಅಂಕಗಳೊಂದಿಗೆ ತೇರ್ಗಡೆ ಹೊಂದಿದ ಕ್ಯಾಥೋಲಿಕ್ ಸಮುದಾಯದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಜೊತೆಗೆ ಸಮುದಾಯದ ವಿವಿಧ ಕ್ಷೇತ್ರಗಳ ಸಾಧಕರು ಮತ್ತು ಸಮಾಜ ಸೇವಕರನ್ನು ಸನ್ಮಾನಿಸಲಾಯಿತು.

ಸಂತ ಜೋಸೆಫರ ದೇವಾಲಯದ ಧರ್ಮಗುರು ಫಾ.ಸ್ಟ್ಯಾನಿ ಅಲ್ಮೇಡಾ, ಸಂತ ಫಿಲೋಮಿನಾ ಕಾಲೇಜಿನ ವ್ಯವಸ್ಥಾಪಕರೂ ಆದ ಧರ್ಮಗುರು ರೆ.ಫಾ.ಡಾ. ಬರ್ನಾರ್ಡ್ ಪ್ರಕಾಶ್ ಬಾರ್ನಿಸ್, ಆಲ್ ಇಂಡಿಯಾ ಕ್ಯಾಥೋಲಿಕ್ ಯೂನಿಯನ್ (ಸಿಬಿಸಿಐ) ಕರ್ನಾಟಕ ಘಟಕದ ಕಾರ್ಯದರ್ಶಿ ಆಂಟೋನಿ ವಿಲ್ಸನ್, ಅಸೋಸಿಯೇಷನ್ ಅಧ್ಯಕ್ಷ ಮ್ಯಾಥ್ಯೂ ಬೆಂಜಮಿನ್ ಸುರೇಶ್ ಮತ್ತಿತರರು ಹಾಜರಿದ್ದರು.

> ಮೈಸೂರು ಧರ್ಮಪ್ರಾಂತ್ಯ ದಾನಿಗಳು ಹಾಗೂ ನಮ್ಮ ಅಸೋಸಿಯೇಷನ್‌ನ ಕಾರ್ಯಕಾರಿ ಸಮಿತಿ ನೆರವಿನೊಂದಿಗೆ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಧರ್ಮಪ್ರಾಂತ್ಯದ ವಿವಿಧ ಭಾಗಗಳಿಂದ ಕಳೆದ ವರ್ಷ ಎಲ್ಲಾ ವಿಭಾಗಗಳಿಂದ 95 ತಂಡಗಳು ಪಾಲ್ಗೊಂಡಿದ್ದವು. ಈ ವರ್ಷ ಅತೀ ಹೆಚ್ಚು ತಂಡಗಳು ಭಾಗವಹಿಸಿದ್ದು, 108 ತಂಡಗಳು ಈ ಬಾರಿ ತಮ್ಮ ಗಾಯನ ಸಾದರಪಡಿಸಿವೆ.
> -ಮ್ಯಾಥ್ಯೂ ಬೆಂಜಮಿನ್ ಸುರೇಶ್

ಕಾಣಿಸದ ಸೂಚನಾ ಫಲಕ: ಒಂದೇ ಪಥದಲ್ಲಿ ಮುಖಾಮುಖಿಯಾದ ವಾಹನಗಳು

● ಕಳಸ್ತವಾಡಿ ಸಮೀಪ ಕೂದಲೆಳೆ ಅಂತರದಲ್ಲಿ ತಪ್ಪಿದ ಸರಣಿ ಅಪಘಾತ ● ಮೈಸೂರು–ಬೆಂಗಳೂರು ನಡುವಿನ ದಶಪಥ ರಸ್ತೆಯಲ್ಲಿ ನಡೆದ ಘಟನೆ ● ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ತಿರುವು ಪಡೆಯಲು ಸೂಚನಾ ಫಲಕ ಗಮನಿಸದ ಚಾಲಕರು



> **ಸೂಚನಾ ಫಲಕ ಅಳವಡಿಸಿ**
> ಮೈಸೂರು–ಬೆಂಗಳೂರು ನಡುವೆ ಸಂಚರಿಸುವ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಕಾಮಗಾರಿ ನಡೆಯುತ್ತಿರುವ ಕೆಲ ಸ್ಥಳಗಳಲ್ಲಿ ಅಳವಡಿಸಿರುವ ಸೂಚನಾ ಫಲಕ ಕಾಣಿಸದಂತಾಗಿದೆ. ಮತ್ತೆ ಕೆಲವೆಡೆ ಸೂಚನಾ ಫಲಕದ ಮೇಲೆ ಮಣ್ಣಿನ ಕಲೆ ಇರುವುದರಿಂದ ತಿರುವು ಪಡೆದುಕೊಳ್ಳಬೇಕಾದ ಸ್ಥಳ ಗುರುತಿಸಲು ಸಾಧ್ಯವಾಗುತ್ತಿಲ್ಲ. ಅದರಲ್ಲೂ ರಾತ್ರಿ ವೇಳೆ ವಾಹನ ಸವಾರರಿಗೆ ತೊಂದರೆಯಾಗುತ್ತಿದ್ದು, ದೊಡ್ಡ ಮಟ್ಟದ ಅಪಘಾತ ಸಂಭವಿಸುವ ಮುನ್ನವೇ ಎಚ್ಚೆತ್ತುಕೊಂಡು ಸೂಚನಾ ಫಲಕ ಅಳವಡಿಸುವಂತೆ ವಾಹನ ಸವಾರರು ಹಾಗೂ ಪ್ರಯಾಣಿಕರು ಒತ್ತಾಯಿಸಿದ್ದಾರೆ.

ಮೈಸೂರು,ಡಿ.4(ಎಂಟಿವೈ)– ಮೈಸೂರು–ಬೆಂಗಳೂರು ನಡುವೆ ದಶಪಥ ರಸ್ತೆ ಕಾಮಗಾರಿ ನಡೆಯುತ್ತಿದ್ದು ತಿರುವು ಪಡೆಯಲು ಸೂಚಿಸುವ ಸೂಚನಾ ಫಲಕ ಮಾಸಿರುವ ಹಿನ್ನೆಲೆಯಲ್ಲಿ ಭಾನುವಾರ ಕಳಸ್ತವಾಡಿ ಸಮೀಪ ಸಂಭವಿಸಬಹುದಾಗಿದ್ದ ಸರಣಿ ಅಪಘಾತ ಕೂದಲೆಳೆ ಅಂತರದಲ್ಲಿ ತಪ್ಪಿದ್ದು, ಹಲವು ಪ್ರಯಾಣಿಕರು ನಿಟ್ಟುಸಿರು ಬಿಟ್ಟಿದ್ದಾರೆ.

ದಶಪಥ ಕಾಮಗಾರಿ ಬಿರುಸಾಗಿ ಸಾಗುತ್ತಿದ್ದು, ಕೆಲವೆಡೆ ಎಡಕ್ಕೆ ಕಡ್ಡಾಯವಾಗಿ ಚಲಿಸುವಂತೆ ಸೂಚನಾ ಫಲಕ ಹಾಕಲಾಗಿದ್ದು, ಮಧ್ಯಭಾಗದಲ್ಲಿ ಫ್ಲೈಓವರ್ ಮಾದರಿಯಲ್ಲಿ ರಸ್ತೆ ಕಾಮಗಾರಿ ನಡೆಸಲಾಗುತ್ತಿದೆ. ಸಿದ್ದಲಿಂಗಪುರ, ಕಳಸ್ತವಾಡಿ ಬಳಿ ಕಾಮಗಾರಿ ನಡೆಯುತ್ತಿದೆ. ಭಾನುವಾರ ವಾಹನಗಳ ಸಂಚಾರ ಹೆಚ್ಚಾಗಿತ್ತು. ಈ ವೇಳೆ ಮಧ್ಯಾಹ್ನ 3.30ರಲ್ಲಿ ಬೆಂಗಳೂರಿಂದ ಮೈಸೂರಿನತ್ತ ಬರುತ್ತಿದ್ದ 40ಕ್ಕೂ ಹೆಚ್ಚು ಕಾರುಗಳು, 5 ಬಸ್, 3 ಮಿನಿ ಬಸ್ ಕಳಸ್ತವಾಡಿಗೂ ಮುನ್ನ ಎಡಕ್ಕೆ ತಿರುಗದೇ ನೇರವಾಗಿ ಚಲಿಸಿವೆ.

ಹೊಸ ರಸ್ತೆ ಉತ್ತಮವಾಗಿರುವುದರಿಂದ ವೇಗವಾಗಿ ವಾಹನ ಚಲಾಯಿಸಿದ ವಾಹನ ಸವಾರರು ಅಪಾಯವನ್ನು ಮೈಮೇಲೆ ಎಳೆದುಕೊಂಡಿದ್ದಾರೆ. ಈ ವೇಳೆ ಮೈಸೂರಿಂದ ಬೆಂಗಳೂರಿನತ್ತ ವೇಗವಾಗಿ ತೆರಳುತ್ತಿದ್ದ ಹತ್ತಾರು ವಾಹನಗಳು ಮುಖಾಮುಖಿಯಾಗಿವೆ.

ಮುಖಾಮುಖಿ ಡಿಕ್ಕಿಯಾಗುವುದನ್ನು ತಪ್ಪಿಸಲು ಬೆಂಗಳೂರು ಕಡೆ ಹೋಗುತ್ತಿದ್ದ ಕಾರ್ ಚಾಲಕರು ಹಠಾತ್ ಬ್ರೇಕ್ ಹಿಡಿದ ಪರಿಣಾಮ 6–8 ಕಾರುಗಳು ರಸ್ತೆಗೆ ಅಡ್ಡಾದಿಡ್ಡಿಯಾಗಿ ತಿರುಗಿ ನಿಂತವು. ಕಾರುಗಳು ಬ್ರೇಕ್ ಹಿಡಿದಿದ್ದರಿಂದ ಸ್ಕಿಡ್ ಆಗುತ್ತಿರುವುದನ್ನು ಗಮನಿಸಿದ ಹಿಂಭಾಗ ಬರುತ್ತಿದ್ದ ವಾಹನ ಚಾಲಕರು ವೇಗ ನಿಯಂತ್ರಿಸಿಕೊಂಡ ಹಿನ್ನೆಲೆಯಲ್ಲಿ ಭಾರಿ ಅನಾಹುತ ತಪ್ಪಿದಂತಾಗಿದೆ. ಅಂತಿಮವಾಗಿ ಸೂಚನಾ ಫಲಕ ಗಮನಿಸದೆ ಬಂದಿದ್ದ 50ಕ್ಕೂ ವಾಹನಗಳನ್ನು ಸರ್ವಿಸ್ ರೋಡ್‌ಗೆ ಯುಟರ್ನ್ ತೆಗೆದುಕೊಂಡು ವಾಪಸ್ಸು ಹೋಗಿ ಕೆಳಸೇತುವೆ ದಾಟಿ ಎಡ ಭಾಗ ಪಥದಲ್ಲಿ ಸಂಚರಿಸುವಂತೆ ಅನುವು ಮಾಡಿಕೊಡಲಾಯಿತು.



ಮೈಸೂರು ವಕೀಲರ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವ ಅಂಗವಾಗಿ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ವಕೀಲ ಪಡುವಾರ ಹಳ್ಳಿಯ ಎಂ.ರಾಮಕೃಷ್ಣ ಅವರನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಎಂ. ಎಲ್.ರಘುನಾಥ್, ಮೇಯರ್ ಶಿವಕುಮಾರ್ ಸನ್ಮಾನಿಸಿದರು. ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ. ಮಹದೇವಸ್ವಾಮಿ, ಕಾರ್ಯದರ್ಶಿ ಉಮೇಶ್, ಕರ್ನಾಟಕ ರಾಜ್ಯ ವಕೀಲರ ಪರಿಷತ್ತಿನ ಹಂಗಾಮಿ ಅಧ್ಯಕ್ಷ ಬಿ.ಆರ್.ಚಂದ್ರಮೌಳಿ, ನಗರಪಾಲಿಕೆ ಸದಸ್ಯ ಎಂ.ಶಿವಕುಮಾರ್ ಹಾಗೂ ಮೈಸೂರು ವಕೀಲರ ಸಂಘದ ಪದಾಧಿಕಾರಿಗಳಿದ್ದರು.



ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ ದೇವೇಗೌಡರು ಜಯಪುರ ಗ್ರಾಮದ ಜೇಡಿಕಟ್ಟೆ ಮಹದೇಶ್ವರ ದೇವಸ್ಥಾನದ ಮುಂಭಾಗ ಪರಿಶಿಷ್ಟ ಪಂಗಡಗಳ ನಿಗಮದಿಂದ ಜಯಪುರ, ಉದ್ಬೂರು, ಮಾರ್ಬಳ್ಳಿ, ಟಿ.ಕಾಟೂರು, ಗುಮಚನಹಳ್ಳಿ ಗ್ರಾಮದ 54 ಫಲಾನುಭವಿಗಳಿಗೆ ವಿದ್ಯುತ್ ಮೋಟಾರ್ ಪಂಪ್‌ಸೆಟ್ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ನಿಗಮದ ಎಂಡಿ ಮಲ್ಲೇಶ್, ಫೀಲ್ಡ್ ಆಫೀಸರ್ ಭೀಮ್ ರಾವ್, ಜಯಪುರ ಗ್ರಾಪಂ ಉಪಾಧ್ಯಕ್ಷ ಬರಡನಪುರದ ಬಿ.ಡಿ.ಬಸವಣ್ಣ, ಮಾಜಿ ಅಧ್ಯಕ್ಷ ದಾರಿಪುರ ಬಸವಣ್ಣ, ಜೆ.ಎಂ. ಜವರನಾಯಕ, ಅಬ್ದುಲ್ ಮುತಾಲೀಫ್, ತಾಪಂ ಮಾಜಿ ಸದಸ್ಯರಾದ ಉದ್ಬೂರು ಮಹದೇವಸ್ವಾಮಿ, ಅಂಕಪ್ಪ, ಕೆಲ್ಲಹಳ್ಳಿ ಮಹದೇವು, ಜಯಪುರ ಗ್ರಾಮದ ಎಂ. ರಂಗಸ್ವಾಮಿ, ಭೀಮನಾಯಕ, ಮದ್ದೂರಿನ ಶಿವಣ್ಣ, ಗುಜ್ಜೇಗೌಡನಪುರದ ಚೆನ್ನಕೇಶವೇಗೌಡ,ಜಿ.ಜಿ ಪ್ರಕಾಶ್ ಸೋಲಿಗರ ಕಾಲೋನಿ, ಪ್ರಭುಸ್ವಾಮಿ, ನಂಜುಂಡ ಇನ್ನಿತರರು ಉಪಸ್ಥಿತರಿದ್ದರು

ರಕ್ಷಣೆಗಾಗಿ ವಿದ್ಯಾರ್ಥಿನಿಯರು ಸಮರ ಕಲೆ ಕಲಿಯಬೇಕು

ಮೈಸೂರು, ಡಿ.4(ಎಂಟಿವೈ)– ವಿದ್ಯಾರ್ಥಿನಿಯರು ತಮ್ಮ ರಕ್ಷಣೆಗಾಗಿ ಸಮರ ಕಲೆ ಕರಾಟೆ ಕಲಿಯಬೇಕು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಜಿ.ಆರ್.ಮಹೇಶ್ ಸಲಹೆ ನೀಡಿದರು.



ಮೈಸೂರಿನ ರಾಜರಾಜೇಶ್ವರಿ ನಗರದ ವಿದ್ಯಾರ್ಥಿನಿಲಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಭಾನುವಾರ ನಡೆದ ಜಿಲ್ಲಾಮಟ್ಟದ ಕರಾಟೆ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿಯೂ ಕೆಲಸ ಮಾಡುತ್ತಿದ್ದು, ಹಗಲು, ರಾತ್ರಿ ಎನ್ನದೆ ಪುರುಷರಿಗೆ ಸರಿಸಮನಾಗಿ ದುಡಿಯುತ್ತಿದ್ದಾರೆ. ಆದ್ದರಿಂದ ಕರಾಟೆ ಕಲೆಯನ್ನು ಕಲಿತಿದ್ದರೆ ಎಂತಹ ಸಮಯದಲ್ಲೂ ರಕ್ಷಣೆ ಮಾಡಿಕೊಳ್ಳಬಹುದು. ಸರ್ಕಾರದ ವತಿಯಿಂದಲೇ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿನಿಯರಿಗೆ ಕರಾಟೆ ಕಲಿಸುವ ಕಾರ್ಯಕ್ರಮ ನಡೆಸುತ್ತಿದೆ. ಇದರ ಸದುಪಯೋಗಪಡಿಸಿಕೊಳ್ಳಬೇಕು. ಸ್ಪರ್ಧೆಯಲ್ಲಿ ಸೋತವರು ಹತಾಶರಾಗದೆ, ಮತ್ತೆ ಗೆಲ್ಲಲು ಪ್ರಯತ್ನಿಸಬೇಕು. ಸ್ಪರ್ಧೆಯಲ್ಲಿ ಗೆದ್ದವರು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡುವತ್ತ ಗಮನ ಹರಿಸಬೇಕು ಎಂದು ಶುಭ ಕೋರಿದರು.

ಜಿಲ್ಲಾಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ನಂಜನಗೂಡಿನ ಕೆ.ಎಂ. ರಕ್ಷಿತಾ, ದ್ವಿತೀಯ ಸ್ಥಾನ ಪಡೆದ ಮೈಸೂರಿನ ಗೀತಾಂಜಲಿ, ತೃತೀಯ ಸ್ಥಾನ ಪಡೆದ ಹೆಚ್.ಡಿ. ಕೋಟೆಯ ಅಂಜಲಿ ಯವರನ್ನು ಅಭಿನಂದಿಸಲಾಯಿತು.

ಸಮಾರಂಭದಲ್ಲಿ ಜಿಲ್ಲಾ ಕರಾಟೆ ಅಸೋಸಿಯೇಷನ್ ಅಧ್ಯಕ್ಷ ಸೋಸಲೆ ಸಿದ್ದರಾಜು, ಮೈಸೂರು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಎಂ.ಕೆ. ಮೇಘ, ತಾಲೂಕು ಕಲ್ಯಾಣಾಧಿಕಾರಿಗಳಾದ ವಿಶ್ವನಾಥ್, ಸ್ವರ್ಣಲತಾ, ಚಂದ್ರಕಲಾ, ಶಶಿಕಲಾ, ಹರೀಶ್, ಸುಕನ್ಯ, ನಾಗರತ್ನ, ತೀರ್ಪುಗಾರರಾಗಿ ವೆಂಕಟೇಶ್, ಮಹೇಶ್, ಗುರುಪ್ರಸಾದ್, ನಾಗಾಭರಣ, ರಕ್ಷಿತ್‌ಗೌಡ ಜೆ., ದಾಕ್ಷಾಯಿಣಿ ಆರ್., ಕಾರ್ಯನಿರ್ವಹಿಸಿದರು. ಮಹಾಲಕ್ಷ್ಮಿ ನಿರೂಪಿಸಿದರು. ಮೀನಾ ವಂದಿಸಿದರು. ಎಲ್ಲಾ ನಿಲಯಪಾಲಕರು ಹಾಜರಿದ್ದರು.

ನೀರು ಸರಬರಾಜು ವ್ಯತ್ಯಯ

ಮೈಸೂರು, ಡಿ.4–ಮೈಸೂರು ನಗರಕ್ಕೆ ನೀರು ಸರಬರಾಜು ಮಾಡುವ ಮೇಳಾಪುರ ಮತ್ತು ರಮ್ಮನಹಳ್ಳಿ ಯಂತ್ರಾಗಾರಗಳಿಗೆ ವಿದ್ಯುತ್ ಸರಬರಾಜು ಮಾಡುವ ದೇವನೂರು ಸಬ್ ಸ್ಟೇಷನ್‌ನಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿಯನ್ನು ಕೈಗೊಳ್ಳುತ್ತಿರುವುದರಿಂದ ಡಿ.6 ಮತ್ತು 7ರಂದು ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಕೆಸರೆ, ರಾಜೇಂದ್ರನಗರ, ಸುಭಾಷ್‌ನಗರ, ಎನ್.ಆರ್.ಮೊಹಲ್ಲಾ, ಗಾಂಧಿನಗರ, ಉದಯಗಿರಿ, ರಾಜೀವ್‌ನಗರ 1, 2 ಮತ್ತು 3ನೇ ಹಂತ, ಶಾಂತಿನಗರ, ಕಲ್ಯಾಣಗಿರಿ, ಡಾ. ರಾಜ್‌ಕುಮಾರ್ ರಸ್ತೆಗೆ ಸೇರಿಕೊಂಡ ಪ್ರದೇಶಗಳು, ಯರಗನಹಳ್ಳಿ, ಸಿದ್ಧಾರ್ಥ ಬಡಾವಣೆ, ಆಲನಹಳ್ಳಿ, ನಂದಿನಿ ಬಡಾವಣೆ, ಗಿರಿದರ್ಶಿನಿ ಬಡಾವಣೆ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಹಾಗೂ ಇನ್ನಿತರ ಪ್ರದೇಶಗಳಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬರಹಗಾರರು ಪ್ರಶಸ್ತಿ, ಸನ್ಮಾನದ ಹಿಂದೆ ಬಿದ್ದಿದ್ದಾರೆ

ಕವಯಿತ್ರಿ ಎ. ಹೇಮಗಂಗಾ ವಿಷಾದ

ಮೈಸೂರು,ಡಿ.4(ಎಂಟಿವೈ)– ಒಂದೆರಡು ಪುಸ್ತಕ ಹೊರತಂದ ಮಾತ್ರಕ್ಕೆ ಪ್ರಶಸ್ತಿಗಳ ಹಿಂದೆ ಓಡುವವರ ಸಂಖ್ಯೆ ಹೆಚ್ಚಾಗಿದೆ ಎಂದು ವಿಷಾದಿಸಿದ ಕವಯಿತ್ರಿ ಎ.ಹೇಮಗಂಗಾ, ಯುವ ಬರಹಗಾರರು ಕನಿಷ್ಠ ಒಂದು ದಶಕಗಳ ಕಾಲ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಪಣತೊಡಬೇಕು ಎಂದು ಸಲಹೆ ನೀಡಿದ್ದಾರೆ.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನವು ಭಾನುವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಕವಿಗೋಷ್ಠಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಎಂ.ಸುಹಾಸ್ ಅವರ 'ಮೌನಗೀತೆ' ಕವನ ಸಂಕಲನ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಬರಹಗಾರರು ಪ್ರಶಸ್ತಿ ಹಾಗೂ ಸನ್ಮಾನದ ಹಿಂದೆ ಬಿದ್ದಿದ್ದಾರೆ. ಅದರಲ್ಲೂ ಯುವ ಬರಹಗಾರರು ಸನ್ಮಾನ ಮತ್ತು ಪ್ರಶಸ್ತಿಗಳ ಹಿಂದೆ ಹೋಗಲೇಬಾರದು. ಒಂದೆರಡು ಪುಸ್ತಕ ಬರೆದು ಪ್ರಶಸ್ತಿ ಬಯಸುವುದು ಸರಿಯಲ್ಲ. ಕನಿಷ್ಠ ಒಂದು ದಶಕಗಳ ಕಾಲ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಾಧನೆ ಮಾಡಬೇಕು. ಆಗ ಮಾತ್ರ ಗೌರವ ತಾನಾಗಿಯೇ ಹುಡುಕಿಕೊಂಡು ಬರುತ್ತದೆ ಎಂದು ಅಭಿಪ್ರಾಯಪಟ್ಟರು.

ವಾಹನ, ಬಂಗಲೆ ಸೇರಿದಂತೆ ಆಸ್ತಿಯನ್ನು ಲಕ್ಷ್ಮೀ ಸ್ವರೂಪಿ ಎಂದು ಭಾವಿಸುತ್ತಾರೆ. ಪುಸ್ತಕ, ಕೃತಿ, ಕವನ ಸಂಕಲನ ಸರಸ್ವತಿ ಸ್ವರೂಪಿಯಾಗಿದೆ ಸರಸ್ವತಿ ಇದ್ದ ಕಡೆ ಪ್ರಶಸ್ತಿ, ಸನ್ಮಾನಗಳು ತಾನಾಗಿಯೇ ಬರುತ್ತವೆ. ಬಿಡುಗಡೆಯಾದ ಕೃತಿಯನ್ನು ಪಡೆದವರು ಸುಮ್ಮನೆ ಕೂರಬೇಡಿ. ಅದನ್ನು ಓದಿ ಅದರಲ್ಲಿರುವ ಉತ್ತಮ ಅಂಶಗಳ ಬಗ್ಗೆ ಕೃತಿಕಾರರಿಗೆ ಕರೆ ಮಾಡಿ ತಿಳಿಸಬೇಕು. ಇದರಿಂದ ಬರಹಗಾರರಿಗೆ ಸ್ಫೂರ್ತಿ ದೊರೆಯುತ್ತದೆ. ಅದರಲ್ಲೂ ಯುವ ಬರಹಗಾರರಿಗೆ ಪ್ರೇರಣೆ ನೀಡುವುದು ಅಗತ್ಯ. ಈ ಕಾಲದಲ್ಲಿ ಪುಸ್ತಕ ಬರೆಯುವುದು, ಅದನ್ನು ಪ್ರಕಟಿಸುವುದು ಬಹಳ ಕಷ್ಟವಾಗಿದೆ. ಕಾರ್ಯಕ್ರಮ ಸಂಘಟಿಸುವುದು ಸವಾಲಿನ ಕೆಲಸ ಎಂದರು.

ಇತ್ತೀಚಿನ ದಿನಗಳಲ್ಲಿ ಓದುವ ಹವ್ಯಾಸ ಕ್ಷೀಣಿಸುತ್ತಿರುವಂತೆ ಕಾಣುತ್ತಿದೆ. ಕೃತಿ ಬಿಡುಗಡೆ ಆದ ಮೇಲೆ, ನೋಡುವ ಆಸಕ್ತಿ ಕಡಿಮೆ ಇದೆ. ಎಲ್ಲಾ ಕೃತಿಗಳಿಗೂ ತನ್ನದೇ ಬೆಲೆ ಇದೆ. ಇದನ್ನು ಮನಗಂಡು ಎಲ್ಲರೂ ಕೃತಿಗಳನ್ನು ಓದಬೇಕು. ಇದರಿಂದ ಜ್ಞಾನ ಸಂಪಾದಿಸಿಕೊಳ್ಳುವುದರೊಂದಿಗೆ, ಓದುವ ಹವ್ಯಾಸ ಗಟ್ಟಿಗೊಳಿಸಿಕೊಳ್ಳಬಹುದು ಎಂದರು.

ಕೃತಿ ಕುರಿತು ಸಾಹಿತಿ ಕೆ. ಶ್ರೀಧರ್ ಮಾತನಾಡಿ, ಸಾಹಿತ್ಯಾಸಕ್ತಿ ಹೊಂದಿರುವವರೆಲ್ಲರೂ ಬರೆಯಬಹುದು. ಯುವ ಬರಹಗಾರರು ಬರೆಯುವ ಪುಸ್ತಕವನ್ನು ಮುದ್ರಣ ಮಾಡಲು ಸಹಕರಿಸಬೇಕು. ಮುದ್ರಣಗೊಂಡ ಪುಸ್ತಕವನ್ನು ಲೋಕಾರ್ಪಣೆ ಮಾಡಬೇಕು. ಸುಹಾಸ್ ಅವರ ಕವನ ಸಂಕಲನದಲ್ಲಿ 91 ಕವಿತೆಗಳಿವೆ ಎಂದರು.


ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನ ಸಮಿತಿ ಅಧ್ಯಕ್ಷ ಎಂ.ಬಿ. ಸಂತೋಷ್ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕ ಮೊಹಮ್ಮದ್ ಜಾಫರ್, ಆಮ್ವೆ ಡೈರೆಕ್ಟ್ ಸೆಲ್ಲರ್ ಪಾರ್ಟನರ್ ರಾಜು ಆಡ್ಯ, ಸಾಂಸ್ಕೃತಿಕ ಸಮಿತಿ ಅಧ್ಯಕ್ಷೆ ಎನ್.ಸಿ. ಮಮತಾ, ಪ್ರಧಾನ ಕಾರ್ಯದರ್ಶಿ ಬಿ. ಶೋಭಾ, ಕವಿ ಎಂ. ಸುಹಾಸ್, ಸದಸ್ಯರಾದ ನೀತು ರಾಜ್, ವಾಣಿ ರಾಘವೇಂದ್ರ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮತದಾರರ ಪಟ್ಟಿ ಪರಿಶೀಲನೆ ನೆಪದಲ್ಲಿ ಹೆಸರು ಕೈ ಬಿಡುವ ಸಂಭವ

ಎಚ್ಚರ ವಹಿಸುವಂತೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಸೂಚನೆ

ತಿ.ನರಸೀಪುರ, ಡಿ.4– ಈಗಾಗಲೇ ಚುನಾವಣೆಗೆ ಮೂರು ಪಕ್ಷಗಳಿಂದ ಭರ್ಜರಿ ತಯಾರಿ ನಡೆಯುತ್ತಿದ್ದು, ಕಾಂಗ್ರೆಸ್ ಭದ್ರಕೋಟೆಯಾಗಿರುವ ಹಳೇ ಮೈಸೂರು ಭಾಗದಲ್ಲಿ ಮತದಾರರ ಪಟ್ಟಿ ಪರಿಶೀಲನೆ ನೆಪದಲ್ಲಿ ಹೆಸರು ಕೈ ಬಿಡುವ ಸಂಭವವಿದೆ. ಹೀಗಾಗಿ ಈ ಬಗ್ಗೆ ಎಚ್ಚರ ವಹಿಸುವಂತೆ ಬ್ಲಾಕ್ ಕಾಂಗ್ರೆಸ್ ಬೂತ್ ಮಟ್ಟದ ಕಾರ್ಯಕರ್ತರಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಸೂಚಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಆಯ್ಕೆಯಾದ ಹರೀಶ್.ಟಿ ಅವರಿಗೆ ನೇಮಕಾತಿ ಆದೇಶಪತ್ರ ನೀಡಿ ಮಾತನಾಡಿದ ಅವರು, ಚುನಾವಣೆ ಹತ್ತಿರವಾಗುತ್ತಿದ್ದು, ರಾಜ್ಯದಲ್ಲಿ ಕಾಂಗ್ರೆಸ್ ಪರ ಅಲೆ ಇದೆ. ಎಲ್ಲೆಲ್ಲಿ ಕಾಂಗ್ರೆಸ್ ಮತದಾರರ ಸಂಖ್ಯೆ ಹೆಚ್ಚಿದೆಯೋ ಅಂತಹ ಕಡೆ ಸೋಲಿನ ಭೀತಿಯಿಂದ ಬಿಜೆಪಿಯವರು ಮತದಾರರ ಪಟ್ಟಿ ಪರಿಷ್ಕರಣೆ ನೆಪದಲ್ಲಿ ಮತದಾರರನ್ನು ಕೈಬಿಟ್ಟು ಅವರಿಗೆ ಅನುಕೂಲವಾಗುವ ರೀತಿ ಮತದಾರ ಪಟ್ಟಿ ತಯಾರಿಸುತ್ತಿದ್ದಾರೆ. ಆದ್ದರಿಂದ ಬೂತ್ ಮಟ್ಟದ ಪದಾಧಿಕಾರಿಗಳು ಮನೆ ಮನೆಗೆ ತೆರಳಿ ಮಾಹಿತಿ ಪಡೆದು ಹೊಸದಾಗಿ ಸೇರ್ಪಡೆಯಾಗುವರನ್ನು ಮತದಾರರ ಪಟ್ಟಿಗೆ ಸೇರಿಸಬೇಕು. ಮೃತಪಟ್ಟವರ ಹೆಸರು ಹಾಗೂ ಒಂದೇ ಮತಗಟ್ಟೆಯಲ್ಲಿ ಡಬಲ್ ಮತದಾರರು ಇದ್ದರೆ ಅಂತವರನ್ನು ಗುರುತಿಸಿ ಸಂಬಂಧಪಟ್ಟ



ಅಧಿಕಾರಿಗಳಿಗೆ ತಿಳಿಸಿ ಕ್ರಮ ವಹಿಸಬೇಕು ಎಂದರು.

ಈಗಾಗಲೇ ಈ ವಿಚಾರವಾಗಿ ರಾಜ್ಯದಲ್ಲಿ ಬಹಳ ದೊಡ್ಡ ಹಗರಣ ನಡೆದಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಹಲವರನ್ನು ಬಂಧಿಸಿದ್ದಾರೆ. ಆದರೂ ನಾವು ಸುಮ್ಮನೆ ಮನೆಯಲ್ಲಿ ಕೂರುವುದು ಬೇಡ. ಎಚ್ಚರ ವಹಿಸಿ ಎಲ್ಲಾ ಮತದಾರರಿಗೂ ಮತದಾನ ಹಕ್ಕು ದೊರಕುವಂತೆ ಮಾಡೋಣ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದರಿಂದ ಕಾರ್ಯಕರ್ತರು ಯುವಕರನ್ನು ಹೆಚ್ಚಾಗಿ ಪಕ್ಷಕ್ಕೆ ಸೇರಿಸಿಕೊಳ್ಳಬೇಕು ಹಾಗೂ ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಸಮರ್ಪಕವಾಗಿ ಕಾರ್ಯ ನಿರ್ವಹಿಸಬೇಕು ಎಂದರು.

ಈ ವೇಳೆ ಹಾರೋಹಳ್ಳಿ ಮೆಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹದೇವ್, ಉಪಾಧ್ಯಕ್ಷ ಹೆಚ್.ಆರ್.ರವಿಕುಮಾರ್, ಜಿಲ್ಲಾ ಆರೋಗ್ಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಮಂಜುನಾಥ್, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್, ಕಾಂಗ್ರೆಸ್ ಮುಖಂಡರಾದ ರವಿ ಎನ್.ಗೌಡ, ಗುತ್ತಿಗೆದಾರರಾದ ರಾಜೇಶ್, ಶ್ರೀಧರ್, ಅವಿ, ಗ್ರಾಪಂ ಸದಸ್ಯರಾದ ಕುಮಾರ್, ಶ್ರೀನಿವಾಸ್, ಸಿದ್ದರಾಜು ಇತರರಿದ್ದರು.

ಎರವ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳ ಆಯ್ಕೆ

ಹೆಚ್.ಡಿ.ಕೋಟೆ, ಡಿ.4– ಮೂಲ ನಿವಾಸಿಗಳ ಎರವ ಸಮುದಾಯದ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳ ಆಯ್ಕೆ ಮಾಡಲಾಗಿದೆ ಎಂದು ಅಧ್ಯಕ್ಷ ಶೈಲೇಂದ್ರ ತಿಳಿಸಿದರು.



ಪಟ್ಟಣದಲ್ಲಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ಮೂಲ ನಿವಾಸಿ ಎರವ ಸಮುದಾಯ 1230 ಕುಟುಂಬಗಳಿದ್ದು, 6250 ಜನಸಂಖ್ಯೆ ಇದೆ. ನಮ್ಮ ಸಮುದಾಯ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಹಿಂದುಳಿದಿದ್ದು ನಮ್ಮ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ನೂತನ ಆಡಳಿತ ಮಂಡಳಿ ರಚಿಸಲಾಗಿದೆ ಎಂದರು. ಗೌರವಾಧ್ಯಕ್ಷ ದೇವರಾಜು, ಅಧ್ಯಕ್ಷರಾಗಿ ಶೈಲೇಂದ್ರ ಕುಮಾರ್, ಉಪಾಧ್ಯಕ್ಷೆ ಯಶೋಧಮ್ಮ, ಕಾರ್ಯದರ್ಶಿ ಬಿ.ಸಿದ್ದರಾಜು, ಖಜಾಂಚಿ ಪುಟ್ಟಮ್ಮ, ಸಂಘಟನಾ ಕಾರ್ಯದರ್ಶಿ ಮಂಜುನಾಥ್, ನಾಗರಾಜ್, ಸಂಘದ ಸಲಹೆಗಾರರಾಗಿ ಬಿ.ಕಾವೇರ, ಸದಸ್ಯರಾಗಿ ಚಿಕ್ಕಮಣಿ, ನಟರಾಜ್, ಭಾಗ್ಯಮ್ಮ ಲೋಹಿತ, ಶಿವರುದ್ರ ಮಾದೇವ, ಜಯರಾಜ್, ಇಂದ್ರಮ್ಮ, ಸುನಿತಾ, ಚಿಕ್ಕಯ್ಯ ಚಿಕ್ಕಮಣಮ್ಮ, ಬಿಳಿಯಪ್ಪ, ಪ್ರೇಮಾನಂದ, ಜಯ, ಬಸವಯ್ಯ, ಸತ್ಯ, ಮಹದೇವಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದರು.

ಪಿ.ಪಟ್ಟಣದಲ್ಲಿ ವಿಜೃಂಭಣೆಯ ಹನುಮ ಜಯಂತಿ

ಪಿರಿಯಾಪಟ್ಟಣ, ಡಿ.4– ಪಟ್ಟಣದ ಕೋಟೆ ಆಂಜನೇಯಸ್ವಾಮಿ ಉತ್ಸವ ಸಮಿತಿಯಿಂದ ನಡೆದ 5ನೇ ವರ್ಷದ ಹನುಮ ಜಯಂತಿ ಸಾವಿರಾರು ಹನುಮ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಪಟ್ಟಣದ ಒಳಕೋಟೆಯಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಮುಂಜಾನೆಯಿಂದಲೇ ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯ ನಡೆಯಿತು. ಈ ವೇಳೆ ಭಕ್ತರು ದೇವರ ದರ್ಶನ ಪಡೆದು ಪುನೀತರಾದರು.

ಇದೇ ವೇಳೆ ಹನುಮ ಜಯಂತಿ ಆಚರಣೆ ಸಮಿತಿ ಗೌರವಾಧ್ಯಕ್ಷ ಶಶಿಕುಮಾರ್ 58 ಕೆಜಿ ತೂಕದ ಪಂಚಲೋಹದ ಹನುಮನ ಉತ್ಸವ ಮೂರ್ತಿಯನ್ನು ದೇವಾಲಯಕ್ಕೆ ಸಮರ್ಪಿಸಿದರು. ಬಳಿಕ ಉತ್ಸವ ಮೂರ್ತಿಗೆ ಸಿದ್ದಲಿಂಗಪುರ ಅರಿಶಿನಕುಪ್ಪೆ ಶ್ರೀಮಂಜುನಾಥ ಸನ್ನಿಧಿಯ ಶ್ರೀರಾಜೇಶ್‌ನಾಥ ಸ್ವಾಮೀಜಿ ಪೂಜೆ ನೆರವೇರಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಲಾಯಿತು.

ಅದ್ದೂರಿ ಮೆರವಣಿಗೆ: ದೇವಾಲಯದ ಆವರಣದಿಂದ ಆರಂಭವಾದ ಮೆರವಣಿಗೆ ಪಟ್ಟಣದ ಒಳಕೋಟೆ, ವೈದ್ಯೇಶ್ವರ ಬಡಾವಣೆ, ಉಪ್ಪಾರಗೇರಿಗಳಲ್ಲಿ ಸಂಚರಿಸಿ ಎಪಿಎಂಸಿ ಬಳಿ ಬಿ.ಎಂ.ರಸ್ತೆ ಪ್ರವೇಶಿಸಿ ಸಂತೆಪೇಟೆ, ಬಸವೇಶ್ವರ ವೃತ್ತ, ಬಸ್ ನಿಲ್ದಾಣದವರೆಗೆ ಸಾಗಿ ಬಳಿಕ ನೆಹರು ರಸ್ತೆ, ದೊಡ್ಡ ಬೀದಿ, ನುಗ್ಗೆಹಳ್ಳಿ ಬೀದಿ, ಕಾನ್ವೆಂಟ್ ರಸ್ತೆ ಮೂಲಕ ಗೋಣಿಕೊಪ್ಪ ರಸ್ತೆಯಲ್ಲಿರುವ ಜೂನಿಯರ್ ಕಾಲೇಜಿನ ಮೈದಾನ ತಲುಪಿ ಸಮಾಪ್ತಿಗೊಂಡಿತು. ಮೆರವಣಿಗೆಯುದ್ದಕ್ಕೂ ಡಿಜೆ ತಾಳಕ್ಕೆ ಹೆಜ್ಜೆ ಹಾಕಿದ ಯುವಕ–ಯುವತಿಯರ ನೃತ್ಯ ಗಮನ ಸೆಳೆಯಿತು. ಇದೇ ವೇಳೆ ಭಕ್ತರು ಪೂಜೆ ಸಲ್ಲಿಸಿದರು.

ಮೆರವಣಿಗೆಯಲ್ಲಿ ಸಂಸದ ಪ್ರತಾಪ್ ಸಿಂಹ, ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್, ಶಾಸಕ ಕೆ.ಮಹದೇವ್, ಮೈಮುಲ್



ಅಧ್ಯಕ್ಷ ಪಿ.ಎಂ.ಪ್ರಸನ್ನ, ಮಹಾನಗರ ಪಾಲಿಕೆ ಮಾಜಿ ಸದಸ್ಯ ಪಿ.ಪ್ರಶಾಂತ್ ಗೌಡ, ಆಂಜನೇಯಸ್ವಾಮಿ ಉತ್ಸವ ಸಮಿತಿ ಗೌರವಾಧ್ಯಕ್ಷ ಶಶಿಕುಮಾರ್‌ಗೌಡ, ಅಧ್ಯಕ್ಷ ಪ್ರಸಾದ್, ಉಪಾಧ್ಯಕ್ಷ ನಾಗರಾಜ್, ಕಾರ್ಯಾಧ್ಯಕ್ಷ ಅನಿಲ್, ಬಿಜೆಪಿ ತಾಲೂಕು ಅಧ್ಯಕ್ಷ ಎಂ.ಎಂ ರಾಜೇಗೌಡ, ಮುಖಂಡರಾದ ಷಣ್ಮುಖರಾವ್, ರವಿ.ಕೆ.ಎನ್, ಸೋಮಶೇಖರ್, ಬಿಜೆಪಿ ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ನಳಿನಿ ಗೌಡ, ಭಾರತಿ, ತಾಲೂಕು ಯುವ ಮೋರ್ಚಾ ಅಧ್ಯಕ್ಷ ಪ್ರವೀಣ್ ಶೆಟ್ಟಿ, ಕೃಷ್ಣ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಅಣ್ಣಪ್ಪ, ಅನಿಲ್ ಸೇರಿದಂತೆ ಇತರರಿದ್ದರು. ಮಹಿಳೆಯರು ಭಗವಧ್ವಜ ಹಿಡಿದು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಹನುಮ ಜಯಂತಿ ಅಂಗವಾಗಿ ಪಟ್ಟಣದ ಪ್ರಮುಖ ರಸ್ತೆ ಹಾಗೂ ವೃತ್ತ ಕೇಸರಿ ಧ್ವಜ ರಾರಾಜಿಸಿತು.

ಬಿಗಿ ಬಂದೋಬಸ್ತ್: ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್, ಡಿವೈಎಸ್ಪಿ ರವಿಪ್ರಸಾದ್, ಸಿಪಿಐ ಪ್ರಕಾಶ್, ಎಸ್‌ಐ ಪುಟ್ಟರಾಜು ಸೇರಿದಂತೆ ಪೊಲೀಸ್ ಸಿಬ್ಬಂದಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಸೂಕ್ತ ಬಂದೋಬಸ್ತ್ ಕೈಗೊಂಡಿದ್ದರು.

ಚರಂಡಿ, ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ



ಹುಣಸೂರು, ಡಿ.4– ತಾಲೂಕಿನ ಅಹಮದ್ ನಗರ ಹಾಗೂ ಆಝಾದ್ ನಗರಗಳಲ್ಲಿ ಲೋಕೋಪಯೋಗಿ ಇಲಾಖೆಯ 2.5 ಕೋಟಿ ವೆಚ್ಚದ ಚರಂಡಿ ಹಾಗೂ ರಸ್ತೆ ಕಾಮಗಾರಿಗೆ ಶಾಸಕ ಹೆಚ್.ಪಿ.ಮಂಜುನಾಥ್ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ನಾನು ಬಂದು ಹೋಗುವ ರಾಜಕಾರಣಿ ಅಲ್ಲ. ವರ್ಷಪೂರ್ತಿ ನಿಮ್ಮೊಂದಿಗೆ ಇರುವ ರಾಜಕಾರಣಿ. ನಿಮ್ಮ ಆಶೀರ್ವಾದ ನನ್ನ ಮೇಲಿರಲಿ. ತಾಲೂಕಿನಲ್ಲಿ ಉಳಿದಿರುವ ಅಭಿವೃದ್ಧಿ ಕಾರ್ಯ ಮಾಡುತ್ತೇನೆ. ಮುಂಬರುವ ಚುನಾವಣೆಯಲ್ಲಿ ಪ್ರಾಮಾಣಿಕರಿಗೆ ಮತ ಹಾಕಿ ಎಂದರು.

ರಾಜ್ಯ ಸರ್ಕಾರ ಅಲ್ಪಸಂಖ್ಯಾತರಿಗೆ ವಸತಿ ಕಲ್ಪಿಸಲು ಸಂಪೂರ್ಣ ವಿಫಲವಾಗಿದೆ. ಮುಂದಿನ ದಿನಗಳಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಪ್ರತಿ ಗ್ರಾಮಗಳ ವಸತಿ ಸಮಸ್ಯೆಗಳನ್ನು ಹಂತ ಹಂತವಾಗಿ ಬಗೆಹರಿಸುತ್ತೇನೆ ಎಂದು ಭರವಸೆ ನೀಡಿದರು.

ಆಝಾದ್ ನಗರದ ಗ್ರಾಮಸ್ಥರು ನನ್ನನ್ನು ಬೆಂಬಲಿಸುತ್ತಾ ಬಂದಿದ್ದಾರೆ. ನಾನು ಕೂಡ ನನ್ನ ಕೈಲಾದಷ್ಟು ಅಭಿವೃದ್ಧಿ ಮಾಡಿದ್ದೇನೆ. ತಾಲೂಕಿನಲ್ಲಿ ಕುಂಠಿತವಾಗಿದ್ದ ಕೆಲಸ ಕಾರ್ಯಗಳು ಮಾಜಿ ಸಿಎಂ ಸಿದ್ದರಾಮಯ್ಯನವರ ಅವಧಿಯಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪಿಡಬ್ಲ್ಯೂಡಿ ಎಇಇ ಭೋಜರಾಜ್, ಗ್ರಾಪಂ ಅಧ್ಯಕ್ಷ ಪ್ರಸನ್ನ ಕುಮಾರ, ಉಪಾಧ್ಯಕ್ಷ ಶಿರೀನ್ ತಾಜ್, ಸದಸ್ಯರಾದ ಝಮೀರ್ ಅಹಮದ್, ಪುಟ್ಟಗೌರಮ್ಮ, ಮಸೀದಿ ಕಾರ್ಯದರ್ಶಿ ಸಮೀವುಲ್ಲಾ ಖಾನ್, ಅಫ್ಸರ್, ಖದೀರ್, ನಂಜುಂಡ ಹಾಗೂ ಗ್ರಾಮದ ಮುಖಂಡರು ಹಾಜರಿದ್ದರು.

ಸ್ಮಶಾನ ತಡೆಗೋಡೆ ಕಾಮಗಾರಿಗೆ ಗುದ್ದಲಿ ಪೂಜೆ

ಕೆ.ಆರ್.ನಗರ, ಡಿ.4– ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿ ಖಾತೆ ಮಾಡಿಸಿ ಮಾರಾಟ ಮಾಡುತ್ತಿರುವುದು ಎಗ್ಗಿಲ್ಲದೇ ನಡೆಯುತ್ತಿದೆ ಎಂದು ಶಾಸಕ ಸಾ.ರಾ.ಮಹೇಶ್ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಹುಣಸೂರು ರಸ್ತೆಯಲ್ಲಿರುವ ಮುಸ್ಲಿಂ ಸಮುದಾಯದ ಸ್ಮಶಾನ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸರ್ಕಾರಿ ಜಾಗ ಖಾಸಗಿಯವರ ಪಾಲಾಗದೇ ಸಾರ್ವಜನಿಕರಿಗೆ ಉಪಯೋಗವಾಗಬೇಕು. ಈ ಉದ್ದೇಶದಿಂದ ಮುಸ್ಲಿಂ ಸಮುದಾಯಕ್ಕೆ ಸಹಾಯವಾಗಲೆಂದು ಸರ್ಕಾರದ 37 ಗುಂಟೆ ಜಮೀನಿನ ಸುತ್ತ ಶಾಸಕರ ಅನುದಾನದಲ್ಲಿ ತಡೆಗೋಡೆ ನಿರ್ಮಿಸಲಾಗುವುದು ಎಂದರು.

ಸ್ಮಶಾನ ಮಧ್ಯ ಭಾಗದಲ್ಲಿ ಚಿಕ್ಕದಾದ ಕಟ್ಟೆಯೊಂದನ್ನು ನಿರ್ಮಿಸಿ ಅಲ್ಲಿಗೆ ನೀರು ತುಂಬಿಸುವ ಜವಾಬ್ದಾರಿಯನ್ನು ಪುರಸಭೆಗೆ ನೀಡಲಾಗುವುದು. ಮುಸ್ಲಿಂ ಸಮುದಾಯದವರು ಕೈಕಾಲು ತೊಳೆದು ಪೂಜೆ ಪುನಸ್ಕಾರ ಮಾಡಲು ಅನುವು ಮಾಡಿಕೊಡಲಾಗುವುದು ಎಂದರು.

ಮೂಳೆ ತಜ್ಞ ಡಾ.ಮೊಹಬೂಬ್ ಖಾನ್ ಮಾತನಾಡಿ, ಶಾಸಕರ ಈ ದಿಟ್ಟ ನಿರ್ಧಾರದಿಂದ ಪಟ್ಟಣದ ಮುಸ್ಲಿಂ ಸಮುದಾಯಕ್ಕೆ ಅನುಕೂಲಕರವಾಗಿದೆ ಎಂದರು.

ಈ ವೇಳೆ ಜಾಮೀಯಾ ಮಸೀದಿ ಧರ್ಮಗುರುಗಳಾದ ಮುಫ್ತಿ ಜೈನೂಲ್ಲಬಿದ್ದಿನ್, ಆಲಿ ಹುಸೇನ್, ಜಾಮೀಯಾ ಮಸೀದಿ ಅಧ್ಯಕ್ಷ ಅಫ್ಸರ್ ಬಾಬು, ಕಾರ್ಯದರ್ಶಿ ತಸ್ಸವರ್ ಪಾಷ, ಮುಖಂಡರಾದ ಮುಬಾರಕ್, ಮಹಮ್ಮದ್ ಸಿರಾಜ್, ಸೈಯಾದ್ ಅಸ್ಲಂ, ಎಜಾಸ್ ಪಾಷ, ಅಮೀನ್, ಸಾದಿಕ್, ಮುಜಾಹೀದ್, ನಸೀರ್ ಇನ್ನಿತರರಿದ್ದರು.



ಸರ್ಕಾರದ ಪ್ರತಿರೋಧ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ



ತಿ.ನರಸೀಪುರ, ಡಿ.4– ಡಾ.ಬಿ.ಆರ್.ಅಂಬೇಡ್ಕರ್ ಪರಿನಿಬ್ಬಾಣದ ದಿನದಂದು ರೈತ–ದಲಿತ ಐಕ್ಯ ಹೋರಾಟ ಸಮಿತಿ ಕರೆ ನೀಡಿರುವ ಸರ್ಕಾರದ ಪ್ರತಿರೋಧ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ದಸಂಸ ಸಂಚಾಲಕ ಅಲಗೂಡು ಶಿವಕುಮಾರ್ ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿ ಬಳಿ ಕಾರ್ಯಕ್ರಮದ ಭಿತ್ತಿಪತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಅಂಬೇಡ್ಕರ್ ಪರಿನಿಬ್ಬಾಣ ದಿನದಂದು ಕರೆ ನೀಡಿರುವ ಐಕ್ಯ ಹೋರಾಟ ಕಾರ್ಯಕ್ರಮಕ್ಕೆ ತಾಲೂಕಿನಿಂದ 5 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ತೆರಳುವ ನಿರೀಕ್ಷೆ ಇದೆ. ಕಾರ್ಯಕ್ರಮಕ್ಕೆ ಹೋಗಲು ವಾಹನಗಳ ವ್ಯವಸ್ಥೆ ಮಾಡಿದ್ದು, ಕೆಲವು ಕಾರ್ಯಕರ್ತರು ಬಸ್ ಮತ್ತು ಸ್ವಂತ ವಾಹನಗಳಲ್ಲಿ ಬರುವ ಸಾಧ್ಯತೆ ಹೆಚ್ಚಿದೆ ಎಂದರು. ಈ ವೇಳೆ ದಸಂಸ ಬನ್ನಹಳ್ಳಿ ಸೋಮಣ್ಣ, ಯರಗನಹಳ್ಳಿ ಸುರೇಶ, ಯಾಚೇನಹಳ್ಳಿ ಸೋಮಶೇಖರ್, ಕುಕ್ಕೂರು ರಾಜು,ಹಿರಿಯೂರು ಸೋಮಣ್ಣ, ನಟರಾಜಮೂರ್ತಿ, ಶಶಿಕಾಂತ್, ನಂಜುಂಡಯ್ಯ, ಪ್ರೇಮಕುಮಾರ್, ಬಸವರಾಜು, ಕುಮಾರ್, ನಾಗರಾಜು ಇತರರಿದ್ದರು.

ಅರಣ್ಯದಲ್ಲಿ ಪ್ರಾಣಿ ಸಂಕುಲ ಹೆಚ್ಚಳವಾದರೆ ಮಾತ್ರ

ಕಾಡು, ನಾಡು ಉಳಿಯಲು ಸಾಧ್ಯ: ಎಸಿಎಫ್ ದಯಾನಂದ್

ಹುಣಸೂರು, ಡಿ.4– ಅರಣ್ಯದಲ್ಲಿ ಪ್ರಾಣಿ ಸಂಕುಲ ಹೆಚ್ಚಳವಾದರೆ ಮಾತ್ರ ಕಾಡು ಮತ್ತು ನಾಡು ಉಳಿಯಲು ಸಾಧ್ಯ ಎಂದು ಎಸಿಎಫ್ ದಯಾನಂದ್ ತಿಳಿಸಿದರು.

ನಗರದ ಅರಣ್ಯ ಇಲಾಖೆ ಕಚೇರಿಯಲ್ಲಿ ಅಡವಿ ಅಲರ್ಟ್ ಫೌಂಡೇಷನ್‌ನ ಪವನ್ ಜೋಷಿ ಹೊರ ತಂದಿರುವ ನಾಗರಹೊಳೆ ಸಾಕ್ಷ್ಯಚಿತ್ರ ಒಳಗೊಂಡ 2023ರ ನೂತನ ಕ್ಯಾಲೆಂಡರ್ ಮತ್ತು ಸಾಕ್ಷ್ಯಚಿತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಕಾಡು ಉಳಿದರೆ, ಅಡವಿ ಬೆಳೆಯುತ್ತದೆ. ಆಗ ಪರಿಸರದ ಜೊತೆಗೆ ಕಾಡು ಪ್ರಾಣಿ, ಪಕ್ಷಿಗಳ ಸಂತತಿ ಹೆಚ್ಚುವ ಜೊತೆಗೆ ನಾಡಿನ ಕಡೆ ಆಹಾರಕ್ಕಾಗಿ ಬರುವುದು ತಪ್ಪುತ್ತದೆ. ಅದರಿಂದ ಮಾನವ ಮತ್ತು ಪ್ರಾಣಿಗಳ ಸಂಘರ್ಷ ಮರೆಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಎನ್‌ಜಿಓ ಪವನ್ ಜೋಷಿ ಮಾತನಾಡಿ, ಅರಣ್ಯದೊಳಗೆ ಮುಂಚೂಣಿಯಲ್ಲಿ ಸೇವೆ ಮಾಡುವ ಸಿಬ್ಬಂದಿಗಳಿಗೆ, ಸರಕಾರ ನೀಡುವ ಸೌಲಭ್ಯ ವಂಚಿತರಿಗೆ ಸಹಕಾರ ನೀಡುವ ಭಾಗ್ಯ ನಮ್ಮದಾಗಿದೆ. ನಾಗರಹೊಳೆ ಅಭಯಾರಣ್ಯದಲ್ಲಿ ಕಾಡ್ಗಿಚ್ಚು ಸಂಭವಿಸುವ ಸಂದರ್ಭ ಅವರಿಗೆ ಬೇಕಾದ ಶೂ, ಕ್ಯಾಪ್, ವಿಷಲ್, ಬ್ಲೈಯರ್ ಇನ್ನಿತರೆ ವಸ್ತುಗಳನ್ನು 24 ವರ್ಷಗಳಿಂದಲೂ ನೀಡುತ್ತ ಬಂದಿದ್ದೇವೆ. ಹಾಗೆ ಆನೆಚೌಕೂರು ವ್ಯಾಪ್ತಿಯಲ್ಲಿ 20 ಲೀಟರ್ ಕ್ಯಾನ್ ಮೂಲಕ ಪ್ರತಿ ವರ್ಷಕೊಮ್ಮೆ 8 ಸಾವಿರ ಲೀಟರ್ ಕುಡಿಯುವ ನೀರು ನೀಡಿ ಬೆಂಕಿ ನಂದಿಸುವ ಸಿಬ್ಬಂದಿಗಳಿಗೆ ನೆರವಾಗಿದ್ದೇವೆ ಎಂದರು.

ಅದೇ ರೀತಿ ಹಲವು ವರ್ಷಗಳಿಂದ ನಾಡಿನಿಂದ ಕಾಡಿಗೆ ಹೋಗಿ ಮಾನವ ಮತ್ತು ಪ್ರಾಣಿಗಳ ಸಂಘರ್ಷದ ಚಿತ್ರಗಳನ್ನು ಸೆರೆ ಹಿಡಿದು, ಮಾನವ ಕುಲಕ್ಕೆ ಅರ್ಪಿಸಿದ್ದೇವೆ. ಕಾರಣವಿಷ್ಟೆ, ಅರಣ್ಯ ಉಳಿದರೆ ಮಾತ್ರ ಮಳೆ ಬೆಳೆ, ಅಂತ ಈಗ ಎಲ್ಲರಿಗೂ ಅರ್ಥವಾಗಿದೆ. ಆ ನಿಟ್ಟಿನಲ್ಲಿ ನಾವು ಕೂಡ ಅರಣ್ಯ ಇಲಾಖೆ ಅಧಿಕಾರಿಗಳ ಸಹಕಾರದಿಂದ ಅರಣ್ಯದೊಳಗೆ ಪ್ರಾಣಿಗಳ ಸಂರಕ್ಷಣೆ ಹೇಗೆ ಎಂಬುದನ್ನು ಅರಿತು ಅಳಿಲು ಸೇವೆಗೆ ಮುಂದಾಗಿದ್ದೇವೆ ಎಂದರು. ಈ ವೇಳೆ ಪ್ರದೀಪ್ ರಾಣೆ, ಮಂಜು, ಸುರೇಂದ್ರ, ಕಾವೇರಿ ಮತ್ತು ಸಿಬ್ಬಂದಿ ಇದ್ದರು.



ಕೀಳನಪುರದಲ್ಲಿ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿ

ತಿ.ನರಸೀಪುರ, ಡಿ.4– ಗ್ರಾಮೀಣ ಜನರ ಆರೋಗ್ಯದ ಹಿತದೃಷ್ಟಿಯಿಂದ ನಮ್ಮ ಸಂಸ್ಥೆ ವತಿಯಿಂದ ಬೃಹತ್ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಬಿಜೆಪಿ ಹಿರಿಯ ಮುಖಂಡ ಹಾಗೂ ಜಿಪಂ ಮಾಜಿ ಅಧ್ಯಕ್ಷ ಕೆ.ಎನ್.ಪುಟ್ಟಬುದ್ಧಿ ತಿಳಿಸಿದರು.

ತಾಲೂಕಿನ ಕೀಳನಪುರ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಭಾನುವಾರ ಕೆ.ಎನ್.ಪುಟ್ಟಬುದ್ಧಿ ಫೌಂಡೇಷನ್, ಕೆ.ಆರ್.ಆಸ್ಪತ್ರೆ ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ ಹಾಗೂ ಆರೋಗ್ಯ ಭಾರತಿ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿದ ಅವರು, ಹಳ್ಳಿಗಾಡಿನ ಜನರ ಸೇವೆ ಮಾಡಬೇಕೆಂಬ ಉದ್ದೇಶದಿಂದ ಪುತ್ರ ಶರತ್ ಪ್ರಥಮ ಬಾರಿಗೆ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿದ್ದಾರೆ. ಅಗತ್ಯತೆ ಅರಿತು ಮುಂದಿನ ದಿನಗಳಲ್ಲಿ ವರುಣಾ ವಿಧಾನಸಭಾ ಕ್ಷೇತ್ರದ ಪ್ರತಿಯೊಂದು ಹಳ್ಳಿಯಲ್ಲೂ ಆರೋಗ್ಯ ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದರು.

ಬಿಜೆಪಿ ಮುಖಂಡ ಶರತ್ ಪುಟ್ಟಬುದ್ಧಿ ಮಾತನಾಡಿ, ಹುಟ್ಟೂರಿನಲ್ಲಿ ಸಾರ್ಥಕತೆಯ ಬದುಕು ನಡೆಸಬೇಕೆಂಬ ಉದ್ದೇಶದಿಂದ ವಿದೇಶದಿಂದ ಆಗಮಿಸಿದ್ದೇನೆ. ಯಾವುದೇ ಅಧಿಕಾರ ಹಾಗೂ ಹುದ್ದೆ ಅಪೇಕ್ಷೆಯಿಲ್ಲದೆ ಕ್ಷೇತ್ರದಲ್ಲಿ ಜನರೊಂದಿಗೆ ಬೆರೆಯುತ್ತಿದ್ದೇನೆ. ಹಿರಿಯರ ಸಲಹೆ ಪಡೆದು ಪ್ರಥಮ ಬಾರಿಗೆ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಂಡಿದ್ದೇವೆ. ಮುಂದೆಯೂ ಸೇವಾ ಕಾರ್ಯಕ್ರಮ ನಿರಂತರವಾಗಿ ನಡೆಯಲಿವೆ ಎಂದರು. ಬೆಳಗ್ಗೆ 9 ರಿಂದ ಮಧ್ಯಾಹ್ನ 2 ಗಂಟೆವರೆಗೆ ನಡೆದ ಶಿಬಿರದಲ್ಲಿ 500ಕ್ಕೂ ಹೆಚ್ಚು ಮಂದಿಗೆ ತಲೆನೋವು, ರಕ್ತದೊತ್ತಡ, ಸಕ್ಕರೆ ಕಾಯಿಲೆ, ನಾಡಿಮಿಡಿತ, ಕಣ್ಣು, ಮೂಗು, ಕಿವಿ, ಗಂಟಲು, ಮಂಡಿ ನೋವು ಸಂಬಂಧಿತ ಕಾಯಿಲೆಗಳಿಗೆ ಹಾಗೂ ಕಣ್ಣಿನ ತಪಾಸಣೆ ಮಾಡಿ ಚಿಕಿತ್ಸೆ ನೀಡಿ, ಉಚಿತವಾಗಿ ಔಷಧ ನೀಡಲಾಯಿತು. ಅಲ್ಲದೆ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಗೆ ನೋಂದಣಿ ಮಾಡಿ ಕಾರ್ಡ್‌ಗಳನ್ನು ವಿತರಿಸಲಾಯಿತು.

ಈ ವೇಳೆ ವೈದ್ಯರಾದ ಡಾ.ಸೃಷ್ಟಿ, ಡಾ.ವೆಂಕಟೇಶ್, ಡಾ.ಶಿವರಾಜಕುಮಾರ್, ಡಾ.ರವಿ, ಡಾ.ಸಂಜಯ್, ಡಾ.ಅಮೃತ, ಡಾ.ಸ್ಫೂರ್ತಿ, ಡಾ.ಯೋಗಿತ ಹಾಗೂ ಇತರ ಆರೋಗ್ಯ ಸಿಬ್ಬಂದಿ ಸೇವೆ ಸಲ್ಲಿಸಿದರು. ಉದ್ಯಮಿಗಳಾದ ರವಿಶಂಕರ, ಶಿವಕುಮಾರ, ಮಾಜಿ ಛೇರ್ಮನ್ ಚೆನ್ನಬಸಪ್ಪ ಗುತ್ತಿಗೆದಾರ ಜಯಶಂಕರ್, ಪಿಕಾರ್ಡ್ ಬ್ಯಾಂಕ್ ನಿರ್ದೇಶಕರಾದ ಡಿ.ಮಹೇಶ್, ಮಂಜುನಾಥ, ಗ್ರಾಪಂ ಸದಸ್ಯರಾದ ಮಹದೇವಸ್ವಾಮಿ, ಶಿವರಾಜು, ಮೈ ಸೆಂ ಕಾಲೇಜು ಸ್ಥಾಪಕ ಶಿವಪ್ಪ ವಿಶ್ವಭಾರತಿ ನಿರ್ದೇಶಕ ತಿವಾರಿ, ಆರೋಗ್ಯ ಭಾರತಿ ಸಂಚಾಲಕ ಜಿ.ಕೃಷ್ಣ, ಮುಖಂಡರಾದ ರಾಮು, ಪಿ.ಜಿ.ಹುಂಡಿ ರಘು ಇನ್ನಿತರರಿದ್ದರು.



> ❝ ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಕಾರ್ಯಕರ್ತರು ಹೈಕಮಾಂಡ್‌ಗೆ ನನ್ನ ಹೆಸರು ಸೂಚಿಸಿದರಷ್ಟೇ ವರುಣಾ ಕ್ಷೇತ್ರದ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತೇನೆ. ಗೆಲ್ಲಿಸುವ ಜವಾಬ್ದಾರಿ ಕಾರ್ಯಕರ್ತರದ್ದೇ ಆಗಿರುವುದರಿಂದ ಅಭ್ಯರ್ಥಿ ಆಯ್ಕೆ ಮಾಡುವವರು ಅವರೇ ಆಗಿರುತ್ತಾರೆ. ವಿದೇಶದಲ್ಲಿ ಉದ್ಯೋಗದಲ್ಲಿ ಇದ್ದಾಗಲೂ ಕಳೆದ ಲೋಕಸಭಾ ಮತ್ತು ಇನ್ನಿತರ ಚುನಾವಣೆಗಳಲ್ಲಿ ಪಕ್ಷದ ಪರ ಕೆಲಸ ಮಾಡಿದ್ದೇನೆ. ಮೋದಿ ಜಾರಿಗೆ ತಂದಿದ್ದ ಪೌರತ್ವ ಕಾಯ್ದೆ ನಿಜಕ್ಕೂ ಉತ್ತಮವಾಗಿತ್ತು. ಅದನ್ನು ಎಡಪಂಥೀಯರು, ವಿದೇಶಗಳ ಕೆಲವರು ತಪ್ಪಾಗಿ ಬಿಂಬಿಸಿದ್ದರಿಂದ ಅಲ್ಪಸಂಖ್ಯಾತ ಹಿಂದುಗಳಿಗೆ ಪೌರತ್ವ ನೀಡುವ ಮಹತ್ವದ ಕಾಯಿದೆ ನಿರುಪಯುಕ್ತವಾಯಿತು.
>
> **–ಶರತ್ ಪುಟ್ಟಬುದ್ಧಿ, ಬಿಜೆಪಿ ಮುಖಂಡ.**

ವಿದ್ಯುತ್ ಸ್ಪರ್ಶ: ಯುವಕ ಸಾವು

ನಂಜನಗೂಡು, ಡಿ.4– ವಿದ್ಯುತ್ ಸ್ಪರ್ಶಿಸಿ ಯುವಕನೋರ್ವ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ನಗರದ ಮಹದೇಶ್ವರ ಬಡಾವಣೆಯ ಸಿಟಿಜನ್ ಶಾಲೆ ಹಿಂಭಾಗದ ರಸ್ತೆಯಲ್ಲಿ ಭಾನುವಾರ ಸಂಜೆ ನಡೆದಿದೆ.

ತಾಲೂಕಿನ ಹೆಡತಲೆ ಗ್ರಾಮದ ನಿವಾಸಿ ಸಿದ್ದನಾಯ್ಕ ಎಂಬುವರ ಪುತ್ರ ಮಣಿಕಂಠ (25) ಸಾವನ್ನಪ್ಪಿದವರು. ನಗರ್ಲೆ ಗ್ರಾಮದ ಖಾಸಗಿ ವಿದ್ಯುತ್ ಗುತ್ತಿಗೆದಾರ ಇನಾಯತ್ ಸಿಟಿಜನ್ ಶಾಲೆ ಹಿಂಭಾಗದ ರಸ್ತೆ ವಿದ್ಯುತ್ ಕಂಬ ಸ್ಥಳಾಂತರಿಸುವ ಗುತ್ತಿಗೆ ಪಡೆದಿದ್ದು, ಗುತ್ತಿಗೆದಾರನ ಬಳಿ ಕೆಲಸ ಮಾಡುತ್ತಿದ್ದ ಮಣಿಕಂಠ, ಭಾನುವಾರ ವಿದ್ಯುತ್ ಕಂಬ ಏರಿ ವಿದ್ಯುತ್ ತಂತಿ ಬದಲಿಸುವ ವೇಳೆ ವಿದ್ಯುತ್ ಸ್ಪರ್ಶಿಸಿ ಮೃತಪಟ್ಟಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಂಜನಗೂಡು ನಗರ ಠಾಣೆ ಎಸ್‌ಐ ಚಂದ್ರ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಉತ್ತಮ ಆರೋಗ್ಯಕ್ಕೆ ಕ್ರೀಡೆ ಸಹಕಾರಿ



ಸರಗೂರು, ಡಿ.4– ಉತ್ತಮ ಆರೋಗ್ಯಕ್ಕೆ ಕ್ರೀಡೆ ಸಹಕಾರಿ ಎಂದು ಎಸ್‌ಡಿಎಂಸಿ ಅಧ್ಯಕ್ಷ ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಲಯನ್ಸ್ ಅಕಾಡೆಮಿ ಶಾಲೆ ಕ್ರೀಡಾಂಗಣದಲ್ಲಿ ನಡೆದ ಪೋಷಕರ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಒತ್ತಡದ ಬದುಕಿನಿಂದಾಗಿ ಬಹುತೇಕ ಪೋಷಕರು ಕ್ರೀಡಾ ಚಟುವಟಿಕೆಗಳಿಂದ ದೂರ ಉಳಿದಿದ್ದಾರೆ. ಹಾಗಾಗಿ ಶಾಲೆಯಲ್ಲಿ ತಮ್ಮ ಮಕ್ಕಳೊಂದಿಗೆ ಕ್ರೀಡಾಕೂಟದಲ್ಲಿ ಭಾಗವಹಿಸುವ ಮೂಲಕ ಉತ್ತಮ ಆರೋಗ್ಯ ಪಡೆಯಬಹುದಾಗಿದೆ ಎಂದರು.

ಲಯನ್ಸ್ ಟ್ರಸ್ಟಿ ಬ್ರಹ್ಮದೇವಯ್ಯ ಮಾತನಾಡಿ, ಶಿಕ್ಷಕರು ಮತ್ತು ಪೋಷಕರ ಸಹಕಾರದಿಂದ ಮಕ್ಕಳಲ್ಲಿ ಕ್ರೀಡೆಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದರು. ಕ್ರೀಡಾಕೂಟದಲ್ಲಿ ಪೋಷಕರು ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿದ್ದರು. ಈ ವೇಳೆ ಎಸ್‌ಡಿಎಂಸಿ ಅಧ್ಯಕ್ಷ ಶ್ರೀನಿವಾಸ್, ಉಪಾಧ್ಯಕ್ಷೆ ಮಾಲಾ, ನಿರ್ದೇಶಕರಾದ ದಾಸನಾಯಕ, ಬಿ.ಆರ್.ಮಂಜುನಾಥ್, ಸುರೇಂದ್ರ, ನಾಗೇಶ್, ಮಮತಾ, ಚೈತ್ರ, ಸೋಮು, ಯೋಧ ಮಂಜುನಾಥ್, ವಿ.ವಸಂತ್, ಸೋಮಶೇಖರ್, ಉಮೇಶ್, ಪ್ರಾಂಶುಪಾಲ ಬಿ.ಡಿ.ದಾಸಚಾರಿ, ಮುಖ್ಯ ಶಿಕ್ಷಕಿ ಪದ್ಮ, ಶಿಕ್ಷಕ ವೃಂದ ಪೋಷಕರು ಭಾಗವಹಿಸಿದ್ದರು.

ಕೆ. ಸ್ವರ್ಣಲತಾಗೆ ಪಿಎಚ್.ಡಿ



ಮೈಸೂರು: ಡಾ. ಬಸವರಾಜ್ ಎಸ್. ಅನಾಮಿ ಅವರ ಮಾರ್ಗದರ್ಶನದಲ್ಲಿ ಕೆ. ಸ್ವರ್ಣಲತಾ ಅವರು ಗಣಕ ಮತ್ತು ಮಾಹಿತಿ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.


ಜನಪ್ರಿಯ ನಾಯಕರು ಹಾಗೂ ಮೈಸೂರು ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ
ಶ್ರೀ ಎಸ್.ಮಾದೇಗೌಡ್ರು ರವರಿಗೆ
56ನೇ ಜನ್ಮದಿನದ ಶುಭಾಶಯಗಳು
ಶುಭಕೋರುವವರು: ಎಸ್.ರಮೇಶ್‌ಗೌಡ ಉದ್ಯಮಿಗಳು, ಮೈಸೂರು
ಫ್ಲೆಕ್ಸ್-ಡಿಜಿಟಲ್ ಪ್ರಿಂಟ್
9663725000, 0821-4054824